ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 25 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 187 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬೆಂಗಳೂರು-ಹೈದರಾಬಾದ್ ಹೆದ್ದಾರಿಯಲ್ಲಿ

ಬಸ್ ಬೆಂಕಿಗೆ 20 ಜನ ಭಸ್ಮ

ಹೈದರಾಬಾದ್: ಆಂಧ್ರಪ್ರದೇಶದ ಕರ್ನೂಲ್ ಬಳಿ ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿ ಶುಕ್ರವಾರ ಮುಂಜಾನೆ ಚಲಿಸುತ್ತಿದ್ದ ಖಾಸಗಿ ಬಸ್ ಬೆಂಕಿಗಾಹುತಿಯಾಗಿದ್ದು, ಅದರಲ್ಲಿದ್ದ 42 ಮಂದಿ ಪ್ರಯಾಣಿಕರಲ್ಲಿ ಸುಮಾರು 20 ಮಂದಿ ಪ್ರಯಾಣಿಕರು ಸಜೀವ ದಹನವಾಗಿದ್ದಾರೆ.

ಹೈದರಾಬಾದ್‌ನಿಂದ ಬೆಂಗಳೂರಿಗೆ ರಾಷ್ಟ್ರೀಯ ಹೆದ್ದಾರಿ 44ರಲ್ಲಿ ಸಂಚರಿಸುತ್ತಿದ್ದ ಖಾಸಗಿ ಟ್ರಾವೆಲ್ಸ್‌ನ ಬಸ್, ಚಿನ್ನತೇಕೂರು ಗ್ರಾಮದ ಬಳಿ ಇದ್ದಕ್ಕಿದ್ದಂತೆ ಬೆಂಕಿ ಕೆನ್ನಾಲಿಗೆಯಲ್ಲಿ ಬೆಂದು ಭಸ್ಮವಾಗಿದೆ. ನಿದ್ದೆ ಮಂಪರಿನಲ್ಲಿದ್ದ ಪ್ರಯಾಣಿಕರು ಎಚ್ಚರಗೊಳ್ಳುವಷ್ಟರಲ್ಲೇ ಬೆಂಕಿ ಜ್ವಾಲೆ ಎಲ್ಲೆಡೆ ಆವರಿಸಿದ್ದರಿಂದ ಬಸ್‌ನಲ್ಲಿದ್ದ ಒಟ್ಟು 42 ■ 6ನೇ ಪುಟಕ್ಕೆ


ಸುಟ್ಟು ಕರಕಲಾಗಿರುವ ಖಾಸಗಿ ಬಸ್.

ಡಾ. ಯತೀಂದ್ರ ಉತ್ತರಾಧಿಕಾರಿ ಹೇಳಿಕೆಯಿಂದ ಡಿಸಿಎಂ ಡಿ.ಕೆ. ಶಿವಕುಮಾರ್ ಅಲರ್ಟ್

ವರಿಷ್ಠರ ಮುಂದೆ ಪ್ರಸ್ತಾಪಿಸಲು ನಿರ್ಧಾರ



ಬೆಂಗಳೂರು, ಅ.24(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ನೀಡಿರುವ ನಾಯಕತ್ವ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿರುವ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಲ್ಲವನ್ನೂ ವರಿಷ್ಠರ ಗಮನಕ್ಕೆ ತರುವುದಾಗಿ ಹೇಳಿದ್ದಾರೆ.


ಡಾ.ಯತೀಂದ್ರ

ಅವರ ಹೇಳಿಕೆಗೆ ನಾನು ಸಾರ್ವಜನಿಕವಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಸಿದ್ದರಾಮಯ್ಯ ನಂತರ ಸತೀಶ್ ಜಾರಕಿಹೊಳಿ ನಮ್ಮ ನಾಯಕ ಎಂಬ ಹೇಳಿಕೆ ನೀಡಿರುವ ವಿಚಾರವನ್ನು ಯಾರ ಬಳಿ ಪ್ರಸ್ತಾಪಿಸಬೇಕೋ, ಅಲ್ಲಿಯೇ ಪ್ರಸ್ತಾಪಿಸುವುದಾಗಿ ತಿಳಿಸಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಸ್ತು ನಮ್ಮ ಪಕ್ಷದ ಆದ್ಯತೆ. ಈ ವಿಚಾರದಲ್ಲಿ ಬೇರೆಯವರಂತೆ ನಾನು ಮಾತನಾಡಲಾಗದು.

ನಾಯಕತ್ವ ವಿಚಾರ ಕುರಿತಂತೆ ಬಹಿರಂಗವಾಗಿ ಯಾರೂ ಹೇಳಿಕೆ ನೀಡಬಾರದೆಂದು ಎಐಸಿಸಿ ಆಗಿಂದಾಗ್ಗೆ ಕಟ್ಟಾದೇಶ ಮಾಡಿದೆ. ಅದರ ನಡುವೆಯೂ ಹೇಳಿಕೆ ನೀಡಿದ ಕೆಲವರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಯತೀಂದ್ರ, ನಾಯಕತ್ವದ ಬಗ್ಗೆ ಪ್ರಸ್ತಾಪಿಸಿರುವುದನ್ನು ವರಿಷ್ಠರು ಗಮನಿಸಿರುತ್ತಾರೆ. ನಾನು ರಾಜ್ಯಾಧ್ಯಕ್ಷನಾಗಿ ಏನು ಹೇಳಬೇಕೋ, ಅದನ್ನು ಸೂಕ್ತ ವೇದಿಕೆಯಲ್ಲಿ ಹೇಳುತ್ತೇನೆ ಎಂದಿದ್ದಾರೆ. ಶಿವಕುಮಾರ್ ಹೇಳಿಕೆ ಬೆನ್ನಲ್ಲೇ ಸರ್ಕಾರ ಮತ್ತು ಪಕ್ಷದಲ್ಲಿ ಗೊಂದಲ ಸೃಷ್ಟಿಸುವ ಹೇಳಿಕೆಗಳನ್ನು ನೀಡುವುದು ಸರಿಯಲ್ಲ ಎಂದು ಅವರ ಆಪ್ತ ಶಾಸಕರು ಮುಖ್ಯಮಂತ್ರಿ ■ 6ನೇ ಪುಟಕ್ಕೆ

ಮಕ್ಕಳು ಸೇರಿ ಒಂದೇ ಕುಟುಂಬದ ನಾಲ್ವರು ದುರ್ಮರಣ

ಹೈದರಾಬಾದ್: ಕರ್ನೂಲ್ ಬಸ್ ದುರಂತದಲ್ಲಿ ಬೆಂಗಳೂರಿನಲ್ಲಿ ನೆಲೆಸಿದ್ದ ನೆಲ್ಲೂರು ಜಿಲ್ಲೆಯ ಒಂದೇ ಕುಟುಂಬದ ನಾಲ್ವರು ಸಜೀವ ದಹನವಾಗಿದ್ದಾರೆ.



ಮೃತರನ್ನು ಗೊಲ್ಲ ರಮೇಶ್(35), ಅನುಷಾ (30), ಮಾನ್ವಿತಾ(10) ಹಾಗೂ ಮನೀಶ್(12) ಎಂದು ಗುರುತಿಸಲಾಗಿದೆ. ಈ ಬಸ್‌ನಲ್ಲಿ ನಿದ್ರೆಯ ಮಂಪರಿನಲ್ಲಿದ್ದ ನತದೃಷ್ಟ ಕುಟುಂಬ ಚಿರನಿದ್ರೆಗೆ ಜಾರಿದೆ. ಇವರು ಮೂಲತಃ ನೆಲ್ಲೂರು ಜಿಲ್ಲೆಯ ವಿಂಜಾಮೂರು ಮಂಡಲದ ಗೊಲ್ಲವರಿಪಳ್ಳಿಯವರು. ವಿಷಯ ತಿಳಿದು ಗೊಲ್ಲವರಿಪಳ್ಳಿಯ ಕುಟುಂಬದಲ್ಲಿ ಆಕ್ರಂದನ ಮುಗಿಲುಮುಟ್ಟಿದೆ. ಪ್ರಾಥಮಿಕ ಮಾಹಿತಿ ಪ್ರಕಾರ ಗೊಲ್ಲ ರಮೇಶ್ ಕುಟುಂಬ ದೀಪಾವಳಿ ಹಬ್ಬ ಆಚರಣೆಗೆ ನೆಲ್ಲೂರಿಗೆ ತೆರಳಿತ್ತು ಎನ್ನಲಾಗಿದೆ.

ಮೊಬೈಲ್ ಫೋನ್‌ಗಳು ಒಟ್ಟಾಗಿ ಸ್ಫೋಟಿಸಿದ್ದೂ ಕಾರಣ?

ಹೈದರಾಬಾದ್: ಶುಕ್ರವಾರ ಮುಂಜಾನೆ ಸಂಭವಿಸಿದ ಕರ್ನೂಲ್ ಬಸ್ ದುರಂತಕ್ಕೆ ಕಾರಣವಾದ ಮತ್ತೊಂದು ಸ್ಫೋಟಕ ಅಂಶ ಬೆಳಕಿಗೆ ಬಂದಿದ್ದು, ಭಾರೀ ಪ್ರಮಾಣದಲ್ಲಿ ಬೆಂಕಿ ವ್ಯಾಪಿಸಲು ಬೆಂಗಳೂರಿಗೆ ಸಾಗಿಸುತ್ತಿದ್ದ 100ಕ್ಕೂ ಹೆಚ್ಚು ಮೊಬೈಲ್ ಫೋನ್‌ಗಳು ಒಟ್ಟಾಗಿ ಸ್ಫೋಟಿಸಿದ್ದೂ ಕಾರಣ ಎಂದು ಆಂಧ್ರಪ್ರದೇಶ ಅಗ್ನಿಶಾಮಕ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆಂದು ಹೇಳಲಾಗುತ್ತಿದೆ.

ಅಧಿಕಾರಿಗಳು ಹೇಳುವಂತೆ ದುರಂತಕ್ಕೀಡಾದ ಬಸ್‌ನ ಹಿಂದಿನ ಸೀಟುಗಳ ಕೆಳಗೆ ಹೊಸ ಮೊಬೈಲ್ ಫೋನ್‌ಗಳನ್ನ ಇಡಲಾಗಿತ್ತು. ಬೆಂಕಿ ಹೊತ್ತಿಕೊಂಡು ಶಾಖ ಹೆಚ್ಚಾದಾಗ ಅಲ್ಲಿದ್ದ 100ಕ್ಕೂ ಹೆಚ್ಚು ಹೊಸ ಫೋನ್‌ಗಳು ಒಮ್ಮೆಲೆ ಸ್ಫೋಟಗೊಂಡಿವೆ. ಹಿಂದಿನ ಸೀಟುಗಳ ಕೆಳಗೆ ಹಾನಿಯಾಗಿದ್ದ ನಿರ್ದಿಷ್ಟ ಬ್ರ್ಯಾಂಡ್‌ನ ಹ್ಯಾಂಡ್‌ಸೆಟ್‌ಗಳ ಬಿಡಿಭಾಗಗಳನ್ನ ನೋಡಿ ನಮಗೇ ಆಶ್ಚರ್ಯವಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಬೆಂಗಳೂರಿನ ಗ್ರಾಹಕರೊಬ್ಬರಿಗೆ ತಲುಪಿಸಲು 100ಕ್ಕೂ ಹೆಚ್ಚು ಹ್ಯಾಂಡ್‌ಸೆಟ್‌ಗಳನ್ನ ಲಗೇಜ್ ಜಾಗದಲ್ಲಿ ಇರಿಸಲಾಗಿತ್ತು. ■ 6ನೇ ಪುಟಕ್ಕೆ

ಶಕ್ತಿಶಾಲಿ ಕೃತಿಗಳ ಮೂಲಕ ಸಾಹಿತಿಗಳ ನೆನಪು ಬಹು ವರ್ಷ ಉಳಿಯಬೇಕು

- ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಭಿಪ್ರಾಯ
- ಡಾ.ಎನ್.ಎಸ್.ತಾರಾನಾಥ್‌ರಿಗೆ ಡಾ. ಎಂ.ಎಂ. ಕಲ್ಬುರ್ಗಿ ಶಾಸ್ತ್ರೀಯ ಪ್ರಶಸ್ತಿ ಪ್ರದಾನ



ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಶುಕ್ರವಾರ ಹಿರಿಯ ಸಂಶೋಧಕ ಡಾ.ಎನ್.ಎಸ್.ತಾರಾನಾಥ್ ಅವರಿಗೆ ಡಾ.ಎಂ.ಎಂ.ಕಲ್ಬುರ್ಗಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಅ.24(ಬಿಎಲ್‌ಯು)– ಸಾಹಿತಿಗಳ ನೆನಪು ವರ್ಷ ಕಳೆದಂತೆ ಮರೆಯಾಗದೆ ಅವರ ಶಕ್ತಿಶಾಲಿ ಕೃತಿಗಳ ಮೂಲಕ ಹೆಚ್ಚು ಜನರನ್ನು ತಲುಪಬೇಕು ಎಂದು ಹಿರಿಯ ವಿದ್ವಾಂಸ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರು ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಇಂದು ಹಿರಿಯ ಸಂಶೋಧಕ ಡಾ.ಎನ್.ಎಸ್. ತಾರಾನಾಥ್ ಅವರಿಗೆ ಡಾ.ಎಂ.ಎಂ. ಕಲ್ಬುರ್ಗಿ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಯಾವುದೇ ಬರಹಗಾರನ ಕೃತಿಗಳು ಹೆಚ್ಚು ಕಾಲ ಬದುಕಬೇಕು. ಅಲ್ಲದೆ ವ್ಯಾಪಕವಾಗಿ ಹೆಚ್ಚು ಜನರನ್ನು ತಲುಪಿ ಸಮಾಜಕ್ಕೆ ಅನುಕೂಲಕರವಾಗಬೇಕು ಎಂದು ಹೇಳಿದರು.

ಕಲ್ಬುರ್ಗಿ ಅವರು ನನಗಿಂತ 5 ವರ್ಷ ಚಿಕ್ಕವರು. ಆದರೆ ಅಪಾರ ಸಾಹಿತ್ಯ ಸಂಶೋಧನೆ, ಸಾಹಿತ್ಯ ವಿಶ್ಲೇಷಣೆ, ಸಾಮಾಜಿಕ ವಿಮರ್ಶೆ ಮೂಲಕ ಹೆಚ್ಚು ಪ್ರಸಿದ್ಧಿ ಪಡೆದಿದ್ದರು. ಆದರೆ ಕೆಲವರಿಗೆ ಇದೆ ಕಷ್ಟವಾಯಿತು ಎಂದು ಡಾ.ವೆಂಕಟಾಚಲ ಶಾಸ್ತ್ರಿ ಅವರು ಬೇಸರ ವ್ಯಕ್ತಪಡಿಸಿದರು.

ಯಾವುದೇ ರೀತಿಯ ಸಂಶೋಧನೆ ಸಮಾಜಕ್ಕೆ ಉಪಯುಕ್ತವಾಗಬೇಕು, ಅನುಕೂಲಕರವಾಗಬೇಕು. ಇಂತಹ ಅಂತಃರಂಗದ ವಿಶ್ಲೇಷಣೆಯನ್ನು ಕಲ್ಬುರ್ಗಿಯವರು ಮಾಡುತ್ತಿದ್ದರು ಎಂದು ಹೇಳಿದರು.

ಸಂಶೋಧನೆಗಳ ಮೂಲಕ ಸಾಹಿತಿ ಜನರ ಮನಸ್ಸಿನಲ್ಲಿ ಉಳಿಯುತ್ತಾನೆ. ಈ ಹಿನ್ನೆಲೆಯಲ್ಲಿ ನಿಘಂಟು ಸೇರಿದಂತೆ ಬಹಳಷ್ಟು ಸಾಹಿತ್ಯಗಳು ಅಂದು ಸೃಷ್ಟಿಯಾಗುತ್ತಿದ್ದವು ಎಂದರು.

ಸಾಹಿತ್ಯ ರಚನೆಗೆ ಭಾವನೆ ಹಾಗೂ ಆತ್ಮವಿಶ್ವಾಸ ಅತ್ಯಗತ್ಯ. ಆದರೆ ಇದು ಅತಿಯಾಗಿ ದುರಂಹಕಾರವಾಗಿ ಪರಿವರ್ತನೆಗೊಳ್ಳಬಾರದು ಎಂದು ಡಾ.ವೆಂಕಟಾಚಲಶಾಸ್ತ್ರಿ ಕಿವಿಮಾತು ಹೇಳಿದರು.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಡಾ.ಎನ್.ಎಂ.ತಳವಾರ ಅವರು ಅಭಿನಂದನಾ ನುಡಿಗಳನ್ನಾಡಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಡಾ.ಎನ್.ಕೆ.ಲೋಲಾಕ್ಷಿ ಅಧ್ಯಕ್ಷತೆ ವಹಿಸಿದ್ದ ಸಮಾರಂಭದ ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಧಾರವಾಡದ ಡಾ.ಎಂ.ಎಂ. ಕಲ್ಬುರ್ಗಿ ರಾಷ್ಟ್ರೀಯ ಪ್ರಶಸ್ತಿ ಪ್ರತಿಷ್ಠಾನದ ಸದಸ್ಯರಾದ ಡಾ.ಸಿದ್ದನಗೌಡ ಪಾಟೀಲ, ಶ್ರೀವಿಜಯ ಎಂ.ಕಲ್ಬುರ್ಗಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಿನ ಕೆರೆಗಳ ಸಂರಕ್ಷಿಸಿ; ಸೈಕಲ್ ಬಳಕೆ ಮೂಲಕವೂ ಪರಿಸರ ಸಂರಕ್ಷಣೆಗೆ ಕೈ ಜೋಡಿಸಿ

- ಪರಿಸರ ಪ್ರಜ್ಞೆಯುಳ್ಳ ವಿದ್ಯಾರ್ಥಿಗಳ ಒಕ್ಕೊರಲ ಆಗ್ರಹ
- ಮೈಸೂರು ಪರಿಸರ ಸಂರಕ್ಷಣೆ ವಿಚಾರವಾಗಿ ಸಮಾಲೋಚನಾ ಸಭೆ



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಮೈಸೂರು ಜಿಲ್ಲೆಯ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ' ಕುರಿತು ಸಮಾಲೋಚನಾ ಸಭೆಯನ್ನು ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಸಾಂಬಶಿವಯ್ಯ ಉದ್ಘಾಟಿಸಿದರು.

ಮೈಸೂರು, ಅ.24(ಎಂಟಿವೈ)– ಮೈಸೂರಿನ ಪ್ರಮುಖ ಕೆರೆಗಳಾದ ಕುಕ್ಕರಹಳ್ಳಿ, ಲಿಂಗಾಂಬುಧಿ, ಕಾರಂಜಿ ಹಾಗೂ ಉಂಡುಬತ್ತಿ ಕೆರೆಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು. ಜೊತೆಗೆ ಮೈಸೂರಲ್ಲಿ ಸೈಕಲ್‌ಗಳ ಬಳಕೆಗೂ ಆದ್ಯತೆ ನೀಡಬೇಕು. ಇದರೊಂದಿಗೆ ಪರಿಸರ ಸಂರಕ್ಷಣೆಗೆ ಹೆಚ್ಚಿನ ಒತ್ತು ನೀಡುವಂತೆ ಪರಿಸರ ಪ್ರಜ್ಞೆಯುಳ್ಳ ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಾಲೇಜು ಸಭಾಂಗಣದಲ್ಲಿ ಶುಕ್ರವಾರ ಗ್ರಾಮೀಣ ಶಿಕ್ಷಾ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ), ಜೆಎಸ್‌ಎಸ್ ಕಾಲೇಜಿನ ಸಮಾಜಕಾರ್ಯ ಅಧ್ಯಯನ ವಿಭಾಗ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಹಾಗೂ ಕರ್ನಾಟಕ ಸ್ಟೇಟ್ ಯೂತ್ ನೆಟ್ ವರ್ಕ್ ಸಹಯೋಗದೊಂದಿಗೆ ಆಯೋಜಿಸಿದ್ದ 'ಮೈಸೂರು ಜಿಲ್ಲೆಯ ಪರಿಸರ ಸಂರಕ್ಷಣೆಯಲ್ಲಿ ಸರ್ಕಾರ ಹಾಗೂ ಸಾರ್ವಜನಿಕರ ಪಾಲ್ಗೊಳ್ಳುವಿಕೆ' ಕುರಿತ ಸಮಾಲೋಚನಾ ಸಭೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಮೈಸೂರಿನ ಕೆರೆಗಳ ಸಂರಕ್ಷಣೆಗೆ ಆದ್ಯತೆ ನೀಡುವಂತೆ ಒತ್ತಾಯ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಸಾಂಬಶಿವಯ್ಯ ಮಾತನಾಡಿ, ಇಂತಹ ಕಾರ್ಯಕ್ರಮ ಪರಿಸರ ಸಂರಕ್ಷಣೆಯ ಬದ್ಧತೆಯನ್ನು ಪ್ರತಿನಿಧಿಸುತ್ತದೆ. ಪರಿಸರದಲ್ಲಿ ಶುದ್ಧ ಜಲ ಸೇರಿದಂತೆ ನೈಸರ್ಗಿಕ ಶಕ್ತಿಯನ್ನು ನಾವು ಇನ್ನಾದರೂ ಮಿತ ಹಾಗೂ ಜವಾಬ್ದಾರಿಯುತ ಬಳಕೆಗೆ ಪಣ ತೊಡಬೇಕು. ಆ ಮೂಲಕ ಪರಿಸರ ಮಾಲಿನ್ಯ ತಡೆಗಟ್ಟುವುದರೊಂದಿಗೆ ಪರಿಸರದ ಮೇಲಿನ ಹಾನಿ ತಡೆಗೆ ಎಲ್ಲರೂ ಶ್ರಮಿಸಬೇಕು ಎಂದರು.

ನವೀಕರಿಸಬಹುದಾದ ಶಕ್ತಿ ಬಳಕೆಗೆ ಜನ ಮುಂದಾಗಬೇಕು. ಪ್ರಸ್ತುತ ಮೈಸೂರಿನಲ್ಲಿ ಸೌರಶಕ್ತಿ ಬಳಕೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಈಗ ಮೈಸೂರಲ್ಲಿ 40 ಮೆಗಾವ್ಯಾಟ್ ಸೌರಶಕ್ತಿ ಬಳಕೆಯಾಗುತ್ತಿರುವ ಮಾಹಿತಿ ಇದೆ. ಮೈಸೂರಿನಲ್ಲಿ ನವೀಕರಿಸಬಹುದಾದ ಶಕ್ತಿಯ ಬಳಕೆ ಶೇ.63ರಷ್ಟಾಗಿರುವುದು ರಾಜ್ಯದ ಪರಿಸರ ಸ್ನೇಹಿ ಬೆಳವಣಿಗೆಗಳಿಗೆ ಒಂದು ಉತ್ತಮ ಉದಾಹರಣೆ ಎಂದು ಹೇಳಿದರು.

ಆರ್‌ಎಲ್‌ಹೆಚ್‌ಪಿ ಸಂಸ್ಥೆಯ ನಿರ್ದೇಶಕಿ ಸರಸ್ವತಿ ಮಾತನಾಡಿ, ಕಳೆದ 40 ವರ್ಷಗಳಿಂದ ಆರ್‌ಎಲ್‌ಹೆಚ್‌ಪಿ ಸಂಸ್ಥೆ ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ ಕಾರ್ಯ ನಿರ್ವಹಿಸುತ್ತಿದ್ದು ಮೈಸೂರು, ಗುಂಡ್ಲುಪೇಟೆ, ಗುಲ್ಬರ್ಗ ಮತ್ತು ಬೀದರ್ ಸೇರಿದಂತೆ ವಿವಿಧೆಡೆ 40 ಯುವಕರ ಗುಂಪುಗಳನ್ನು ರಚಿಸಿದೆ. ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಯೂತ್‌ನೆಟ್ವರ್ಕ್ ಗುಂಪು ರಚನೆಯಾಗಿದೆ. ಯುವಜನರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮಗಳು, ಪರಿಸರ ಸಂಬಂಧಿತ ಕಾರ್ಯಕ್ರಮಗಳು, ಸಾವಯವ ಗೊಬ್ಬರಗಳ ಬಳಕೆ, ಪ್ಲಾಸ್ಟಿಕ್ ಬಳಕೆಯ ನಿಷೇಧ, ಘನತ್ಯಾಜ್ಯ ಘಟಕ, ಜಾಗತಿಕ ತಾಪಮಾನ ಹಾಗೂ ಪ್ರಕೃತಿ ವಿಕೋಪ ಹೀಗೆ ಹಲವಾರು ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಮಕ್ಕಳು, ಮಹಿಳೆಯರು, ಯುವಜನರು ಮತ್ತು ಸಮುದಾಯಕ್ಕೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುತ್ತಿದ್ದು, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದರು.

ಪರಿಸರ ಕಾಳಜಿಯುಳ್ಳವರಿಗೆ ವ್ಯಕ್ತವಾದ ಹಕ್ಕೊತ್ತಾಯ: ಇದೇ ವೇಳೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿಗಳು ಮೈಸೂರಿನ ಕುಕ್ಕರಹಳ್ಳಿ ಕೆರೆ, ಕಾರಂಜಿ ಕೆರೆ, ಲಿಂಗಾಂಬುಧಿ ಕೆರೆ, ಉಂಡುಬತ್ತಿ ಕೆರೆ ಮಲೀನಗೊಳ್ಳುತ್ತಿವೆ. ಕೆರೆಗಳಿಗೆ ಒಳಚರಂಡಿ ನೀರು ಸೇರದಂತೆ ಕ್ರಮ ಕೈಗೊಳ್ಳಬೇಕು. ಕೆರೆಗಳ ಹೂಳೆತ್ತಿಸಬೇಕು. ಮೈಸೂರಲ್ಲಿ ಸೈಕಲ್‌ಗಳ ಬಳಕೆಗೆ ಹೆಚ್ಚಿನ ಒತ್ತು ನೀಡಿ, ಪ್ರೋತ್ಸಾಹಿಸಬೇಕು. ಸಾರ್ವಜನಿಕ ಸಾರಿಗೆ ಬಳಸುವಂತೆ ಅರಿವು ಮೂಡಿಸಬೇಕು. ಹೊಸದಾಗಿ ನಿರ್ಮಾಣಗೊಳ್ಳುವ ಎಲ್ಲಾ ಕಟ್ಟಡಗಳಲ್ಲಿಯೂ ಮಳೆ ನೀರು ಕೊಯ್ಲು ಕಡ್ಡಾಯಗೊಳಿಸಬೇಕು. ನಗರದ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಮರ ಕಡಿಯುತ್ತಿರುವುದನ್ನು ನಿಲ್ಲಿಸಬೇಕು. ವಾಯು ಮಾಲಿನ್ಯ ತಪ್ಪಿಸಲು ನಗರದಲ್ಲಿ ಮತ್ತು ಚಾಮುಂಡಿ ಬೆಟ್ಟಕ್ಕೆ ವಿದ್ಯುತ್ ಚಾಲಿತ ಬಸ್ ಸೇವೆ ಆರಂಭಿಸಬೇಕು. ಪ್ರವಾಸಿ ತಾಣಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ನಿಷೇಧಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಮಮತ ವೈ.ಎನ್, ಕೃಷಿ ಅಧಿಕಾರಿ ವೆಂಕಟೇಶ್, ಕೃಷಿ ಇಲಾಖೆ, ಲೇಖಕಿ ಕುಸುಮಾ ಆಯರಹಳ್ಳಿ, ಪ್ರವಾಸೋದ್ಯಮ ಇಲಾಖೆಯ ಹೇಮಲತಾ, ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಪ್ರಭು, ಸಮಾಜಕಾರ್ಯ ವಿಭಾಗದ ಮುಖ್ಯಸ್ಥ ಡಾ. ಸೋಮಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಕಲಿ ಕಂಪನಿಗೆ ಹೂಡಿಕೆ ಮಾಡಿ 13.15 ಲಕ್ಷ ಕಳೆದುಕೊಂಡ ಮೈಸೂರು ಹೆಬ್ಬಾಳು ನಿವಾಸಿ

ಮೈಸೂರು, ಅ.24– ನಕಲಿ ಕಂಪನಿಗೆ ಹೂಡಿಕೆ ಮಾಡಿ ವ್ಯಕ್ತಿಯೊಬ್ಬರು 13.15 ಲಕ್ಷ ಹಣ ಕಳೆದುಕೊಂಡಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಹೆಬ್ಬಾಳು ನಿವಾಸಿ, ಫೇಸ್ ಬುಕ್‌ನಲ್ಲಿ ಕಂಡ ಜಾಹಿರಾತು ನಂಬಿ ಮೋಸ ಹೋಗಿದ್ದಾರೆ. ಎರಡು ದಶಕಗಳ ಸೇವಾ ಹಿನ್ನೆಲೆಯುಳ್ಳ ಕಂಪನಿ ಹೆಸರಿನಲ್ಲಿ ವಂಚಕರು ಬಲೆ ಬೀಸಿದ್ದಾರೆ. ನಕಲಿ ಜಾಹೀರಾತು ವೀಕ್ಷಿಸಿ, ಹೂಡಿಕೆ ಬಗ್ಗೆ ವಿಚಾರಿಸಿದ ಕೂಡಲೇ ಈ ವ್ಯಕ್ತಿಯ ಮೊಬೈಲ್ ನಂಬರ್ ಅನ್ನು ವಾಟ್ಸಾಪ್ ಗ್ರೂಪ್‌ಗೆ ಸೇರ್ಪಡೆ ಮಾಡಿ, ನಂತರ ಖೆಡ್ಡಾ ತೋಡಿದ್ದಾರೆ.

ಹೂಡಿಕೆಯಿಂದ ಭಾರೀ ಲಾಭ ಪಡೆಯಬಹುದೆಂಬ ಆಮಿಷ ನಂಬಿದ ವ್ಯಕ್ತಿ, ಹಂತ ಹಂತವಾಗಿ ಲಕ್ಷಾಂತರ ರೂ. ಹಣ ಹೂಡಿದ್ದಾರೆ. ನಂತರ ಅಧಿಕ ಲಾಭಾಂಶ ಬಂದಿದೆ ಎಂದು ತೋರಿಸಿ, ಮತ್ತಷ್ಟು ಹಣ ಪೀಕಲು ಯತ್ನಿಸಿದ್ದಾರೆ. ಅಷ್ಟರಲ್ಲಿ ಈ ವ್ಯಕ್ತಿ, ಲಾಭಾಂಶದ ಹಣ ವಿತ್‌ಡ್ರಾ ಮಾಡಲು ಮುಂದಾದಾಗಲೂ ಹಣ ಪಾವತಿಗೆ ಬೇಡಿಕೆ ಇಟ್ಟಿದ್ದಾರೆ. ಇದರಿಂದ ಮೋಸ ಹೋಗಿರುವುದು ಅರಿವಾಗಿ, ಸೆನ್ ಪೊಲೀಸರ ಮೊರೆ ಹೋಗಿದ್ದಾರೆ.

ಕಲಾಕುಂಚ ಮೈಸೂರು ಶಾಖೆ ಅಧ್ಯಕ್ಷರಾಗಿ ಡಾ. ನಾಗರಾಜ್ ವಿ. ಬೈರಿ

ಮೈಸೂರು, ಅ. 24– ದಾವಣಗೆರೆಯ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಮೈಸೂರು ಶಾಖೆಯ ಅಧ್ಯಕ್ಷರಾಗಿ ಡಾ. ನಾಗರಾಜ್ ವಿ. ಬೈರಿ ಆಯ್ಕೆಯಾಗಿದ್ದಾರೆ ಎಂದು ಕಲಾಕುಂಚದ ಸಂಸ್ಥಾಪಕರಾದ ಸಾಲಿಗ್ರಾಮ ಗಣೇಶ್ ಶೆಣೈ ತಿಳಿಸಿದ್ದಾರೆ.



ಡಾ. ನಾಗರಾಜ್ ವಿ. ಬೈರಿ

ಉಪಾಧ್ಯಕ್ಷರಾಗಿ ನ.ಗಂಗಾಧರಪ್ಪ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಸಂಗೀತ ಪ್ರಸನ್ನ ನಾಡಿಗ್, ಖಜಾಂಚಿಯಾಗಿ ಪಿ.ಸಿದ್ದೇಶ್ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚಂದ್ರಶೇಖರ್, ಸಂತೋಷ್‌ಕುಮಾರ್, ಪ್ರಭು ಕೆ., ವೆಂಕಟೇಶ್ ಎಸ್.ವೆಂಕಟೇಶ್, ಮಹಾದೇವ್, ಶ್ರೀಮತಿ ವಂದನಾ ಶ್ರೀಧರ್ ನಾಯಕ್, ಮಹಾಬಲೇಶ್ವರ ಬೈರಿ ಆಯ್ಕೆಯಾಗಿದ್ದಾರೆ. ಸದ್ಯದಲ್ಲೇ ಕಲಾಕುಂಚ ಮೈಸೂರು ಶಾಖೆ ಉದ್ಘಾಟನೆಯ ಜೊತೆಗೆ 2025–26ನೇ ಸಾಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಪರೀಕ್ಷೆಯ ಪೂರ್ವಭಾವಿ ಸಿದ್ಧತಾ ಉಚಿತ ಕಾರ್ಯಾಗಾರ ನಡೆಯಲಿದೆ ಎಂದು ದಾವಣಗೆರೆಯ ಕಲಾಕುಂಚದ ಪ್ರಧಾನ ಕಾರ್ಯದರ್ಶಿ ಕೆ. ಸಿ. ಉಮೇಶ್ ಪ್ರಕಟಿಸಿದ್ದಾರೆ.

ನಾಳೆ ಮೈಸೂರಲ್ಲಿ ಉಚಿತ ನೇತ್ರ ತಪಾಸಣೆ

ಮೈಸೂರು,ಅ.24(ಜಿಎ)–ರೋಟರಿ ಜಯಪ್ರಕಾಶ್ ನಗರ, ಕೃಷ್ಣರಾಜ ರೋಟರಿ, ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್, ಸ್ನೇಹನಿಧಿ ಪತ್ತಿನ ಸಹಕಾರ ಸಂಘಗಳ ಸಂಯುಕ್ತಾಶ್ರಯದಲ್ಲಿ ಅ.26 ಬೆಳಗ್ಗೆ 8ಗಂಟೆಯಿಂದ ಮಧ್ಯಾಹ್ನ 12ರವರೆಗೆ ಜೆ.ಪಿ. ನಗರ ಸ್ಪೋರ್ಟ್ಸ್ ಕ್ಲಬ್ ಆವರಣದಲ್ಲಿ ಉಚಿತ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರೋಟರಿ ಅಧ್ಯಕ್ಷ ರವಿಶಂಕರ್ ಈ ವಿಷಯ ತಿಳಿಸಿ, ಚಾಮುಂಡಿಪುರಂ, ರಮಾಬಾಯಿ ನಗರ, ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದ ಜನತೆಗೆ ಇದರಿಂದ ಪ್ರಯೋಜನವಾಗಲಿದೆ. ಕಣ್ಣಿನ ಶಸ್ತ್ರ ಚಿಕಿತ್ಸೆ ಅಗತ್ಯವಿರುವವರನ್ನು ಕೊಯಮತ್ತೂರಿಗೆ ಕರೆದೊಯ್ದು ಉಚಿತವಾಗಿ ನೆರವೇರಿಸಲಾಗುವುದು. ಸುಮಾರು 200 ಮಂದಿ ಇದರ ಪ್ರಯೋಜನ ಪಡೆಯುವ ನಿರೀಕ್ಷೆಯಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಚಲುವಯ್ಯ, ಡಾ.ನಾಗರಾಜ್, ಚಂದ್ರ, ಜೆ.ವೆಂಕಟೇಶ್ ಉಪಸ್ಥಿತರಿದ್ದರು.

ಹೆಣ್ಣು ಭ್ರೂಣ ಹತ್ಯೆ ಪ್ರಕರಣ: ಬಿರುಸುಗೊಂಡ ತನಿಖೆ

ಮೈಸೂರು, ಅ.24(ಬಿಎಲ್‌ಯು)– ಮೈಸೂರಿನ ಹುನಗನಹಳ್ಳಿಯ ಐಷರಾಮಿ ಬಂಗಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಬಗ್ಗೆ ಪೊಲೀಸರು ತನಿಖೆ ಚುರುಕುಗೊಳಿಸುತ್ತಿದ್ದಾರೆ. ಪ್ರಕರಣದ ಆರೋಪಿಗಳಾದ ನರ್ಸ್ ಶ್ಯಾಮಲಾ, ಈಕೆಯ ಸಹೋದರ ಗೋವಿಂದರಾಜು, ಭ್ರೂಣ ಲಿಂಗ ಪತ್ತೆಗೆ ಬಂದಿದ್ದ ಗರ್ಭಿಣಿಯರ ಪತಿ ಹರೀಶ್ ನಾಯಕ್ ಹಾಗೂ ಶಿವಕುಮಾರ್ ಅವರನ್ನು ಪೊಲೀಸರು ನ್ಯಾಯಾಲಯದ ಮುಂದೆ ಹಾಜರುಪಡಿ ಸಿದ್ದರು. ನ್ಯಾಯಾಧೀಶರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹೆಣ್ಣು ಭ್ರೂಣ ಪತ್ತೆ ಜಾಲದಲ್ಲಿ ಪುಟ್ಟರಾಜು ಎಂಬಾತನೇ ಕಿಂಗ್ ಪಿನ್ ಎಂದು ಶ್ಯಾಮಲಾ ಹಾಗೂ ಗೋವಿಂದರಾಜು ತನಿಖೆ ವೇಳೆ ಪೊಲೀಸರಿಗೆ ಹೇಳಿಕೆ ನೀಡಿದ್ದಾರೆ.

ಆರೋಪಿಗಳು ನೀಡಿದ ಮಾಹಿತಿಯನ್ನು ಕಲೆ ಹಾಕಿರುವ ಪೊಲೀಸರು ಇವರ ಮೊಬೈಲ್ ಫೋನ್ ಸಿಡಿಆರ್ ಸೇರಿದಂತೆ ಇತರೆ ಸಾಕ್ಷ್ಯಗಳನ್ನು ಕಲೆ ಹಾಕುತ್ತಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣಗೌಡರ ಅಧಿಕಾರ ಅಂತ್ಯ

ಮೈಸೂರು, ಅ.24(ಎಸ್‌ಪಿಎನ್)– ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಕೆ.ನಾಗಣ್ಣಗೌಡ ಅವರ ಅಧಿಕಾರಾವಧಿ ಮುಕ್ತಾಯವಾಗಿರುವ ಹಿನ್ನಲೆಯಲ್ಲಿ ಅಧ್ಯಕ್ಷ ಸ್ಥಾನದಿಂದ ಬಿಡುಗಡೆಗೊಳಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧೀನ ಕಾರ್ಯದರ್ಶಿ(3) ಉಮಾದೇವಿ ಶುಕ್ರವಾರ ಆದೇಶಿಸಿದ್ದಾರೆ.

21.10.2022ರಂದು ಕೇಂದ್ರ ಮತ್ತು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧಿನಿಯಮದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 2022ರ ಅ,21ರಂದು ಕೆ.ನಾಗಣ್ಣಗೌಡ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಕಗೊಳಿಸಲಾಗಿತ್ತು. ಇದೀಗ 2025ರ ಅ.20ರಂದು ಅವರ ಅಧಿಕಾರಾವಧಿ ಮುಕ್ತಾಯಗೊಂಡಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರ ತಕ್ಷಣದಿಂದಲೇ ಜಾರಿ ಬರುವಂತೆ ಅಧ್ಯಕ್ಷ ಸ್ಥಾನದಿಂದ ಬಿಡುಗಡೆಗೊಳಿಸಿ ಆದೇಶಿಸಿದ್ದಾರೆ.

ನಿಧನ



ನೀಲಲೋಚನಸ್ವಾಮಿ ಎಂ.ಎಸ್.

ಮೈಸೂರು, ಅ. 24– ಮೈಸೂರಿನ ಶ್ರೀರಾಂಪುರ 2ನೇ ಹಂತದ ಬಿಇಎಂಎಲ್ ಬಡಾವಣೆ ನಿವಾಸಿ ನೀಲಲೋಚನಸ್ವಾಮಿ ಎಂ.ಎಸ್. (83) ಅ. 22 ರಂದು ನಿಧನರಾದರು. ಇವರು ಕರ್ನಾಟಕ ನ್ಯಾಯಾಂಗ ಇಲಾಖೆಯಲ್ಲಿ ಮೈಸೂರು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಓರ್ವ ಪುತ್ರ, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅಂದೇ ಚಾಮುಂಡಿಪುರಂನ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೋರೇಗೌಡ



ಮೈಸೂರು, ಅ. 24– ಹಿರಿಯ ವಕೀಲರು ಹಾಗೂ ಮೈಸೂರಿನ ಕೂರ್ಗಳ್ಳಿ ನಿವಾಸಿ ಬೋರೇಗೌಡ (66) ಶುಕ್ರವಾರ ನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ, ಸಹೋದರರು, ಸಹೋದರಿಯರು ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೂರ್ಗಳ್ಳಿಯ ಅವರ ತೋಟದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ರೇಣುಕಾ



ಮೈಸೂರು,ಅ.24– ಮೈಸೂರಿನ ಜಯನಗರದ ಲೇಟ್ ಪುಟ್ಟರಾಜು ಅವರ ಪತ್ನಿ ಆರ್.ರೇಣುಕಾ(67) ಅವರು ಅನಾರೋಗ್ಯದಿಂದ ಇಂದು ನಿಧನರಾದರು. ಇವರು ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ನಾಳೆ(ಶನಿವಾರ) ಮಧ್ಯಾಹ್ನ 1.30ಕ್ಕೆ ಬನ್ನಿಮಂಟಪದ ಜೋಡಿ ತೆಂಗಿನ ಮರ ರಸ್ತೆಯಲ್ಲಿರುವ ಸ್ಮಶಾನದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.10.2025 ಶನಿವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್.ಶೇಷಗಿರಿರಾವ್, 6.40 ಅರಿವಿನ ಶಿಖರ – ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಅಂಬಯ್ಯನುಲಿ ಹಾಗೂ ಮತ್ತೂರು ಕುಮಾರ ಸ್ವಾಮಿ, ವ್ಯಾಖ್ಯಾನ–ಡಾ. ಜ್ಯೋತಿ ಶಂಕರ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 9.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ನಾರಾಯಣ ಹಾಗೂ ಎಂ.ಎಸ್. ಗೌತಮ್–ಯುಗಳ ನಾದಸ್ವರ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ – ಅದಲು–ಬದಲು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ತಾರಸಿ ತೋಟದ ಪ್ರಾಮುಖ್ಯತೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮೈಸೂರಿನ ಎಂ.ಆರ್. ಗುರುಪ್ರಸಾದ್ ಹಾಗೂ ಆರ್.ಮೀನಾಕುಮಾರಿ ದಂಪತಿಗಳು, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಕುಮಾರ್ ಗೌರವ್ ಕೋಹ್ಲಿ, ಹಾಡುಗಾರಿಕೆ – ಖಯಾಲ್

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಲಕ್ವ/ಪ್ಯಾರಾಲಿಸಿಸ್, ಕಾರ್ನಿಯಾದ ಅಪಾರ ದರ್ಶಕತೆ/ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ)ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ರಾಮ್‌ಸನ್ಸ್ ಬೊಂಬೆ ಮನೆ :** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** ಆರ್ಟಿಫಿಸಿಯಲ್ ಇಂಟೆಲಿಜೆನ್ಸ್ ಅಪ್ಲಿಕೇಷನ್ಸ್ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಕಂಪ್ಯೂಟರ್ ಸೈನ್ಸ್ ವಿಭಾಗದ ಹಿರಿಯ ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರೇಚಣ್ಣ, ಸ್ಥಳ: ನವಜ್ಯೋತಿ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10 ರಿಂದ.
- **ಅನ್ನಪೂರ್ಣ ಕಣ್ಣಿನ ಆಸ್ಪತ್ರೆ :** ದೀಪಾವಳಿ ಹಬ್ಬದ ಪ್ರಯುಕ್ತ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ, ಸ್ಥಳ: ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಶಾರದಾದೇವಿನಗರ, ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ
- **ಜಾಗೃತ ಕರ್ನಾಟಕ ಮತ್ತು ದಲಿತ ವಿದ್ಯಾರ್ಥಿ ಒಕ್ಕೂಟ, ಸಂಶೋಧಕರ ಸಂಘ, ಮೈಸೂರು ವಿಶ್ವವಿದ್ಯಾನಿಲಯ, ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘ :** ಕರ್ನಾಟಕ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆ : ಚಾರಿತ್ರಿಕ ಹಿನ್ನೆಲೆ, ಅನುಷ್ಠಾನದ ಸವಾಲುಗಳು ಮತ್ತು ಪಾತ್ರ ಕುರಿತು ವಿಚಾರ ಸಂಕಿರಣ, ಉಪಸ್ಥಿತರು : ಡಾ. ಎಚ್.ವಿ. ವಾಸು, ರಾಜ್ಯ ಸಮಿತಿ ಸದಸ್ಯ ಜಿ.ಕೆ. ಮೋಹನ್, ರೈತ ಸಂಘದ ಬಡಗಲಪುರ ನಾಗೇಂದ್ರ, ನಿವೃತ್ತ ಡಿವೈಎಸ್ಪಿ ಸುಹೇಲ್ ಬೇಗ್, ಚಿಂತಕಿ ಸವಿತಾ ಪ. ಮಲ್ಲೇಶ್, ದಮನಿತ ಸಮಾಜಗಳ ಜನಪರ ವೇದಿಕೆ ಅಧ್ಯಕ್ಷ ಜಿ.ಎಂ. ಗಾಡ್ಕರ್, ದಲಿತ ವಿದ್ಯಾರ್ಥಿ ಒಕ್ಕೂಟದ ಅಧ್ಯಕ್ಷ ಪುನೀತ್ ಆಲನಹಳ್ಳಿ, ಸಂಶೋಧಕರ ಸಂಘದ ಅಧ್ಯಕ್ಷ ವರಹಳ್ಳಿ ಆನಂದ್, ವಕೀಲ ರಮೇಶ್‌ಗೌಡ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಸೆನೆಟ್ ಸಭಾಂಗಣ, ಮೈಸೂರು ವಿವಿ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಅಖಿಲ ಭಾರತೀಯ ಸಾಹಿತ್ಯ ಪರಿಷತ್ :** ಲೇಖಕಿ ಎಸ್.ಎಲ್.ವರಲಕ್ಷ್ಮೀ ಮಂಜುನಾಥ್ ಅವರ ಮೂರು ಕೃತಿಗಳ ಬಿಡುಗಡೆ ಸಮಾರಂಭ, ಕೃತಿಗಳ ಬಿಡುಗಡೆ : ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನ ಕರ್ನಾಟಕದ ಸಂಪರ್ಕ ಹಾಗೂ ಶ್ರೀಗಂಧ ವಲಯ ಪ್ರಮುಖ ಡಾ.ವಿ.ರಂಗನಾಥ್, ಕಾರ್ಯಕ್ರಮ ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಕೃತಿಗಳನ್ನು ಕುರಿತು : ನಂಜನಗೂಡು ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಕೊತ್ತಲವಾಡಿ ಶಿವಕುಮಾರ್, ವಿಜಯ ವಿಠಲ ಕಾಲೇಜಿನ ಪ್ರಾಂಶುಪಾಲ ಹೆಚ್.ಸತ್ಯಪ್ರಸಾದ್, ಅಧ್ಯಕ್ಷತೆ : ಅ.ಭಾ.ಸ.ಪದ ಜಿಲ್ಲಾ ಅಧ್ಯಕ್ಷ ಎಸ್.ಸುಬ್ರಹ್ಮಣ್ಯ, ಉಪಸ್ಥಿತರು : ಸತ್ಯನಾರಾಯಣ್, ಎಂ.ಎ.ಮಂಜುನಾಥ್, ತಗಡೂರು ಗೋಪಿನಾಥ್, ಸ್ಥಳ: ವಿಜಯ ವಿಠ್ಠಲ ಕಾಲೇಜು ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ
- **ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು), ಮೈಸೂರು ಜಿಲ್ಲಾ ಸಮಿತಿ :** ಸಿಐಟಿಯು 11ನೇ ಮೈಸೂರು ಜಿಲ್ಲಾ ಸಮ್ಮೇಳನ, ಬೆಳಗ್ಗೆ 11 ಗಂಟೆಗೆ ಮೈಸೂರು ಗನ್‌ಹೌಸ್‌ನಿಂದ ಕಾರ್ಮಿಕರ ಮೆರವಣಿಗೆ, ಬೆಳಗ್ಗೆ 11.30ಕ್ಕೆ ಹಳೇ ಶಾಂತಲ ಚಿತ್ರಮಂದಿರದ ಎದುರು ಇರುವ ಸುಬ್ಬರಾಯನ ಕೆರೆ ಮೈದಾನದಲ್ಲಿ ಬಹಿರಂಗ ಸಭೆ, ಉದ್ಘಾಟನೆ : ಸಿಐಟಿಯು ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ. ಮೀನಾಕ್ಷಿ ಸುಂದರಂ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ಹೆಚ್.ಎಸ್. ಸುನಂದ, ಕರ್ನಾಟಕ ಪ್ರಾಂತ್ಯ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಕಾ. ಜಗದೀಶ್ ಸೂರ್ಯ, ಸ್ಥಳ: ಪಂಡಿತ್ ನಾರಾಯಣಚಾರ್ಯ ಸಭಾಂಗಣ.
- **ಎಟಿಎಂಇ ಇಂಜಿನಿಯರಿಂಗ್ ಕಾಲೇಜು, ಐಇಇಇ ಕೌನ್ಸಿಲ್ ಆನ್ ಎಲೆಕ್ಟ್ರಾನಿಕ್ ಡಿಸೈನ್ ಆಟೋಮೇಷನ್ :** ಪ್ರಾಜೆಕ್ಟ್ ಸಿಂಪೋಸಿಯಂ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಯೂರೋಪಿನ ಮಾಲ್ಟಾದ ಈಕ್ವಿನಾಕ್ಸ್ ಗ್ರೂಪ್‌ನ ಸಿಇಓ ಬರ್ನಾರ್ಡ್ ಮಲಿಯಾ, ಐಇಇಇ ಸಿಇಡಿಎ, ಬೆಂಗಳೂರಿನ ಡಾ. ಪರಮೇಶಚಾರಿ ಬಿ.ಡಿ., ಐಇಇಇ ಮೈಸೂರು ಉಪ ವಿಭಾಗದ ಅಧ್ಯಕ್ಷ ಡಾ. ರವಿಚಂದ್ರ ಕುಲಕರ್ಣಿ, ಅಧ್ಯಕ್ಷತೆ : ಎಟಿಎಂಸಿಇಯ ಅಧ್ಯಕ್ಷ ಎಲ್. ಅರುಣ್ ಕುಮಾರ್, ಉಪಸ್ಥಿತರು : ಎಟಿಎಂಸಿಯ ಪ್ರಿನ್ಸಿಪಾಲ್ ಡಾ. ಬಸವರಾಜ್ ಎಲ್. ಸಂಚಾಲಕ ಡಾ. ಎಸ್.ಆರ್. ಭಾಗ್ಯಶ್ರೀ, ಡಾ. ಪಿ. ವಿನೋದ್ ಕುಮಾರ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.
- **ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ :** ಮೈಸೂರು ಜಿಲ್ಲಾ ಆರ್‌ಪಿಐ (ಅಠವಳೆ) ಸಮಾವೇಶ, ಬೆಳಗ್ಗೆ 11.30ಕ್ಕೆ ಮೈಸೂರು ಟೌನ್‌ಹಾಲ್ ಮುಂಭಾಗದ ಅಂಬೇಡ್ಕರ್ ಪ್ರತಿಮೆಯಿಂದ ಮೆರವಣಿಗೆ, ಸಮಾವೇಶ ಉದ್ಘಾಟನೆ : ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ. ಎಂ. ವೆಂಕಟಸ್ವಾಮಿ, ಅಧ್ಯಕ್ಷತೆ : ರಾಜ್ಯಾಧ್ಯಕ್ಷ ಆರ್.ಪಿ.ಐ. ಸತೀಶ್, ಸ್ಥಳ: ಜಗನ್ಮೋಹನ ಅರಮನೆ.
- **ಕರ್ನಾಟಕ ರಾಜ್ಯ ವಾಲ್ಮೀಕಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘ :** ವಾಲ್ಮೀಕಿ ಜಯಂತಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಉತ್ತಮ ಶಿಕ್ಷಕರಿಗೆ ವಾಲ್ಮೀಕಿ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಕೆ. ವಿವೇಕಾನಂದ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ವಾಲ್ಮೀಕಿ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಪಿ. ನಾಗಲಿಂಗಪ್ಪ, ಉಪಸ್ಥಿತರು : ಶಾಸಕರಾದ ಅನಿಲ್ ಚಿಕ್ಕಮಾದು, ಟಿ.ಎಸ್. ಶ್ರೀವತ್ಸ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಸ್.ಟಿ. ಜವರೇಗೌಡ, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಮುಡಾ ಎದುರು, ಮಧ್ಯಾಹ್ನ 3ಕ್ಕೆ.
- **ಕಲಾಸುರುಚಿ ಸಂಸ್ಥೆ :** ಕಥೆ ಕೇಳೋಣ ಬನ್ನಿ–903 ಕಾರ್ಯಕ್ರಮ, ಕಥೆ ಹೇಳುವವರು : ಲೇಖಕಿ ವೀಣಾ ಶಂಕರ್, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.
- **ನಾದಬ್ರಹ್ಮ ಸಂಗೀತ ಸಭಾ :** ಸಂಗೀತ ಕಲಾನಿಧಿ ಡಾ. ಮೈಸೂರು ವೀಣಾ ದೊರೆಸ್ವಾಮಿ ಅಯ್ಯಂಗಾರ್ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಜಿ. ರವಿಕಿರಣ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಆರ್. ಅಚ್ಯುತರಾವ್–ಪಿಟೀಲು, ವಿದ್ವಾನ್ ಸುನಿಲ್ ಸುಬ್ರಮಣ್ಯ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ–ಮೋರ್ಚಿಂಗ್, ಸ್ಥಳ : ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5 ರಿಂದ.
- **ಶ್ರೀ ಜನಜಾಗರಣ ಟ್ರಸ್ಟ್, 'ಮಂಥನ' ಮೈಸೂರು :** ಆರ್‌ಎಸ್‌ಎಸ್‌ನ 100 ವರ್ಷಗಳ ಸ್ಮರಣಾರ್ಥ ಇಂಡಿಯಾ ಫೌಂಡೇಷನ್ ಅಧ್ಯಕ್ಷರು, ಲೇಖಕ ಡಾ. ರಾಮ್ ಮಾಧವ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಸ್ಟಾರ್ ಆಫ್ ಮೈಸೂರ್ ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಭಾಂಗಣ, ವಿಜಯನಗರ 1ನೇ ಹಂತ, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಕೈವಲ್ಯೋಪನಿಷತ್ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರಿನ ಚಿನ್ನಾಭರಣ ಅಂಗಡಿಯಲ್ಲಿ ಕಳ್ಳತನ; ಇರಾನಿ ತಂಡದ ಕೃತ್ಯ

ಆರೋಪಿಗಳ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚನೆ

ಮೈಸೂರು, ಅ.24(ಬಿಎಲ್‌ಯು)– ಮೈಸೂರು ನಗರ ಅಶೋಕ ರಸ್ತೆಯ ದೀಪ ಜ್ಯುವೆಲರ್ಸ್‌ನಲ್ಲಿ ಗ್ರಾಹಕನಂತೆ ಬಂದು ಚಿನ್ನದ ಸರ ಕದ್ದಿರುವುದು ಇರಾನಿ ತಂಡದ ಕೃತ್ಯವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಅಂಗಡಿ ಮಾಲೀಕ ರತನ್ ಲಾಲ್ ಗಮನ ಬೇರೆಡೆ ಸೆಳೆದು ಚಿನ್ನದ ಸರದೊಂದಿಗೆ ಎಸ್ಕೇಪ್ ಆಗಿರುವುದನ್ನು ನೋಡಿದರೆ ಇದು ಇರಾನಿ ತಂಡದ ಕೃತ್ಯವೇ ಆಗಿದೆ ಎಂದು ಪೊಲೀಸರಿಗೆ ಸಂಶಯವಿದೆ. ಕಾರಣ, ದೇಶಾದ್ಯಂತ ಇದೇ ಮಾದರಿಯಲ್ಲಿ ಇರಾನಿ ತಂಡದವರು ಕಳ್ಳತನ ಮಾಡುತ್ತಾ ಬಂದಿದ್ದಾರೆ.

ಈ ಸಂಬಂಧ ಆರೋಪಿಗಳ ಬಲೆಗೆ ವಿಶೇಷ ತಂಡ ರಚನೆ ಮಾಡಲಾಗಿದೆ. ದೀಪ ಜ್ಯುವೆಲರ್ಸ್ ಸೇರಿದಂತೆ ಅಕ್ಕ ಪಕ್ಕದ ಅಂಗಡಿಗಳ ಸಿಸಿಟಿವಿಯನ್ನು ಪರಿಶೀಲನೆ ನಡೆಸಿರುವ ಪೊಲೀಸರಿಗೆ ಆರೋಪಿಗಳ ಬಗ್ಗೆ ಸುಳಿವು ದೊರೆತಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಒಂದೆರಡು ದಿನದಲ್ಲಿ ಆರೋಪಿಗಳಿಗೆ ಕೋಳ ತೊಡಿಸುವುದು ನಿಶ್ಚಿತ ಎನ್ನಲಾಗಿದೆ.

ಅಕ್ಟೋಬರ್ 21 ರಂದು ದೀಪ ಜ್ಯುವೆಲರ್ಸ್‌ಗೆ ಗ್ರಾಹಕನ ಸೋಗಿನಲ್ಲಿ ಬಂದ ವ್ಯಕ್ತಿಯೊಬ್ಬ ಅಂಗಡಿ ಮಾಲೀಕ ರತನ್ ಲಾಲ್ ಗಮನ ಬೇರೆಡೆ ಸೆಳೆದು ಚಿನ್ನದ ಸರ ಕಳ್ಳತನ ಮಾಡಿ ಪರಾರಿಯಾಗಿದ್ದಾನೆ.

ಚಾಲಾಕಿ ಕಳ್ಳ ದೀಪ ಜ್ಯುವೆಲರ್ಸ್‌ನಿಂದ ಹೊರಗೆ ಬಂದು ಅಲ್ಲೇ ಕಾಯುತ್ತಿದ್ದ ಮತ್ತೊಬ್ಬ ವ್ಯಕ್ತಿಯ ಸ್ಕೂಟರ್‌ನಲ್ಲಿ ಪೇರಿ ಕಿತ್ತಿದ್ದಾರೆ. ಆದರೆ ತಾವು ಪೊಲೀಸರಿಗೆ ಸಿಕ್ಕಿ ಬೀಳಬಾರದೆಂದು ಸ್ಕೂಟರ್‌ಗೆ ನಕಲಿ ನಂಬರ್ ಪ್ಲೇಟ್ ಅಳವಡಿಸಿಕೊಂಡಿದ್ದಾರೆ. ಆದರೆ ಪೊಲೀಸರಿಗೆ ಆರೋಪಿಗಳ ಬಗ್ಗೆ ಸುಳಿವು ಸಿಕ್ಕಿದ್ದು, ಶೀಘ್ರವೇ ಬಂಧಿಸುವ ವಿಶ್ವಾಸದಲ್ಲಿದ್ದಾರೆ.

ಹೊಸ ಪಿಎಂಓ ಕಚೇರಿಗೆ ಪ್ರಧಾನಿ ಮೋದಿ ಸದ್ಯದಲ್ಲೇ ಶಿಫ್ಟ್



ನವದೆಹಲಿ: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ದೆಹಲಿಯಲ್ಲಿರುವ ಅಧಿಕೃತ ನಿವಾಸ ಬದಲಾಗುತ್ತಿದೆ. ಈ ಮೂಲಕ ಸೌತ್ ಬ್ಲಾಕ್‌ನಿಂದ ಸ್ಥಳಾಂತರಗೊಳ್ಳುತ್ತಿರುವ ಮೊದಲ ಪ್ರಧಾನಿ ನರೇಂದ್ರ ಮೋದಿ ಆಗಿರುತ್ತಾರೆ.

ಈ ತಿಂಗಳ ಆರಂಭದಲ್ಲಿ ಸೇವಾ ತಿರಥ್ ಎಂಬ ಹೆಸರಿನ ಹೊಸ ಪ್ರಧಾನಮಂತ್ರಿ ಕಚೇರಿ ಸಂಕೀರ್ಣಕ್ಕೆ ಸಂಪುಟ ಕಾರ್ಯದರ್ಶಿ ಕಚೇರಿ ಸ್ಥಳಾಂತರಗೊಂಡಿದ್ದು, ಪ್ರಧಾನಿ ಕಚೇರಿ ಶೀಘ್ರದಲ್ಲೇ ಸೌತ್ ಬ್ಲಾಕ್ ನಿಂದ ಸ್ಥಳಾಂತರಗೊಳ್ಳಲಿದೆ.

ಸಂಪುಟ ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಹೊಸ ಸಂಕೀರ್ಣದಿಂದ ಕೆಲಸ ಮಾಡಲು ಪ್ರಾರಂಭಿಸಿದ್ದರೂ, ಅದು ಇನ್ನೂ ಉದ್ಘಾಟನೆಗೊಂಡಿಲ್ಲ.

ಈ ಸಂಕೀರ್ಣವು ಪ್ರಧಾನ ಮಂತ್ರಿ ಕಚೇರಿ, ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯ ಮತ್ತು ವಿಶೇಷ ರಕ್ಷಣಾ ಗುಂಪಿನ ಕಚೇರಿಗಳನ್ನು ಒಳಗೊಂಡಿದೆ.


ಮೈಸೂರು ಬೋಗಾದಿ ಬಳಿ ಪೂರ್ಣಯ್ಯ ನಾಲೆ ಮೇಲೆ ಅನಧಿಕೃತ ನಿರ್ಮಾಣ; ಅ.30ಕ್ಕೆ ತೆರವು

- ತಹಶೀಲ್ದಾರ್ ಮಹೇಶ್ ಆದೇಶ
- ಸೂಕ್ತ ಭದ್ರತೆ ನೀಡುವಂತೆ ಪೊಲೀಸರಿಗೆ ಮನವಿ
- ಬಿಸಿಲು ಮಾರಮ್ಮ ದೇವಸ್ಥಾನದ ಅನಧಿಕೃತ ಕಟ್ಟಡ



ಮೈಸೂರಿನ ಬೋಗಾದಿ ಬಳಿಯ ಬಿಸಿಲು ಮಾರಮ್ಮ ದೇವಸ್ಥಾನದ ಎದುರು ನಿರ್ಮಾಣವಾಗುತ್ತಿರುವ ಅನಧಿಕೃತ ಕಟ್ಟಡ

ಕುಕ್ಕರಹಳ್ಳಿ ಕೆರೆ ನೀರಿನ ಮೂಲವನ್ನೆ ಮುಚ್ಚಿದ್ದಾರೆ



ಬೋಗಾದಿಯಿಂದ ಕುಕ್ಕರಹಳ್ಳಿಕೆರೆಗೆ ಮಳೆ ನೀರು ಹರಿದು ಬರಲು ರಾಜರ ಕಾಲದಲ್ಲೇ ನಾಲೆ ನಿರ್ಮಾಣ ಮಾಡಲಾಗಿದೆ. ಆದರೆ, ಇಂತಹ ನಾಲೆ ಮೇಲೆ ಅನಧಿಕೃತ ಕಟ್ಟಡ ನಿರ್ಮಿಸಿ ಕುಕ್ಕರಹಳ್ಳಿ ಕೆರೆಗೆ ಮಳೆ ನೀರಿನ ಮೂಲವನ್ನೆ ಮುಚ್ಚಿದ್ದಾರೆ.

ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ ಹಾಗೂ ಮಾನಸ ಗಂಗೋತ್ರಿಯವರು ನಾಲೆ ಜಾಗ ಬಿಟ್ಟು ಕಟ್ಟಡ ನಿರ್ಮಿಸಿದ್ದಾರೆ. ಇದನ್ನು ಹೊರತುಪಡಿಸಿ ಉಳಿದ ಪೂರ್ಣಯ್ಯ ನಾಲೆ ಉದ್ದಕ್ಕೂ ಅನಧಿಕೃತ ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಇವುಗಳನ್ನು ತೆರವು ಮಾಡಲು ಈಗಾಗಲೇ ಡ್ರೋನ್ ಮೂಲಕ ಏರಿಯಲ್ ಸರ್ವೆ ಮಾಡಲಾಗಿದೆ. ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಹರ್ಷ ಗುಪ್ತ ಅವರು ಸ್ಥಳದಲ್ಲೇ ನಿಂತು ಪೂರ್ಣಯ್ಯ ನಾಲೆ ಮೇಲೆ ನಿರ್ಮಾಣವಾಗಿದ್ದ ಕೆಲವು ಕಟ್ಟಡಗಳನ್ನು ತೆರವು ಮಾಡಿಸಿದ್ದರು. ಹರ್ಷಗುಪ್ತ ಅವರು ವರ್ಗಾವಣೆಗೊಂಡ ನಂತರ ಮತ್ತೆ ನಾಲೆ ಉದ್ದಕ್ಕೂ ನಾಯಿ ಕೊಡೆಗಳಂತೆ ಹತ್ತಾರು ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿವೆ.

ಮೈಸೂರು, ಅ.24(ಬಿಎಲ್‌ಯು)– ಮೈಸೂರಿನ ಬೋಗಾದಿ ಬಳಿ ಹಾದು ಹೋಗಿರುವ ಪೂರ್ಣಯ್ಯ ನಾಲೆ ಮೇಲೆ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಹಾಗೂ ಈಗಲೂ ಮಾಡುತ್ತಿರುವ ಕಟ್ಟಡಗಳ ತೆರವುಗೊಳಿಸಲು ತಹಶೀಲ್ದಾರ್ ಮಹೇಶ್ ಆದೇಶ ಹೊರಡಿಸಿದ್ದಾರೆ.

ಬೋಗಾದಿಯ ಬಿಸಿಲು ಮಾರಮ್ಮನ ದೇವಸ್ಥಾನದ ವತಿಯಿಂದ ನಿರ್ಮಾಣ ಮಾಡುತ್ತಿರುವ ಅನಧಿಕೃತ ಕಟ್ಟಡವನ್ನು ಅಕ್ಟೋಬರ್ 30 ರಂದು ತೆರವು ಮಾಡಲಿದ್ದು, ಇದಕ್ಕೆ ಸೂಕ್ತ ಭದ್ರತೆ ಒದಗಿಸುವಂತೆ ಸರಸ್ವತಿಪುರಂ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆ ಪತ್ರ ಬರೆದಿದ್ದಾರೆ.

ಬೋಗಾದಿಯ ಬಿಸಿಲು ಮಾರಮ್ಮ ದೇವಸ್ಥಾನದ ಎದುರಿನ ಪೂರ್ಣಯ್ಯ ನಾಲೆ ಮೇಲೆ ಅನಧಿಕೃತ ಕಟ್ಟಡ ನಿರ್ಮಾಣ ಮಾಡುವಾಗ ಗ್ರಾಮ ಆಡಳಿತಾಧಿಕಾರಿ ಅಜೀಮ್ ಖಾನ್ ಅವರು ಸ್ಥಳಕ್ಕೆ ಭೇಟಿ ನೀಡಿ ನಿರ್ಮಾಣ ಮಾಡದಂತೆ ಸೂಚನೆ ನೀಡಿದ್ದರು.

ಆದರೆ, ದೇವಸ್ಥಾನದವರು ಅವರ ಸೂಚನೆಗೆ ಕವಡೆ ಕಾಸಿನ ಕಿಮ್ಮತ್ತು ನೀಡದೆ ಕಟ್ಟಡ ನಿರ್ಮಾಣ ಕಾಮಗಾರಿ ನಡೆಸುತ್ತಿದ್ದರು. ಈ ಸಂಬಂಧ ಅಜೀಮ್ ಖಾನ್ ಅವರು ತಹಶೀಲ್ದಾರ್ ಮಹೇಶ್ ಅವರಿಗೆ ವರದಿ ನೀಡಿದ್ದರು. ಆ ವರದಿ ಪರಿಶೀಲನೆ ನಡೆಸಿದ ಮಹೇಶ್, ಪೂರ್ಣಯ್ಯ ನಾಲೆ ಮೇಲೆ ಅನಧಿಕೃತ ಕಟ್ಟಡ ನಿರ್ಮಾಣ ಆಗುತ್ತಿರುವುದನ್ನು ಖಚಿತಪಡಿಸಿಕೊಂಡಿದ್ದಾರೆ. ಅಕ್ಟೋಬರ್ 30 ರಂದು ಈ ಅನಧಿಕೃತ ನಿರ್ಮಾಣ ತೆರವು ಮಾಡಲು ಆದೇಶಿಸಿದ್ದಾರೆ. ಅಲ್ಲದೆ ತೆರವು ಕಾರ್ಯಾಚರಣೆ ವೇಳೆ ಸೂಕ್ತ ಭದ್ರತೆ ನೀಡಬೇಕೆಂದು ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಮನವಿ ಮಾಡಿದ್ದಾರೆ.

ಪೂರ್ಣಯ್ಯ ನಾಲೆ ಮೇಲಿವೆ 50ಕ್ಕೂ ಹೆಚ್ಚು ಅನಧಿಕೃತ ಕಟ್ಟಡ

ಪೂರ್ಣಯ್ಯ ನಾಲೆ ಮೇಲೆ ಸುಮಾರು 50 ಕ್ಕೂ ಹೆಚ್ಚು ಅನಧಿಕೃತ ಕಟ್ಟಡ ನಿರ್ಮಾಣ ಮಾಡಲಾಗಿದೆ. ಇವುಗಳನ್ನು ತೆರವು ಮಾಡುವ ಕಾನೂನಾತ್ಮಕ ಪ್ರಕ್ರಿಯೆ ಆರಂಭಿಸಿದಾಗ ಕಟ್ಟಡ ನಿರ್ಮಿಸಿಕೊಂಡ ವ್ಯಕ್ತಿಯೊಬ್ಬ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾನೆ ಎಂದು ಅಜೀಮ್ ಖಾನ್ ತಿಳಿಸಿದ್ದಾರೆ.

ನಾಲೆ ಮೇಲೆ ನಿರ್ಮಾಣ ಮಾಡಿರುವ ಕಟ್ಟಡಗಳ ತೆರವುಗೊಳಿಸದೆ ಯಥಾಸ್ಥಿತಿ ಕಾಪಾಡಿಕೊಳ್ಳುವಂತೆ ನ್ಯಾಯಾಲಯ ಆದೇಶ ನೀಡಿದೆ. ಜೊತೆಗೆ ನಾಲೆ ಮೇಲೆ ಖಾಲಿ ಇರುವ ಜಾಗದಲ್ಲಿ ಇನ್ನು ಮುಂದೆ ಯಾವುದೇ ಕಟ್ಟಡ ನಿರ್ಮಾಣ ಆಗದಂತೆ ನೋಡಿಕೊಳ್ಳುವಂತೆಯೂ ಆದೇಶಿಸಿದೆ ಎಂದು ಹೇಳಿದರು.

ಆದರೆ ನಾಲೆ ಮೇಲಿನ ಖಾಲಿ ಜಾಗದಲ್ಲಿ ಅನಧಿಕೃತ ಕಟ್ಟಡ ನಿರ್ಮಾಣ ಮಾಡದಂತೆ ನ್ಯಾಯಾಲಯ ನೀಡಿರುವ ಆದೇಶವನ್ನು ಉಲ್ಲಂಘಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಇಂತಹ ಅಕ್ರಮ ನಿರ್ಮಾಣಗಳನ್ನು ಅಕ್ಟೋಬರ್ 30 ರಂದು ತೆರವು ಮಾಡಲಾಗುವುದು ಎಂದು ಅಜೀಮ್ ಖಾನ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಬಂಡವಾಳ ಹೂಡಿಕೆಗೆ ಗಡುವಿನಲ್ಲಿ ಅವಕಾಶ ಮಾಡಿಕೊಡಿ

- ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು
- ನಿಗದಿತ ಕಾಲಮಿತಿಯಲ್ಲಿ ಅನುಮೋದನೆ ನೀಡುವಂತೆಯೂ ಸೂಚನೆ



ಬಂಡವಾಳ ಹೂಡಿಕೆ ಆಕರ್ಷಣೆ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಂ.ಬಿ.ಪಾಟೀಲ್ ಇದ್ದಾರೆ.

ರಾಜ್ಯದಲ್ಲಿ 13 ಕಂಪನಿಗಳಿಂದ 27 ಸಾವಿರ ಕೋಟಿ ಹೂಡಿಕೆ; 11 ಹೊಸ ಯೋಜನೆ!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಶುಕ್ರವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ನಡೆದ ರಾಜ್ಯ ಉನ್ನತ ಮಟ್ಟದ ಯೋಜನಾ ಮಂಜೂರಾತಿ ಸಮಿತಿಯ ಸಭೆಯಲ್ಲಿ ಒಟ್ಟು 27,607.26 ಕೋಟಿ ರೂಪಾಯಿ ಬಂಡವಾಳ ಹೂಡಿಕೆಗೆ ಒಪ್ಪಿಗೆ ನೀಡಲಾಗಿದೆ.

ಇದರಲ್ಲಿ 11 ಹೊಸ ಕೈಗಾರಿಕಾ ಯೋಜನೆಗಳು ಮತ್ತು 2 ಹೆಚ್ಚುವರಿ ಹೂಡಿಕೆ ಪ್ರಸ್ತಾವನೆಗಳು ಸೇರಿವೆ ಎಂದು ಸಭೆ ಬಳಿಕ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಸುದ್ದಿಗಾರರಿಗೆ ತಿಳಿಸಿದ್ದಾರೆ. ಒಟ್ಟು ಈ 13 ಯೋಜನೆಗಳಿಂದ 8,704 ನೇರ ಉದ್ಯೋಗಗಳು ಸೃಷ್ಟಿಯಾಗಲಿವೆ. 11 ಹೊಸ ಹೂಡಿಕೆ ಯೋಜನೆಗಳ ಪೈಕಿ ತೇಜಸ್ ನೆಟ್‌ವರ್ಕ್ಸ್ 542.19 ಕೋಟಿ ರೂ, ವಾಯು ಅಸೆಟ್ಸ್ 1,251 ಕೋಟಿ ರೂ, ಜಿಂದಾಲ್ ಸ್ಟೀಲ್ಸ್ 1,300.57 ಕೋಟಿ ರೂ, ಜಿಂದಾಲ್ ಎಲೆಕ್ಟ್ರಿಕಲ್ ಸ್ಟೀಲ್ 7,102 ಕೋಟಿ ರೂ, ಗ್ರಾಸಿಂ ಇಂಡಸ್ಟ್ರೀಸ್1,386 ಕೋಟಿ ರೂ, ಎಸ್‌ಎಫ್‌ಎಕ್ಸ್ ಇಂಡಿಯಾ 9,298 ಕೋಟಿ ರೂ, ಸ್ನೀಡರ್ ಎಲೆಕ್ಟ್ರಿಕ್ ಐಟಿ ಬಿಝಿನೆಸ್, ಎಚ್‌ಎಸ್‌ಎಸ್ ಟೆಕ್ಸ್‌ಟೈಲ್ಸ್ 740 ಕೋಟಿ ರೂ, ಸ್ನೈಡರ್ ಎಲೆಕ್ಟ್ರಿಕ್ ಬಿಸಿನೆಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ 1,520.75 ಕೋಟಿ ರೂ, ಕ್ಯೂಪಿಐಎಐ ಇಂಡಿಯಾ 1,136 ಕೋಟಿ ರೂ, ಟೊಯೋಟಾ ಇಂಡಸ್ಟ್ರೀಸ್ ಎಂಜಿನ್ ಇಂಡಿಯಾ ಲಿಮಿಟೆಡ್ 1,330 ಕೋಟಿ ರೂ ಮತ್ತು ರಿಲಯನ್ಸ್ ಕನ್ಸೂಮರ್ ಪ್ರಾಡಕ್ಟ್ಸ್ 1,622 ಕೋಟಿ ರೂ. ಹೂಡಿಕೆ ಮಾಡಲಿವೆ.

ಉಳಿದಂತೆ, ಎಂಬೆಸಿ ಇಂಡಸ್ಟ್ರಿಯಲ್ ಪಾರ್ಕ್ ಮತ್ತು ಬಾಲಾಜಿ ವೇಫರ್ಸ್ ಕಂಪನಿಗಳು ಕ್ರಮವಾಗಿ 80 ಮತ್ತು 298.75 ಕೋಟಿ ರೂ. ಹೆಚ್ಚುವರಿ ಬಂಡವಾಳ ತೊಡಗಿಸಲಿವೆ ಎಂದು ಅವರು ಹೇಳಿದ್ದಾರೆ.

ವಿಧಾನಸೌಧದಲ್ಲಿ ನಡೆದ ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್, ಇಂಧನ ಸಚಿವ ಕೆ ಜೆ ಜಾರ್ಜ್, ಕಾನೂನು ಸಚಿವ ಎಚ್.ಕೆ.ಪಾಟೀಲ್, ಐಟಿ ಸಚಿವ ಪ್ರಿಯಾಂಕ್ ಖರ್ಗೆ, ಉನ್ನತ ಶಿಕ್ಷಣ ಸಚಿವ ಎಂ ಸಿ ಸುಧಾಕರ್, ಕಾರ್ಮಿಕ ಸಚಿವ ಸಂತೋಷ್ ಲಾಡ್ ಉಪಸ್ಥಿತರಿದ್ದರು.

ಬೆಂಗಳೂರು, ಅ.24(ಕೊಂಶಿ)– ಬಂಡವಾಳ ಹೂಡಿಕೆದಾರರಿಗೆ ಅನುಮೋದನೆ ನೀಡುವಲ್ಲಿ ವಿಳಂಬಕ್ಕೆ ಅವಕಾಶ ನೀಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ಸುಪ್ರೀಂಕೋರ್ಟ್ ನೆಪ ಹೇಳಿಕೊಂಡು ಅಧಿಕಾರಿಗಳು ಕೂರಬಾರದು. ಅಕ್ಕಪಕ್ಕದ ರಾಜ್ಯಗಳಿಗೂ ಇರುವುದೂ ಇದೇ ಸುಪ್ರೀಂಕೋರ್ಟ್. ಬೇರೆ ರಾಜ್ಯಗಳಿಗೆ ಆಗದ ಸಮಸ್ಯೆ ನಮಗೆ ಆಗುತ್ತೆ ಎನ್ನುವ ನೆಪ ಹೇಳಿಕೊಂಡು ಕೂತರೆ ಕ್ರಮ ಜರುಗಿಸಬೇಕಾಗುತ್ತದೆ ಎಂದರು.

ತಮ್ಮ ಅಧ್ಯಕ್ಷತೆಯಲ್ಲಿ ಇಂದು ವಿಧಾನಸೌಧದ ಸಭಾಂಗಣದಲ್ಲಿ ನಡೆದ ಬಂಡವಾಳ ಹೂಡಿಕೆ ಆಕರ್ಷಣೆ ಸಭೆಯಲ್ಲಿ ಅಧಿಕಾರಿಗಳಿಗೆ ಸಲಹೆ–ಸೂಚನೆ ನೀಡಿ, ಎಲ್ಲವನ್ನೂ ಗಡುವಿನೊಳಗೆ ಪೂರ್ಣಗೊಳಿಸಿ ಬಂಡವಾಳ ಹೂಡಿಕೆಗೆ ಅನುವು ಮಾಡಿಕೊಡಬೇಕು ಎಂದಿದ್ದಾರೆ.

ಕೈಗಾರಿಕೆಗಳ ಆರಂಭಕ್ಕೆ ಅಗತ್ಯವಾದ ಭೂ ಬಳಕೆ ಬದಲಾವಣೆ ಪ್ರಕ್ರಿಯೆ ಸೇರಿದಂತೆ ವಿವಿಧ ಎನ್‌ಓಸಿ ನೀಡಿಕೆಯ ಕಾಲಮಿತಿ ಕಡಿಮೆ ಮಾಡಬೇಕು. ಕಾಲಮಿತಿ ಕಡಿಮೆ ಮಾಡುವ ಬಗ್ಗೆ ವಿವರವಾದ ಪ್ರಸ್ತಾವನೆ ಸಲ್ಲಿಸಬೇಕು. ಯಾವುದೇ ಕಾರಣಕ್ಕೂ ವಿಳಂಬಕ್ಕೆ ಅವಕಾಶ ನೀಡಬಾರದು ಎಂದಿದ್ದಾರೆ.

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಅಗ್ನಿಶಾಮಕ ಇಲಾಖೆ ಅನುಮೋದನೆ ವಿಳಂಬವಾಗುತ್ತಿದ್ದು, ಇದನ್ನು ತ್ವರಿತಗೊಳಿಸಬೇಕು, ಇದಕ್ಕಾಗಿ ಮಂಡಳಿ ನಿಯಮಾವಳಿಯಲ್ಲಿ ಅಗತ್ಯ ಬದಲಾವಣೆ ಮಾಡಬೇಕು.

ಎಲ್ಲಾ ಸಂಬಂಧಪಟ್ಟ ಇಲಾಖೆಗಳು ಅನುಮೋದನೆ ನೀಡುವ ಕಾಲಮಿತಿಯನ್ನು ಮರು ನಿಗದಿಪಡಿಸಬೇಕು. ಕಾಲಮಿತಿಯಲ್ಲಿ ಅನುಮೋದನೆಗಳನ್ನು ನೀಡಲು ವಿಫಲರಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು.

ಕೈಗಾರಿಕೆಗಳಿಗೆ ರಸ್ತೆ, ನೀರು, ವಿದ್ಯುತ್ ಸೇರಿದಂತೆ ಅಗತ್ಯ ಮೂಲ ಸೌಲಭ್ಯ ಒದಗಿಸುವ ಕುರಿತು ಸಂಬಂಧಪಟ್ಟ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು. ಹಸಿರು ಇಂಧನ ಮೂಲಗಳಿಂದ ಕೈಗಾರಿಕೆಗಳಿಗೆ ವಿದ್ಯುತ್ ಸರಬರಾಜು ಮಾಡುವಲ್ಲಿ ಅಸಾಂಪ್ರದಾಯಿಕ ಇಂಧನ ಮೂಲಗಳಿಗೆ ಆದ್ಯತೆ ನೀಡಬೇಕು. ಇದಕ್ಕಾಗಿ ವ್ಯವಸ್ಥಿತ ಯೋಜನೆ ರೂಪಿಸಬೇಕಿದೆ.

ಕೇಂದ್ರ ಸರ್ಕಾರ 2 ಪ್ರಮುಖ ಕಾರ್ಮಿಕ ಸುಧಾರಣೆಗಳ ಅನುಷ್ಠಾನ ಪ್ರಸ್ತಾಪಿಸಿದೆ. ಕಾರ್ಮಿಕರ ಕೆಲಸದ ಅವಧಿ ಮರು ನಿಗದಿಪಡಿಸುವಲ್ಲಿ ಕಾರ್ಮಿಕರ ಹಿತ ಗಮನದಲ್ಲಿಡಲಾಗುವುದು.

ಏಕಗವಾಕ್ಷಿ ವ್ಯವಸ್ಥೆಯಡಿ ಅರ್ಜಿಗಳ ವಿಲೇವಾರಿ ಆಗುತ್ತಿಲ್ಲ ಎಂಬ ದೂರುಗಳಿವೆ. ಎಲ್ಲಾ ಸೇವೆ ನೀಡಲು ಕ್ರಮ ಕೈಗೊಳ್ಳಬೇಕು. ಪ್ರಸ್ತುತ 29 ಸೇವೆಗಳು ಏಕಗವಾಕ್ಷಿ ವ್ಯವಸ್ಥೆಯಿಂದ ಹೊರಗಿವೆ. ಅವುಗಳನ್ನೂ ಇದರಡಿ ತರಬೇಕು. ಎಲ್ಲಾ ಅರ್ಜಿಗಳನ್ನು ಏಕಗವಾಕ್ಷಿ ವ್ಯವಸ್ಥೆಯಡಿ ಏಕೀಕೃತ ವಿಲೇವಾರಿಗೆ ಕ್ರಮ ಕೈಗೊಳ್ಳಿ.

ರಾಜ್ಯದಲ್ಲಿ ಈ ವರ್ಷದ ಆರಂಭದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 10.27 ಲಕ್ಷ ಕೋಟಿ ರೂ. ಹೂಡಿಕೆ ಆಕರ್ಷಿಸಲಾಗಿದ್ದು, ಈಗಾಗಲೇ ಶೇ.60 ರಷ್ಟು ಹೂಡಿಕೆಗಳು ಅನುಷ್ಠಾನ ಹಂತದಲ್ಲಿವೆ ಎಂದರು.

ಬಿಹಾರದಲ್ಲಿ ಪ್ರಧಾನಿ ಮೋದಿ ಪ್ರಚಾರ ಆರಂಭ

'ಜಂಗಲ್ ರಾಜ್' ಆಡಳಿತ ದೂರವಿಟ್ಟು ಎನ್‌ಡಿಎ ಗೆಲ್ಲಿಸಲು ಮನವಿ



ಬಿಹಾರ ವಿಧಾನಸಭಾ ಚುನಾವಣಾ ಪ್ರಚಾರವನ್ನು ಪ್ರಧಾನಿ ಮೋದಿ ಶುಕ್ರವಾರ ಅಧಿಕೃತವಾಗಿ ಆರಂಭಿಸಿದರು.

ಬಿಹಾರ, ಅ.24– ಬಿಹಾರ ಚುನಾವಣಾ ಪ್ರಚಾರದ ರಂಗು ಹೆಚ್ಚಾಗುತ್ತಿದ್ದು ಇಂದು ಪ್ರಧಾನಿ ನರೇಂದ್ರ ಮೋದಿ ಪ್ರಚಾರ ಆರಂಭಿಸಿದ್ದಾರೆ. ಬಿಹಾರದ ಸಮಷ್ಟಿಪುರದಲ್ಲಿ ಚುನಾವಣಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಗುರಿಯಾಗಿಸಿಕೊಂಡು, ಸಂವಿಧಾನವನ್ನು ಹೊತ್ತವರು ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಟೀಕಿಸಿದರು.

ಆರ್‌ಜೆಡಿ ವಿರುದ್ಧದ ತಮ್ಮ 'ಜಂಗಲ್ ರಾಜ್' ಹೇಳಿಕೆಯನ್ನು ಮತ್ತೆ ಪುನರುಚ್ಚರಿಸಿದ ಮೋದಿ, ರಾಜ್ಯವು ಅವರನ್ನು ದೂರವಿಟ್ಟು ಉತ್ತಮ ಆಡಳಿತಕ್ಕಾಗಿ ಎನ್‌ಡಿಎ ಮೈತ್ರಿಕೂಟಕ್ಕೆ ಮತ ನೀಡಿ ಎಂದು ಜನತೆಗೆ ಮನವಿ ಮಾಡಿಕೊಂಡರು.

ಬಿಹಾರವು 'ಜಂಗಲ್ ರಾಜ್' ಅನ್ನು ತೊಡೆದುಹಾಕಿ ನಿತೀಶ್ ಕುಮಾರ್ ನೇತೃತ್ವದಲ್ಲಿ ಎನ್‌ಡಿಎಯ ಉತ್ತಮ ಆಡಳಿತ ಪ್ರಾರಂಭವಾದದ್ದು ಅಕ್ಟೋಬರ್ 2005 ರಲ್ಲಿ. ಆಗ ಕೇಂದ್ರದಲ್ಲಿ ಕಾಂಗ್ರೆಸ್–ಆರ್‌ಜೆಡಿ ಅಧಿಕಾರದಲ್ಲಿತ್ತು. ಅವರು ಅನೇಕ ಅಡೆತಡೆಗಳನ್ನು ಸೃಷ್ಟಿಸಿದರು. ಬಿಹಾರವನ್ನು ಸಾಧ್ಯವಾದಷ್ಟು ಆರ್‌ಜೆಡಿ ಹಾನಿಮಾಡಿದೆ. ಅದು ಬಿಹಾರ ಜನರ ಮೇಲೆ ಸೇಡು ತೀರಿಸಿಕೊಳ್ಳುತ್ತಿದೆ. ಬಿಹಾರದಲ್ಲಿ ಬಿಜೆಪಿ–ಎನ್‌ಡಿಎ ಸರ್ಕಾರಕ್ಕೆ ಸಹಾಯ ಮಾಡಲು ಬಯಸಿದರೆ ಕಾಂಗ್ರೆಸ್‌ಗೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳುವುದಾಗಿ ಸಹ ಬೆದರಿಕೆ ಹಾಕಿತು ಎಂದರು.

ಬಿಹಾರದ ಜನರು 'ಜಂಗಲ್ ರಾಜ್'ನ ದುಷ್ಕೃತ್ಯಗಳನ್ನು' ಎಂದಿಗೂ ಮರೆಯಲು ಸಾಧ್ಯವಿಲ್ಲ. ಆರ್‌ಜೆಡಿಯ ಆಡಳಿತ ಕ್ರಮವೇ ಅಂಥಹದ್ದು ಎಂದ ಪ್ರಧಾನ ಮಂತ್ರಿಗಳು ಬಿಹಾರದಲ್ಲಿ ವಿರೋಧ ಪಕ್ಷಗಳ ಮೈತ್ರಿಯನ್ನು ಲಠ್ ಬಂಧನ್ ಅಂದರೆ ಕ್ರಿಮಿನಲ್‌ಗಳ ಮೈತ್ರಿ ಎಂದು ಕರೆದರು.

ಎನ್‌ಡಿಎಗೆ ಬಹುಮತ: ಬಿಹಾರ ಚುನಾವಣೆಯಲ್ಲಿ ಈ ಬಾರಿ ಎನ್‌ಡಿಎ ತನ್ನ ಅತಿದೊಡ್ಡ ಜನಾದೇಶವನ್ನು ಪಡೆಯುತ್ತದೆ. ಆಡಳಿತ ಮೈತ್ರಿಕೂಟ ಅಧಿಕಾರಕ್ಕೆ ಮರಳಿದ ನಂತರ ಬಿಹಾರದ ಬೆಳವಣಿಗೆ ವೇಗಗೊಳ್ಳುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಹಾರಾಷ್ಟ್ರದ ಜನರು ನಮಗೆ ಮೊದಲಿಗಿಂತ ಹೆಚ್ಚಿನ ಬಹುಮತವನ್ನು ನೀಡಿದರು. ಹರಿಯಾಣದಲ್ಲಿಯೂ ಅದೇ ಆಯಿತು. ಮೂರನೇ ಅವಧಿಗೆ ನಮ್ಮನ್ನು ಆಯ್ಕೆ ಮಾಡಿದರು. ಮಧ್ಯಪ್ರದೇಶದಲ್ಲಿಯೂ ಸಹ, ಬಿಜೆಪಿ ದೀರ್ಘಕಾಲದಿಂದ ಅಧಿಕಾರದಲ್ಲಿದೆ. ಗುಜರಾತ್ ಮತ್ತು ಉತ್ತರಾಖಂಡದಲ್ಲೂ ನಾವು ಇದನ್ನು ನೋಡಿದ್ದೇವೆ. ಗುಜರಾತ್‌ನಲ್ಲಿ, ಬಿಜೆಪಿ ಎರಡು ದಶಕಗಳಿಂದಲೂ ಅಧಿಕಾರದಲ್ಲಿದೆ, ಪ್ರತಿ ಐದು ವರ್ಷಗಳಿಗೊಮ್ಮೆ ಸರ್ಕಾರಗಳು ಬದಲಾಗುವ ಉತ್ತರ ಪ್ರದೇಶದಲ್ಲಿ, ಬಿಜೆಪಿ ಆ ಪ್ರವೃತ್ತಿಯನ್ನು ಕೊನೆಗೊಳಿಸಿತು. ಇದೆಲ್ಲವೂ ಎನ್‌ಡಿಎ ಉತ್ತಮ ಆಡಳಿತ, ಸಾರ್ವಜನಿಕ ಸೇವೆ ಮತ್ತು ಖಾತರಿಪಡಿಸಿದ ಅಭಿವೃದ್ಧಿಯನ್ನು ಬೆಂಬಲಿಸುತ್ತದೆ ಎಂದು ತೋರಿಸುತ್ತದೆ. ನಿತೀಶ್ ಕುಮಾರ್ ಅವರ ನಾಯಕತ್ವದಲ್ಲಿ, ಎನ್‌ಡಿಎ ಬಿಹಾರದಲ್ಲಿ ತನ್ನದೇ ಆದ ದಾಖಲೆಯನ್ನು ಮುರಿದು ಇದುವರೆಗಿನ ಅತಿದೊಡ್ಡ ಜನಾದೇಶವನ್ನು ಪಡೆಯುತ್ತದೆ ಎಂದು ನಾನು ಪೂರ್ಣ ವಿಶ್ವಾಸದಿಂದ ಹೇಳಬಲ್ಲೆ ಎಂದರು.

ಕರ್ಪೂರಿ ಠಾಕೂರ್‌ಗೆ ನಮನ: ಬಿಹಾರದ ಮಾಜಿ ಮುಖ್ಯಮಂತ್ರಿ ಮತ್ತು ಭಾರತ ರತ್ನ ಪ್ರಶಸ್ತಿ ಪುರಸ್ಕೃತ ಕರ್ಪೂರಿ ಠಾಕೂರ್ ಅವರನ್ನು ಉಲ್ಲೇಖಿಸಿದರು, ಭಾರತೀಯ ಕ್ರಾಂತಿ ದಳ ನಾಯಕನ ರಾಜ್ಯದ ಅಭಿವೃದ್ಧಿಯಲ್ಲಿ ಅವರ ಪಾತ್ರವನ್ನು ಶ್ಲಾಘಿಸಿದರು. ವಿರೋಧ ಪಕ್ಷಗಳು ಅವರ ಜನನಾಯಕ ಬಿರುದನ್ನು ಕದಿಯಲು ಪ್ರಯತ್ನಿಸುತ್ತಿವೆ ಎಂದು ಆರೋಪಿಸಿದರು.

ಇದು ನನಗೆ ಸ್ಮರಣೀಯ ದಿನ. ಭಾರತ ರತ್ನ ಜನನಾಯಕ ಕರ್ಪೂರಿ ಠಾಕೂರ್ ಅವರ ಗ್ರಾಮವಾದ ಕರ್ಪೂರಿ ಗ್ರಾಮಕ್ಕೆ ಭೇಟಿ ನೀಡಿ ಅವರಿಗೆ ಗೌರವ ಸಲ್ಲಿಸಿದೆ. ಅವರ ಆಶೀರ್ವಾದದಿಂದಲೇ ನಾನು ಮತ್ತು ನಿತೀಶ್ ಕುಮಾರ್ ಅವರಂತಹ ಹಿಂದುಳಿದ ಸಮುದಾಯದವರು ಇಂದು ಈ ಮಟ್ಟಕ್ಕೆ ಬೆಳೆದಿದ್ದೇವೆ ಎಂದರು.

ಆರ್‌ಜೆಡಿ ಮತ್ತು ಕಾಂಗ್ರೆಸ್ ಹೇಳುವುದೊಂದು ಮಾಡುವುದೊಂದು ಎಂದು ನಿಮಗೆಲ್ಲರಿಗೂ ನನಗಿಂತ ಚೆನ್ನಾಗಿ ತಿಳಿದಿದೆ. ನಾನು ನಿಮಗೆ ನೆನಪಿಸುವ ಅಗತ್ಯವಿಲ್ಲ. ಜನರು ಭ್ರಷ್ಟಾಚಾರ ಪ್ರಕರಣಗಳಲ್ಲಿ, ಕಳ್ಳತನದ ಆರೋಪದ ಮೇಲೆ ಜಾಮೀನಿನ ಮೇಲೆ ಹೊರಗಿದ್ದಾರೆ. ಅವರ ಕಳ್ಳತನದ ಅಭ್ಯಾಸ ಹೇಗಿದೆಯೆಂದರೆ ಅವರು ಈಗ ಜನನಾಯಕ ಕರ್ಪೂರಿ ಠಾಕೂರ್ ಎಂಬ ಬಿರುದನ್ನು ಕದಿಯಲು ಪ್ರಯತ್ನಿಸುತ್ತಿದ್ದಾರೆ. ಬಿಹಾರದ ಜನರು ಇಂತವರಿಗೆ ಮಣೆಹಾಕುವುದಿಲ್ಲ ಎಂದರು.

ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಮೋಡಗಳು ಏಕೆ ಕಪ್ಪಾಗಿರುತ್ತವೆ?

ಗುಂಡ : ಸ್ವಲ್ಪ ಹೊತ್ತು ನಾವೇ ಬಿಸಿಲಲ್ಲಿ ತಿರುಗಾಡಿದ್ರೆ ಕಪ್ಪಾಗುತ್ತೀವಿ. ಇನ್ನು ದಿನಾ ಬಿಸಿಲಲ್ಲೇ ತಿರುಗಾಡೋ ಮೋಡಗಳು ಕಪ್ಪಾಗಲ್ವಾ ಮೇಷ್ಟ್ರೇ!?

ಮೈಸೂರು ಮಿತ್ರ

ಶನಿವಾರ, 25 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಒಳ್ಳೆಯವರಿಗೆ ಇರುವಷ್ಟು ಶತ್ರುಗಳು ಕೆಟ್ಟವರಿಗೆ ಇರಲ್ಲ.
ಕೆಟ್ಟವರಿಗೆ ಇರುವಷ್ಟು ಮಿತ್ರರು ಒಳ್ಳೆಯವರಿಗೆ ಇರಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ,
ಹಟ ಹಿಡಿದವ ಸಾಮ್ರಾಟನಲ್ಲ.

ನಿಮ್ಮ ಪತ್ರಗಳು

■ ಪ್ರತಾಪ್‌ಸಿಂಹ–ಪ್ರದೀಪ್ ಈಶ್ವರ್ ಮಾತಿನ ವರಸೆ ಮುಜುಗರ ತರುತ್ತಿದೆ !

ಮಾನ್ಯರೇ...

ನ್ಯೂಸ್ ಚಾನೆಲ್‌ಗಳಲ್ಲಿ ಇಬ್ಬರು ಯುವ ರಾಜಕಾರಣಿಗಳ ಮಿತಿ ಮೀರಿದ ವಾಕ್ಸಮರ, ರಾಜ್ಯದ ಜನರನ್ನು ಮುಜುಗರಕ್ಕೀಡುಮಾಡಿದೆ.

ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ನಡುವಿನ ಜಟಾಪಟಿ, ರಾಜಕೀಯ ಎಲ್ಲೆ ಮೀರಿ ತೀರಾ ವೈಯಕ್ತಿಕ ಮಟ್ಟಕ್ಕೆ ಇಳಿದಿದೆ. ಇದರಿಂದ ಉಭಯ ಯುವ ನಾಯಕರ ಕುಟುಂಬಗಳ ಗೌರವಕ್ಕೂ ಧಕ್ಕೆಯಾಗಿದೆ. ಇವರ ಬೆಂಬಲಿಗರಿಗೂ ಇರಿಸುಮುರಿಸಾಗಿದೆ. ದೇಶ ಉದ್ಧಾರವಾಗಬೇಕಾದರೆ ಯುವಕರ ಕೈಗೆ ಆಡಳಿತ ಚುಕ್ಕಾಣಿ ಸಿಗಬೇಕೆಂದು ಆಶಯವುಳ್ಳ ಜನರನ್ನೂ ಮೌನಕ್ಕೆ ದೂಡಿದೆ.

ಮಾಧ್ಯಮಗಳ ಮುಂದೆ ಹೇಳಿಕೆ–ಪ್ರತಿಕ್ರಿಯೆ ನೀಡುವುದಕ್ಕಷ್ಟೇ ಸೀಮಿತವಾಗದ ಈ ಯುವ ನಾಯಕರು, ಸಾಮಾಜಿಕ ಜಾಲತಾಣದಲ್ಲೂ ಮನಬಂದಂತೆ ವಾಕ್ಸಮರ ನಡೆಸಿದ್ದಾರೆ. ಇವರು ಯಾರಿಗೆ ಮಾದರಿಯಾಗಲು ಹೊರಟಿದ್ದಾರೋ ಗೊತ್ತಿಲ್ಲ.

ಇತ್ತ ಮೈಸೂರಲ್ಲಿ ಸಂಸದ ಪ್ರತಾಪ್ ಸಿಂಹ, ತಮ್ಮ ತಾಯಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವ ಪ್ರದೀಪ್ ಈಶ್ವರ್ ಕತ್ತಲಲ್ಲಿ ಕಾಣಲ್ಲ, ಬೆಳಕಲ್ಲಿ ಹೊಳೆಯಲ್ಲ. ಮುಳ್ಳಂದಿ ಮುಖದ ಕರ್ನಾಟಕದ ಏಕೈಕ ಕಾಮಿಡಿ ಪೀಸ್. ನಮ್ಮ ತಂದೆಯು ವಯಸ್ಸಿನಲ್ಲಿ ಇದ್ದಾಗ ಚಿಕ್ಕಬಳ್ಳಾಪುರ ಕಡೆ ಬಂದಿದ್ರೆ ನೀನು ಸುಂದರವಾಗಿ ಹುಟ್ಟುತ್ತಿದ್ದೆ. ನನ್ನ ಬಗ್ಗೆ ಮಾತಾಡುವಾಗ ಎಚ್ಚರಿಕೆ ಇರಬೇಕು ಮಗನೆ. ಪ್ರದೀಪ್ ಈಶ್ವರ್‌ಗೆ ಅವನ ಭಾಷೆಯಲ್ಲಿಯೇ ಉತ್ತರ ಹೇಳುತ್ತಿರುವುದಕ್ಕೆ ಕರ್ನಾಟಕದ ಜನರ ಕ್ಷಮೆ ಕೇಳುತ್ತೇನೆ ಎಂದಿದ್ದಾರೆ.

ಅತ್ತ ಚಿಕ್ಕಬಳ್ಳಾಪುರದಲ್ಲಿ ಪ್ರದೀಪ್ ಈಶ್ವರ್, ನಾನು ಕತ್ತಲಲ್ಲಿ ಕಾಣಲ್ವಂತೆ, ಅಯೋಗ್ಯ ನನ್ನನ್ನು ಕತ್ತಲಲ್ಲಿ ಯಾಕೆ ಹುಡುಕುತ್ತಾನೋ ಗೊತ್ತಿಲ್ಲ. ನೀನ್ ಏನಂದೆ, ಒಬ್ಬ ಅಪ್ಪಂಗೆ ಹುಟ್ಟಿದ್ಯಾ ಅಂದೆ. ನನ್ ಆಸ್ತಿಯಲ್ಲಿ ಭಾಗ ಬೇಕಾ ಅಂದೆ. ಈಗ ನನ್ನ ತಾಯಿ ಬಗ್ಗೆ ಕೇವಲವಾಗಿ ಮಾತಾಡ್ತಾ ಇದೀಯಾ. ನೀನ್ ಮಾತಾಡು ಗುರು ಪರವಾಗಿಲ್ಲ. ಆದ್ರೆ ನಮ್ ತಂದೆ ಅಂತೂ ನಿಮ್ಮ ಊರಿಗೆ ಕಳುಹಿಸಲ್ಲ. ನಮ್ ತಂದೆ ನಿಮ್ಮ ಊರಿಗೆ ಬರ್ಲಿಲ್ಲಾ ಅಂತಾ ಬೇಜಾರಾ? ನಾನ್ ಕಳ್ಸಕ್ ರೆಡಿ ಇಲ್ಲಾ ಗುರು. ನಮ್ಮದು ಸಂಪ್ರದಾಯಸ್ಥ ಕುಟುಂಬ. ಬೆಳಗ್ಗೆ ಕೂದಲೆಲ್ಲಾ ಬಾಚದೇ ಪ್ರೆಸ್ ಮೀಟ್‌ಗೆ ಬರ್ತೀಯಲ್ಲ, ಅವಾಗ ನಿನ್ನನ್ನ ನೀನ್ ನೋಡ್ಕೋ ಮುಳ್ಳು ಹಂದಿ ನೀನಾ... ನಾನಾ... ಗೊತ್ತಾಗುತ್ತೆ. ಕತ್ಲಲ್ಲಿ ನಮ್ಮನ್ನೂ ಹುಡುಕ್ತಾ ಇದ್ಯಾ ಏನ್ ಬರಗಾಲ ಗುರು. ಬೆಳಕಲ್ಲಿ ಎಲ್ಲ ಖಾಲಿ ಆದ್ ಮೇಲೆ ಕತ್ಲಲ್ಲಿ ನಮ್ಮನ್ನ ಹುಡುಕೋದಕ್ಕೆ ಸ್ಟಾರ್ಟ್ ಮಾಡಿದ್ದಾನೆ. ನಾನ್ ಹಂಗಲ್ಲ ಗುರು. ನೀನ್ ಹೇಳಿದ ಕಥೆಯಲ್ಲಿ ಮುಳ್ಳು ಹಂದಿ ನೀನು. ಸ್ಟೋರಿ ಸಿಂಕ್ ಮಾಡ್ಕೋ ಗುರು ಎಂದು ಪ್ರತಿಕ್ರಿಯಿಸಿದ್ದಾರೆ.

ಇನ್ನು ಇಂತಹ ವಾಚ್ಯಾಳಿಯನ್ನು ನಿಯಂತ್ರಿಸಬೇಕಿದ್ದ ಯುವ ಸಚಿವ ಪ್ರಿಯಾಂಕ್ ಖರ್ಗೆ, ಸಾಮಾಜಿಕ ಜಾಲತಾಣದಲ್ಲಿ ಬೆಂಕಿಗೆ ತುಪ್ಪ ಸುರಿದಿದ್ದಾರೆ. 'ನಿಮ್ಮ ಕತ್ತಲೆ ಜಗತ್ತಿನಲ್ಲಿ ಎಂತೆಂತಹ ಕರಾಳ ರಹಸ್ಯ ಅಡಗಿವೆ? ಕತ್ತಲೆ ಜಗತ್ತಿನ ರಹಸ್ಯಗಳ ಪುಸ್ತಕಕ್ಕೆ ನೀವು ತಡೆಯಾಜ್ಞೆ ತಂದಿರುವುದೇಕೆ?. ಬಿಜೆಪಿಯಿಂದ ತಿರಸ್ಕೃತಗೊಂಡ ನಿರುದ್ಯೋಗಿ ಪ್ರತಾಪ್‌ಸಿಂಹ ಸುದ್ದಿಯಲ್ಲಿರುವ ಸಲುವಾಗಿ ಮೈಸೂರಿನ ಪತ್ರಕರ್ತರ ಕೈಕಾಲು ಹಿಡಿದು ಪ್ರತಿದಿನವೂ ನನ್ನ ಪ್ರತಿಕ್ರಿಯೆ ತಗೋಳಿ ಅಂತ ಅಂಗಲಾಚುತ್ತಿದ್ದಾರೆ ಎಂಬುದು ಮಾಧ್ಯಮ ಮಿತ್ರರ ಆಫ್‌ದಿ ರೆಕಾರ್ಡ್ ವರದಿ! ಎಲ್ಲಾ ವಿಷಯಕ್ಕೂ ಬಾಯಿ ಹಾಕುವ ಪ್ರತಾಪ ಸಿಂಹರವರು ಬಿಜೆಪಿ ಪಕ್ಷದ ಯಾವ 'ಪೊಸಿಷನ್'ನಲ್ಲಿದ್ದಾರೆ ಎನುವುದನ್ನು ಮೊದಲು ಸ್ಪಷ್ಟಪಡಿಸಬೇಕು ಎಂದು ಬರೆದುಕೊಂಡಿದ್ದಾರೆ.

ಈ ಯುವ ರಾಜಕಾರಣಿಗಳಿಗೆ ಏನಾಗಿದೆ?. ಯಾಕಿಷ್ಟು ಹೊಲಸಾಗಿ ಮಾತನಾಡುತ್ತಿದ್ದಾರೆ?. ತಮ್ಮೊಂದಿಗೆ ಕುಟುಂಬವನ್ನೆಲ್ಲಾ ಬೀದಿಗೆಳೆದು ಅವಮಾನಿಸುವಷ್ಟು ಕೀಳುಮಟ್ಟಕ್ಕೆ ಇಳಿಯಲು ಕಾರಣವೇನು?. ಇವರೆಲ್ಲಾ ಜನಪ್ರತಿನಿಧಿಗಳೇ? ಇವರಿಂದ ರಾಜ್ಯ–ದೇಶದ ಉದ್ಧಾರ ಬಯಸಲು ಸಾಧ್ಯವೇ?.

–ಡಾ.ಪಾವನಮೂರ್ತಿ, ಲಕ್ಷ್ಮೀಪುರಂ, ಮೈಸೂರು.

■ ಕುವೆಂಪುನಗರದ 'ಯಮ' ಬ್ಲಾಕ್!

ಮಾನ್ಯರೆ,

ಮೈಸೂರಿನ ಕುವೆಂಪುನಗರದ ಎಂ ಬ್ಲಾಕ್ 1ನೇ ಕ್ರಾಸ್ ರಸ್ತೆಯ ಒಂದು ಭಾಗವನ್ನು ಉದ್ದಕ್ಕೂ ಅಗೆದಿದ್ದಾರೆ. ಕಾಮಗಾರಿ ಮುಗಿದ ನಂತರ ಅಗೆದ ಭಾಗವನ್ನು ಸರಿಯಾಗಿ ಮುಚ್ಚದೇ ಇರುವುದರಿಂದ ಮಾರಣಾಂತಿಕ ಯಮರೂಪಿ ಗುಂಡಿಗಳು ಉದ್ಭವವಾಗಿವೆ. ಈ ಭಾಗದ ಆರೋಗ್ಯ ಕೇಂದ್ರದ ಬಳಿಯಂತೂ ಯಮ ರೂಪಿ ಕಂದಕಗಳು ರೂಪುಗೊಂಡಿದ್ದು, ಇದು 'ಯಮ' ಬ್ಲಾಕ್ ಆಗಿದೆ.

ಈ ರಸ್ತೆಯಲ್ಲಿ ಸದಾ ವಾಹನ ಸಂಚಾರ ದಟ್ಟವಾಗಿರುತ್ತದೆ. ಆಟೋ, ಸ್ಕೂಟರ್, ಕಾರು ಹಾಗೂ ಶಾಲಾ ವಾಹನ (ವ್ಯಾನ್) ಸಂಚಾರವೂ ಅಧಿಕ.

ಕತ್ತಲಾಗುತ್ತಿದ್ದಂತೆ ಈ ಜಾಗದಲ್ಲಿ ಇರುವ ಗುಂಡಿಯು ಗೋಚರಿಸುವುದಿಲ್ಲ. ಈ ಗುಂಡಿಗೆ ಬಿದ್ದ ವಾಹನಗಳು ಮಗುಚಿಕೊಳ್ಳುವುದು ಖಚಿತ. ದ್ವಿಚಕ್ರ ವಾಹನಗಳು ಈ ಗುಂಡಿಗೆ ಬಿದ್ದರೆ ಸವಾರರ ಕತೆ ಮುಗಿದಂತೆಯೇ!

ಈ ಭಾಗದಲ್ಲಿ ಶಾಲಾ ಮಕ್ಕಳನ್ನು ದ್ವಿಚಕ್ರ ವಾಹನದಲ್ಲಿ ಕರೆದೊಯ್ಯುವ ತಾಯಂದಿರ ಸಂಖ್ಯೆ ಹೆಚ್ಚು. ಹಾಗಾಗಿ ಇವರೆಲ್ಲರ ಪ್ರಾಣವನ್ನು ರಕ್ಷಿಸುವ ಜವಾಬ್ದಾರಿ ಪಾಲಿಕೆ ಹಾಗೂ ಪೊಲೀಸರದ್ದು. ಅಪಘಾತ ನಡೆದು ಅನಾಹುತ, ಸಾವು–ನೋವು ಸಂಭವಿಸಿದ ನಂತರ ಯಾವುದೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ 'ಪೋಸು' ನೀಡಿದರೆ ಯಾವುದೇ ಪ್ರಯೋಜನವಿಲ್ಲ. ಅಪಘಾತ ನಡೆದ ನಂತರ ದೂರು, ಎಫ್‌ಐಆರ್, ಮಹಜರ್, ಶವ ಪರೀಕ್ಷೆ, ತನಿಖೆ ಇತ್ಯಾದಿ ಕ್ರಮಗಳನ್ನು ನಡೆಸುವ ಬದಲಾಗಿ ಅನಾಹುತಕ್ಕೂ ಮುನ್ನ ಎಚ್ಚೆತ್ತುಕೊಳ್ಳುವುದು ಜಾಣತನ.

ಈ ಭಾಗದಲ್ಲಿ ಕಾಮಗಾರಿಗೆಂದು ರಸ್ತೆಗಳನ್ನು ಅಗೆದ ನಂತರ ಆ ಗುಂಡಿಗಳನ್ನು ಮುಚ್ಚದೇ ಬೇಜವಾಬ್ದಾರಿ ಮೆರೆದ ಕಾಂಟ್ರಾಕ್ಟರ್ ವಿರುದ್ಧ ಪೊಲೀಸರು ಈ ಕೂಡಲೇ ಕ್ರಿಮಿನಲ್ ಪ್ರಕರಣ ದಾಖಲಿಸಿ ದಂಡಿಸುವ ಜೊತೆಗೆ, ಪಾಲಿಕೆಯೂ ಕೂಡ ಈ ಕಂಟ್ರಾಕ್ಟರ್ ಬಾಲ ಕತ್ತರಿಸಬೇಕಾಗಿದೆ.

ಇದು ಸಾಧ್ಯವಾಗದಿದ್ದರೆ ಮೈಸೂರು ಪೊಲೀಸ್ ಆಯುಕ್ತರು ಮೈಸೂರು ನಗರ ಪಾಲಿಕೆ ಆಯುಕ್ತರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕಾಗುತ್ತದೆ. ಈ ಜಾಗದಲ್ಲಿ ಅಪಘಾತ ನಡೆದು ಅನಾಹುತ, ಪ್ರಾಣ ಹಾನಿ ಸಂಭವಿಸಿದರೆ ಪಾಲಿಕೆ ಆಯುಕ್ತರು ಹಾಗೂ ಪೊಲೀಸ್ ಆಯುಕ್ತರೇ ಜವಾಬ್ದಾರರು. ಈ ಕೂಡಲೇ ಪೊಲೀಸ್ ಆಯುಕ್ತರು ಹಾಗೂ ಪಾಲಿಕೆ ಆಯುಕ್ತರು ಕುವೆಂಪುನಗರದ 'ಎಂ' ಬ್ಲಾಕ್ ಒಂದನೇ ಅಡ್ಡ ರಸ್ತೆಯ 'ಯಮ' ಬ್ಲಾಕ್ ಬಳಿ ಇರುವ ಈ ಜಾಗಕ್ಕೆ ಭೇಟಿ ನೀಡಿ ಈ ರಸ್ತೆಯನ್ನು ವಿರೂಪಗೊಳಿಸಿದವರ ವಿರುದ್ಧ ಕ್ರಮ ಜರುಗಿಸಬೇಕಾಗಿದೆ.

–ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಗುರಿ ಸಾಧನೆಗೆ ಭರವಸೆಯ ಬಲ

ನಾವು ಜೀವನದಲ್ಲಿ ಮೇಲೆ ಬರಬೇಕಾದರೆ ನಮ್ಮ ಮುಂದೆ ಒಂದು ಗುರಿ ಇರಬೇಕು. ನಂತರ ಅದನ್ನು ಸಾಧಿಸುವುದು ಹೇಗೆ ಎಂದು ಚಿಂತಿಸಬೇಕು. ಒಮ್ಮೆ ಮಾನಸಿಕವಾಗಿ ಆ ಗುರಿ ತಲುಪಲು ಸಿದ್ಧವಾದ ನಂತರ ಅದೇನೇ ಕಷ್ಟಗಳು ಬಂದರೂ ಆ ದಾರಿಯಿಂದ ವಿಚಲಿತರಾಗಬಾರದು. ಆದರೆ ಇಂತಹ ಗುರಿಯನ್ನು ಹಾಕಿಕೊಳ್ಳುವಾಗ ಆದಷ್ಟೂ ವಾಸ್ತವಕ್ಕೆ ಹತ್ತಿರವಾಗಿರುವಂತೆ ನೋಡಿಕೊಳ್ಳಬೇಕು. ಆರಂಭದಲ್ಲಿ ಗುರಿ ಚಿಕ್ಕದಾಗಿದ್ದರೂ ಒಂದು ಹಂತ ತಲುಪಿದಾಗ ಅದರ ಪರಾಮರ್ಷೆ ಮಾಡಿಕೊಂಡು ಮತ್ತೆ ಮುಂದಿನ ದೊಡ್ಡದಾದ ಗುರಿಯನ್ನು ಹಾಕಿಕೊಳ್ಳಬಹುದು. ಹಾಗಾದಾಗ ದೊಡ್ಡದಾದ ಗುರಿಯನ್ನೂ ತಲುಪಲು ಸಾಧ್ಯವಾಗುತ್ತದೆ. ಒಮ್ಮೆ ಗುರಿಯನ್ನು ನಿಗಧಿಪಡಿಸಿಕೊಂಡ ನಂತರ ಅದನ್ನು ಸಾಧಿಸುವ ಕಡೆಗೆ ನಿರಂತರ ಪ್ರಯತ್ನ ಇರಬೇಕು.



> “ ಬದುಕು ಎಂದಾಗ ಅದು ಭರವಸೆಯ ಮೇಲೆಯೇ ನಿಲ್ಲಬೇಕಾಗುತ್ತದೆ. ನಮಗೆ ಬದುಕಿನಲ್ಲಿ ಭರವಸೆ ಇಲ್ಲ ಎಂದಾದಾಗ ನಾವು ಏನನ್ನೂ ಸಾಧಿಸಲಾಗುವುದಿಲ್ಲ. ಅಲ್ಲದೆ ಬದುಕಿನ ಪಯಣದಲ್ಲಿ ನಾವು ಹಲವು ಏರುಪೇರುಗಳನ್ನು ಕಾಣಬೇಕಾಗುತ್ತದೆ. ಏರು ಕಂಡಾಗ ಭಯಗೊಂಡರೆ ಮುಂದೆ ಸಿಗುವ ಇಳಿಜಾರಿನ ಆನಂದ ನಮಗೆ ಗೊತ್ತಾಗುವುದೇ ಇಲ್ಲ. ಅದಕ್ಕೇ ಹೇಳುವುದು, ಬದುಕು ಎಂದರೆ ಅದು ಹಾದಿಯಲ್ಲಿರುವ ಹೂವುಗಳು ಮಾತ್ರವೇ ಅಲ್ಲ. ಅಲ್ಲಿ ಮುಳ್ಳುಗಳೂ ಇರುತ್ತವೆ. ಹೂವು ಬೇಕೆಂದಾಗ ಅಲ್ಲಿರುವ ಮುಳ್ಳಿನ ಬಗ್ಗೆಯೂ ಅರಿವಿರಬೇಕಾಗುತ್ತದೆ. ಆ ಜ್ಞಾನ ಇದ್ದಾಗ ಮಾತ್ರ ನಾವು ಉಪಾಯವಾಗಿ ಹೂವನ್ನು ಪಡೆಯಬಹುದಾಗಿದೆ.

ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದನ್ನು ಮೊದಲು ಮನವರಿಕೆ ಮಾಡಿಕೊಳ್ಳಬೇಕು. ದೊಡ್ಡದಾದ ಬಂಡೆಯಲ್ಲಿ ಒಬ್ಬ ಶಿಲ್ಪಿ ಮೂರ್ತಿಯನ್ನು ಗುರುತಿಸುವಂತೆ ನಾವೂ ನಮ್ಮ ಸಾಧನೆಯ ಅಂತಿಮ ಚರಣ ಹೇಗಿರಬೇಕು ಎಂಬುದನ್ನು ಕಲ್ಪಿಸಿಕೊಂಡು, ಅದರ ಕಡೆಗೆ ನಿರಂತರವಾಗಿ ಚಲಿಸಬೇಕು. ಸಾಧನೆ ಒಂದು ರೀತಿ ತಪಸ್ಸು ಇದ್ದ ಹಾಗೆ. ಹಿಂದೆ ತಪಸ್ಸು ಮಾಡುತ್ತಿದ್ದವರ ತಪಸ್ಸು ಭಂಗವಾಗುವಂತಹ ಹಲವು ಪ್ರಸಂಗಗಳು ನಡೆಯುತ್ತಿದ್ದವು. ಅದರಿಂದ ವಿಚಲಿತರಾಗದಿದ್ದವರೇ ಗೆಲ್ಲುತ್ತಿದ್ದರು ಎಂಬುದು ನಮ್ಮ ಅರಿವಿನಲ್ಲಿರಬೇಕು. ನಮ್ಮ ಗುರಿ ಸಾಧನೆಯಲ್ಲೂ ಇಂತಹ ತಲ್ಲಣಗಳು ಬರಬಹುದು. ಆದರೆ ನಾವು ವಿಚಲಿತರಾಗಬಾರದು. ಗುರಿ ಸಾಧನೆಗೆ ಅಡ್ಡಿ ಆತಂಕಗಳು ಯಾವುದೇ ಕಾರಣಕ್ಕೂ ಬಾರದಂತೆ ನೋಡಿಕೊಳ್ಳಬೇಕು. ನಮ್ಮ ಗುರಿ ಸಾಧನೆಯ ಭರವಸೆ ನಮಗಿರಬೇಕು. ಅದಕ್ಕೆ ತಕ್ಕಂತೆ ಬದುಕನ್ನೂ ರೂಪಿಸಿಕೊಳ್ಳಬೇಕು.

ಬದುಕು ಎಂದಾಗ ಅದು ಭರವಸೆಯ ಮೇಲೆಯೇ ನಿಲ್ಲಬೇಕಾಗುತ್ತದೆ. ನಮಗೆ ಬದುಕಿನಲ್ಲಿ ಭರವಸೆ ಇಲ್ಲ ಎಂದಾದಾಗ ನಾವು ಏನನ್ನೂ ಸಾಧಿಸಲಾಗುವುದಿಲ್ಲ. ಅಲ್ಲದೆ ಬದುಕಿನ ಪಯಣದಲ್ಲಿ ನಾವು ಹಲವು ಏರುಪೇರುಗಳನ್ನು ಕಾಣಬೇಕಾಗುತ್ತದೆ. ಏರು ಕಂಡಾಗ ಭಯಗೊಂಡರೆ ಮುಂದೆ ಸಿಗುವ ಇಳಿಜಾರಿನ ಆನಂದ ನಮಗೆ ಗೊತ್ತಾಗುವುದೇ ಇಲ್ಲ. ಅದಕ್ಕೇ ಹೇಳುವುದು, ಬದುಕು ಎಂದರೆ ಅದು ಹಾದಿಯಲ್ಲಿರುವ ಹೂವುಗಳು ಮಾತ್ರವೇ ಅಲ್ಲ. ಅಲ್ಲಿ ಮುಳ್ಳುಗಳೂ ಇರುತ್ತವೆ. ಹೂವು ಬೇಕೆಂದಾಗ ಅಲ್ಲಿರುವ ಮುಳ್ಳಿನ ಬಗ್ಗೆಯೂ ಅರಿವಿರಬೇಕಾಗುತ್ತದೆ. ಆ ಜ್ಞಾನ ಇದ್ದಾಗ ಮಾತ್ರ ನಾವು ಉಪಾಯವಾಗಿ ಹೂವನ್ನು ಪಡೆಯಬಹುದಾಗಿದೆ. ಅಂದರೆ ಯಾವುದನ್ನು ಪಡೆಯಬೇಕಾದರೂ ಒಂದಷ್ಟು ಕಷ್ಟಗಳನ್ನು ಅನುಭವಿಸಲೇಬೇಕಾಗುತ್ತದೆ. ಅಲ್ಲಿ ಕಷ್ಟವಿದೆ, ನನಗೆ ಸಾಧ್ಯವಿಲ್ಲ ಎಂದು ಕುಳಿತರೆ ಏನನ್ನೂ ಸಾಧಿಸಲು ಸಾಧ್ಯವಾಗುವುದಿಲ್ಲ.

ಇದಕ್ಕೆ ನಮಗೆ ಸಿಗುವ ಉತ್ತಮ ಉದಾಹರಣೆ ಭಾರತದ ಹಿಂದಿನ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ. ಅವರದ್ದು ಅತ್ಯಂತ ಬಡತನದ ಕುಟುಂಬ. ಆದರೆ ಅದು ಅವರ ಸಾಧನೆಯ ಹಾದಿಗೆ ಬಡತನ ತೊಡಕಾಗಲಿಲ್ಲ. ಅವರು ಬಡತನದಲ್ಲೇ ಅರಳಿದವರು. ಓದಿಗಾಗಿ ಹಣ ಹೊಂದಿಸಲು ಮನೆಮನೆಗೆ ಸೈಕಲ್‌ನಲ್ಲಿ ವೃತ್ತಪತ್ರಿಕೆ ಹಂಚಿದರು. ಅವರಿಗೆ ತಾನು ಮುಂದೆ ಏನನ್ನಾದರೂ ಸಾಧಿಸಲೇಬೇಕು ಎಂಬ ಛಲ ಇದ್ದುದರಿಂದ ಎಲ್ಲಾ ಕಷ್ಟಗಳನ್ನು ನಗುನಗುತ್ತಲೇ ಸ್ವೀಕರಿಸಿದರು. ಅವರು ಮುಂದೆ ದೊಡ್ಡವಿಜ್ಞಾನಿಯಾದರು. ಭಾರತದ ರಾಷ್ಟ್ರಪತಿಯೂ ಆದರು. ಕೊನೆ ದಿನದವರೆಗೆ ಲವಲವಿಕೆಯಿಂದ ಓಡಾಡಿಕೊಂಡಿದ್ದರು. ರಾಷ್ಟ್ರಪತಿಯಾದವರು ಹೀಗೂ ಸರಳವಾಗಿ ಇರಬಹುದು ಎಂಬುದನ್ನು ತೋರಿಸಿಕೊಟ್ಟರು. ಅವರು ಹೇಳುತ್ತಿದ್ದುದು ಪರಿಸ್ಥಿತಿಗಳು ಕಠಿಣವಾಗಿರಬಹುದು, ಆದರೆ ಭರವಸೆ ಇದ್ದಾಗ ಮಾತ್ರ ನಾವು ಎತ್ತರಕ್ಕೆ ಏರಬಹುದು. ಎಂದು. ಇಂತಹುದೇ ಉದಾಹರಣೆ ನಮಗೆ ಸಿಗುವುದು ಹೆಲೆನ್ ಕೆಲ್ಲರ್ ಅವರಿಂದ. ಆಕೆ ಕಣ್ಣು, ಕಿವಿ ಎರಡನ್ನೂ ಕಳೆದುಕೊಂಡರೂ ಶಿಕ್ಷಕಿ ಅನ್‌ಸುಲಿವನ್ ಎಂಬುವರ ಸಹಾಯದಿಂದ ವಿಶ್ವಪ್ರಸಿದ್ಧ ಲೇಖಕಿಯಾದರು. ಅಂಧಕಾರದಲ್ಲೂ ಬೆಳಕು ಕಾಣಬಹುದು ಎಂಬುದು ಅವರ ಜೀವನದಿಂದ ತಿಳಿಯುತ್ತದೆ.

ಇದರಿಂದ ನಮಗೆ ಗೊತ್ತಾಗುವುದು ಎಂದರೆ ನಾವು ಜೀವನದಲ್ಲಿ ಏನನ್ನಾದರೂ ಸಾಧಿಸಬೇಕೆಂದರೆ ಭರವಸೆಯನ್ನು ಕಳೆದುಕೊಳ್ಳಬಾರದು ಎಂದು. ಇತ್ತೀಚೆಗೆ ಅತ್ಯಂತ ಹೆಸರು ಗಳಿಸಿದ ಕಾಂತಾರ ಸಿನಿಮಾದ ನಿರ್ದೇಶಕ ರಿಷಬ್‌ಶೆಟ್ಟಿ ಅವರು ಹಲವು ಸಂದರ್ಶನಗಳಲ್ಲಿ ಇದೇ ಮಾತನ್ನು ಹೇಳಿದ್ದಾರೆ. ಜೀವನ ನಿರ್ವಹಣೆಗಾಗಿ ನೀರು ಹಂಚುವ ಕೆಲಸ ಮಾಡುತ್ತಿದ್ದರು. ಹೆಗಲ ಮೇಲೆ ನೀರಿನ ಕ್ಯಾನ್‌ಗಳನ್ನು ಇಟ್ಟುಕೊಂಡು ಮನೆಮನೆಗೆ ತಲುಪಿಸುತ್ತಿದ್ದರು. ಆದರೆ ಅವರು ಎಂದಿಗೂ ಜೀವನದಲ್ಲಿ ಭರವಸೆ ಕಳೆದುಕೊಳ್ಳಲಿಲ್ಲ. ಅವರು ಹೇಳುತ್ತಿರುತ್ತಾರೆ, ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಲ್ಲಿ ಓದಿಸುತ್ತಿದ್ದೇನೆ ಎಂದು. ಅವರ ಮುಂದೆ ಒಂದು ದೊಡ್ಡ ಕನಸಿತ್ತು, ಅದನ್ನು ಸಾಧಿಸಲು ಅವರು ಕಠಿಣವಾದ ಪರಿಶ್ರಮ ವಹಿಸಿದರು.

ಅವರು ಅಮಿತಾಬ್ ಬಚ್ಚನ್ ಅವರು ನಡೆಸಿಕೊಡುವ ಕೌನ್‌ಬನೇಗಾ ಕರೋಡ್‌ಪತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅದರಲ್ಲಿ ಅವರೊಂದು ಪ್ರಶ್ನೆಗೆ ಸರಿ ಉತ್ತರದ ಗೊಂದಲವಾದಾಗ 'ಆಡಿಯನ್ಸ್ ಪೋಲ್' (ವೀಕ್ಷಕರ ಮತದಾನ) ಸಹಾಯ ಪಡೆದರು. ಉತ್ತರ ಸರಿಯಾಗಿತ್ತು. ಆಟ ಮುಂದುವರೆಸಿದರು. ಐದು ಲಕ್ಷ ಗಳಿಸಿದರು. ಪುನಃ ಅವರಿಗೆ ಎರಡು ಆಯ್ಕೆ ನೀಡಲಾಯಿತು. ನಿಮಗೆ ಮತ್ತೆ 'ಆಡಿಯನ್ಸ್ ಪೋಲ್' ಕೊಡಬಹುದು ಅಥವಾ ಐದು ಲಕ್ಷ ರೂಪಾಯಿ ಕೊಡಬಹುದು. ನಿಮಗೆ ಯಾವುದು ಬೇಕು ಎಂದು ಕೇಳಿದಾಗ ಅವರ ಮಾತು ಮನ ಮುಟ್ಟುವಂತಿತ್ತು. ನನಗೆ ಈಗ ಬೇಡವೆಂದರೂ ಜನರು ಹಣ ಕೊಡುತ್ತಿದ್ದಾರೆ. ನನಗೆ ಹಣ ಬೇಡ. ಮತ್ತೆ ಆಡಿಯೆನ್ಸ್ ಪೋಲ್ ಅವಕಾಶವನ್ನೇ ನೀಡಿ ಎಂದು. ಇದು ಸಾಧಕನ ಮನೋಭಾವವಾಗಬೇಕು. ಅವರಿಗೆ ಗೊತ್ತಿದೆ, ಹಣದ ಹಿಂದೆ ಹೋಗಬಾರದು, ಬದಲಿಗೆ ಜನರ ಹಿಂದೆ ಹೋಗಬೇಕು ಎಂದು. ಹಾಗೆ ನೋಡಿದರೆ ಅದೇ ಅವರ ಯಶಸ್ಸಿನ ಗುಟ್ಟು ಎಂಬುದಲ್ಲಿ ಸಂಶಯವೇ ಇಲ್ಲ.

ಇಂತಹುದೇ ಮನೋಭಾವವನ್ನು ನಮಗೆ ದಕ್ಷಿಣ ಆಫ್ರಿಕಾದ ಮಾಜಿ ರಾಷ್ಟ್ರಪತಿ ನೆಲ್ಸನ್ ಮಂಡೇಲಾ ಅವರ ಜೀವನದಲ್ಲೂ ಕಾಣಸಿಗುತ್ತದೆ. ಅವರು ಕಾರಾಗೃಹದಲ್ಲಿ ಕಳೆದಿದ್ದು ಬರೋಬ್ಬರಿ 27 ವರ್ಷಗಳು. ಆದರೆ ಅವರಿಗೆ ಮುಂದೆ ನ್ಯಾಯ ಹಾಗೂ ಸಮಾನತೆಗೆ ಮನ್ನಣೆ ಸಿಗುತ್ತದೆ ಎಂಬ ಭರವಸೆಯಿಂದ ಜೈಲುವಾಸ ಅನುಭವಿಸಿದರು. ಎಂದಿಗೂ ತಮ್ಮ ನಿರ್ಧಾರದಿಂದ ಹೊರಬರಲಿಲ್ಲ ತನ್ನ ಜೀವನ ಇರುವುದು ತನ್ನೊಬ್ಬನಿಗಾಗಿ ಅಲ್ಲ. ಬದಲಿಗೆ ತಮ್ಮ ಸಮುದಾಯದವರಿಗಾಗಿ. ಇದಕ್ಕಾಗಿ ನಾನು ಎಂತಹ ತ್ಯಾಗಕ್ಕೂ ಸಿದ್ಧ ಎಂದು ಅವರು ಭಾವಿಸಿದರು. ಕೊನೆಗೂ ಅವರ ಜೀವನದಲ್ಲಿ ಅರುಣೋದಯವಾಯಿತು. ಬಂಧನದಿಂದ ಬಿಡುಗಡೆಯಾದರು. ನಂತರ ಅಲ್ಲಿನ ರಾಷ್ಟ್ರಪತಿಯಾದರು. ಆಗಲೂ ತಮ್ಮ ಜನಗಳ ಹಕ್ಕುಗಳಿಗಾಗಿಯೇ ಜೀವನ ಮುಡಿಪಿಟ್ಟರು. ಇಂತಹವರನ್ನು ನಾವು ಆದರ್ಶವಾಗಿ ಪರಿಗಣಿಸಬಹುದು.

ಮತ್ತೊಂದು ಪ್ರೇರಣಾದಾಯಿ ನಿಜಗಥೆಯನ್ನು ಗಮನಿಸಬಹುದು. ನಮಗೆ ಬರ್ಮಾ ದೇಶ ಗೊತ್ತು. ಈಗದನ್ನು ಮ್ಯಾನ್ಮಾರ್ ಎಂದು ಕರೆಯಲಾಗುತ್ತದೆ. ಆ ದೇಶವೂ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತ್ತು. ಆ ದೇಶವೂ ನಮ್ಮ ದೇಶದಂತೆ ಹಲವು ಶತಮಾನಗಳ ಕಾಲ ಹಲವರ ಆಕ್ರಮಣಕ್ಕೆ ಒಳಗಾಗಿತ್ತು. ಅದು ಸ್ವಾತಂತ್ರ್ಯ ಪಡೆದಿದ್ದು 1948ರ ಜನವರಿ 4 ರಂದು. ಈಗ ಅದನ್ನು ಮ್ಯಾನ್ಮಾರ್ ಒಕ್ಕೂಟ ಎಂದು ಕರೆಯಲಾಗುತ್ತದೆ. ಈ ಕಥೆ ಆದೇಶಕ್ಕೆ ಸಂಬಂಧಿಸಿದ್ದಲ್ಲ. ಆದರೆ ಕಥೆ ಇರುವುದು ಒಬ್ಬ ಭಾರತೀಯ ಮಹಿಳೆಯದ್ದು. ಆಕೆ ಅಲ್ಲಿ 1917 ರಲ್ಲಿ ಜನಿಸಿದಳು. ಆಕೆಯ ಹೆಸರು ಪದ್ಮಾವತಿ ಐಯ್ಯರ್. ಆಕೆಯ ಮೂಲ ತಮಿಳುನಾಡು. ಆಕೆ ಜನಿಸಿದ್ದು ಅತ್ಯಂತ ಸಾಧಾರಣ ಬಡ ಕುಟುಂಬದಲ್ಲಿ. ಅವರ ತಂದೆ ಮ್ಯಾನ್ಮಾರ್‌ನ ರಂಗೂನ್‌ಗೆ ಕೆಲಸ ಅರಸಿ ಹೋಗಿದ್ದರು. ಆ ಸಮಯದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅಂತಹ ಪ್ರೋತ್ಸಾಹ ಇರಲಿಲ್ಲ. ಆದರೆ ತಂದೆ ಕಷ್ಟಪಟ್ಟಾದರೂ ಮಗಳನ್ನು ಓದಿಸಬೇಕೆಂದು ಶ್ರಮ ವಹಿಸಿ ಆಕೆಗೆ ಅಲ್ಲಿ ಎಂಬಿಬಿಎಸ್ ಮಾಡಿಸಿದರು. ಬರ್ಮಾ ಸ್ವಾತಂತ್ರ್ಯವಾದ ನಂತರವೂ ಅದರ ಮೇಲಿನ ಆಕ್ರಮಣ ನಿಲ್ಲಲಿಲ್ಲ.

1949 ರಲ್ಲಿ ಜಪಾನ್ ದೇಶದವರು ಅಲ್ಲಿ ಆಕ್ರಮಣ ಮಾಡಿದರು. ಆಗ ಈಕೆಯ ತಂದೆ ಮಗಳೊಂದಿಗೆ ತಮಿಳುನಾಡಿನ ಕೊಯಮತ್ತೂರಿಗೆ ವಾಪಸ್ಸಾದರು. ಅವರಿಗೆ ಮಗಳು ಲಂಡನ್‌ನಲ್ಲಿ ಎಫ್‌ಆರ್‌ಸಿಪಿ ಪದವಿ ಪಡೆಯಬೇಕೆಂಬ ಆಸೆಯಿತ್ತು. ಹಾಗೆಯೇ ಕಳುಹಿಸಿದರು. ಆಕೆ ಓದು ಮುಂದುವರೆಸಿ ನಂತರ ಅಮೇರಿಕಾದ ಜಾನ್ಸ್ ಹಾಕಿನ್ಸ್ ವಿಶ್ವವಿದ್ಯಾನಿಲಯದಲ್ಲಿ ಓದು ಮುಂದುವರೆಸಿ ಹೃದಯ ರೋಗ ತಜ್ಞೆಯಾದರು. ಆಕೆಗೆ ಅಲ್ಲಿ ದೊಡ್ಡ ಹುದ್ದೆಗಳಿಗೆ ಹೋಗುವ ಅವಕಾಶವಿತ್ತು. ಆದರೆ ಆಕೆ ಹಣಕ್ಕೆ ಆಸೆ ಪಡದೆ ಭಾರತಕ್ಕೆ ಹಿಂದಿರುಗಬೇಕು. ತನ್ನ ದೇಶದ ಜನರಿಗೆ ಕಿಂಚಿತ್ತಾದರೂ ಸೇವೆ ಮಾಡಬೇಕು ಎಂದು ಬಯಸಿದರು. 1953 ರಲ್ಲಿ ಭಾರತಕ್ಕೆ ಬಂದು ಲೇಡಿ ಹಾರ್ಡಿಂಜ್ ಕಾಲೇಜಿನಲ್ಲಿ ಕೆಲಸ ಆರಂಭಿಸಿದರು. ಅವರು ಆಗ ಭಾರತದ ಮೊದಲ ಲೇಡಿ ಕಾರ್ಡಿಯಾಲಜಿಸ್ಟ್ ಎನಿಸಿಕೊಂಡರು.

ಆಕೆ ತನ್ನ ದೇಶದವರಿಗಾಗಿ ಏನನ್ನಾದರೂ ಮಾಡಬೇಕು ಎಂದು ಸತತವಾಗಿ ಚಿಂತಿಸುತ್ತಿದ್ದರು. ಹಾಗಾಗಿ ದೇಶದಲ್ಲಿ ಚಿಕಿತ್ಸೆಗಾಗಿ ಮೊದಲ ಹೃದಯ ಕ್ಯಾಥ್ ಲ್ಯಾಬ್ ಆರಂಭಿಸಿದರು. 1962 ರಲ್ಲಿ ಆಲ್ ಇಂಡಿಯಾ ಹಾರ್ಟ್ ಫೌಂಡೇಶನ್ ಪ್ರಾರಂಭಿಸಿದರು. ಆಗ ಆಕೆಯ ಹೆಸರು ದೇಶಾದ್ಯಂತ ವ್ಯಾಪಿಸಿತು. ಆಕೆಗೆ ಭಾರತ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿತು. ಭಾರತದ ಹಲವಾರು ಪ್ರಸಿದ್ಧ ಆಸ್ಪತ್ರೆಗಳ ಆಡಳಿತಾಧಿಕಾರಿಯೂ ಆಗಿದ್ದರು. ಅವರು ದೆಹಲಿಯಲ್ಲಿ 'ನ್ಯಾಶನಲ್ ಹಾರ್ಟ್ ಇನ್ಸ್ಟಿಟ್ಯೂಟ್' ಸಹ ಸ್ಥಾಪಿಸಿದರು. ಮತ್ತೊಂದು ವಿಶೇಷ ಎಂದರೆ ಇವರ ಸಹೋದರಿ ಜಾನಕಿಯವರೂ ನರರೋಗ ತಜ್ಞೆಯಾಗಿದ್ದು ಇಬ್ಬರೂ ವಿವಾಹವಾಗದೇ ಉಳಿದು, ಇಂತಹ ಸಾಧನೆಗೆ ಕಾರಣರಾದರು. ಇವರಿಬ್ಬರೂ ಸೇರಿ ಜಾನಕಿ–ಪದ್ಮಾವತಿ ಟ್ರಸ್ಟ್ ಸ್ಥಾಪಿಸಿ ತಾವು ಗಳಿಸಿದ ಅಷ್ಟೂ ಹಣವನ್ನು ಅದಕ್ಕಾಗಿ ವಿನಿಯೋಗಿಸಿದರು. ಈ ಸಂಸ್ಥೆ ಬಡವರ ಚಿಕಿತ್ಸೆಯ ಮೂಲ ಉದ್ದೇಶ ಇಟ್ಟುಕೊಂಡಿದೆ. ಪದ್ಮಾವತಿ ತಮ್ಮ ಇಡೀ ಜೀವನವನ್ನು ಬಡವರ ಸೇವೆಗಾಗಿಯೇ ಮೀಸಲಿಟ್ಟು ತಮ್ಮ 103 ನೆಯ ವಯಸ್ಸಿನಲ್ಲಿ, 2020ರ ಕೊರೊನಾ ಸಮಯದಲ್ಲಿ ಮೃತಪಟ್ಟರು. ತಮ್ಮ ಜೀವನದ ಸುಖವನ್ನು ಬಡ ರೋಗಿಗಳ ಚಿಕಿತ್ಸೆಯಲ್ಲಿ ಕಂಡ ಇವರ ಹೆಸರು ಹೆಚ್ಚು ಪ್ರಸಿದ್ಧಿಗೆ ಬರದಿರುವುದು ವಿಷಾದದ ಸಂಗತಿ. ಆದರೆ ಇವರ ಕಥೆ ಅನೇಕರಿಗೆ ಪ್ರೇರಣೆ ನೀಡುವುದಂತೂ ಖಚಿತ. ಜೀವನದ ಸಾಧನೆಗೆ ಒಂದು ಭರವಸೆ ಇರಬೇಕು, ಅದರಲ್ಲಿ ಎಂದಿಗೂ ಶಿಥಿಲತೆ ಬರದಂತೆ ನೋಡಿಕೊಳ್ಳಬೇಕು. ಆಗಲೇ ಸಾಧನೆ ಸಾಧ್ಯವಾಗುವುದು.

ಸಾರ್ವಜನಿಕರೊಂದಿಗೆ ಸಹನೆ, ಸೌಜನ್ಯದಿಂದ ವರ್ತಿಸಿ

ಪೊಲೀಸರಿಗೆ ಮಾರ್ಗಸೂಚಿ ಬಿಡುಗಡೆ

ಬೆಂಗಳೂರು, ಅ. 24: ಇತ್ತೀಚಿನ ದಿನಗಳಲ್ಲಿ ಪೊಲೀಸರು ಸಾರ್ವಜನಿಕರ ಮೇಲೆ ದರ್ಪ, ಹಲ್ಲೆ ನಡೆಸಿರುವುದೂ ವರದಿ ಆಗಿವೆ. ಈ ನಿಟ್ಟಿನಲ್ಲಿ ರಾಜ್ಯದ ಪೊಲೀಸರಿಗೆ ಡಿಜಿ ಮತ್ತು ಐಜಿಪಿ ಡಾ. ಎಂ.ಎ.ಸಲೀಂ ಮಹತ್ವದ ಸೂಚನೆ ನೀಡಿದ್ದು, ಜನರ ಜೊತೆಗೆ ಸೌಜನ್ಯದಿಂದ ವರ್ತಿಸುವಂತೆ ಸುತ್ತೋಲೆ ಹೊರಡಿಸಿದ್ದಾರೆ.

ಸುತ್ತೋಲೆಯಲ್ಲಿ ಏನಿದೆ: ಕಾರ್ಯವಿಧಾನಗಳಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಪೊಲೀಸ್ ಠಾಣೆಗೆ ಭೇಟಿ ನೀಡುವ ಯಾವುದೇ ವ್ಯಕ್ತಿಯ ಹಿನ್ನೆಲೆಯನ್ನು ಗಮನಿಸಬಾರದು. ಎಲ್ಲರನ್ನೂ ಸಮಾನವಾಗಿ ಪರಿಗಣಿಸಬೇಕು. ಸಾರ್ವಜನಿಕರ ಕುಂದುಕೊರತೆ ತಾಳ್ಮೆಯಿಂದ ಆಲಿಸಬೇಕು. ಕಾನೂನಿನ ಪ್ರಕಾರ ಕಾಲವಿಳಂಬವಿಲ್ಲದೇ ದೂರು ದಾಖಲಿಸಬೇಕು. ಸಾರ್ವಜನಿಕರೊಂದಿಗೆ ಮಾತನಾಡುವಾಗ ಒರಟು ಭಾಷೆ ಬೇಡ, ಯಾವಾಗಲೂ ಸೌಜನ್ಯ ಮತ್ತು ಘನತೆಯಿಂದ ವರ್ತಿಸಬೇಕು. ಯಾವ ಸಂದರ್ಭದಲ್ಲೂ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಗಳಿಂದ, ಯಾವುದೇ ರೀತಿಯ ಬೇಡಿಕೆ ಇಡುವುದರಿಂದ ಅಥವಾ ಯಾವುದೇ ಅಕ್ರಮ ಸಹಾಯ, ಲಾಭವನ್ನು ಸ್ವೀಕರಿಸುವುದರಿಂದ ಸಂಪೂರ್ಣವಾಗಿ ದೂರವಿರಬೇಕು.

ಕರ್ತವ್ಯದ ಸಮಯದಲ್ಲಿ, ಕರ್ತವ್ಯ ಮುಗಿದ ನಂತರವೂ ನೈತಿಕವಾಗಿ ಇತರರಿಗೆ ಮಾದರಿಯಾಗುವಂತೆ ಇದ್ದು ಇಲಾಖೆಯ ನೀತಿ ನಿಯಮಗಳನ್ನು ಎತ್ತಿ ಹಿಡಿಯಬೇಕು. ಸ್ಟೇಷನ್ ಹೌಸ್ ಡೈರಿಗಳು ಮತ್ತು ಕೇಸ್ ಫೈಲ್‌ಗಳಲ್ಲಿ ನಿಖರ ಮತ್ತು ಕೇಂದ್ರೀಕರಿಸಿದ ದಾಖಲೆಗಳನ್ನು ಕಾಯ್ದುಕೊಳ್ಳಬೇಕು. ತನಿಖಾ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು ಮತ್ತು ಪ್ರತಿ ಹಂತದಲ್ಲೂ ಜವಾಬ್ದಾರಿಯಿಂದ ಕಾರ್ಯನಿರ್ವಹಣೆ ಮಾಡಬೇಕು.

ಯಾವುದೇ ನಾಗರಿಕರಿಗೆ ಅನಗತ್ಯವಾಗಿ ತೊಂದರೆ ನೀಡಬಾರದು. ಸಂತ್ರಸ್ತರು, ಮಹಿಳೆಯರು, ಹಿರಿಯ ನಾಗರಿಕರಿಗೆ ಮತ್ತು ಮಕ್ಕಳೊಂದಿಗೆ ವಿಶೇಷ ಕಾಳಜಿಯಿಂದ ಮತ್ತು ಸೂಕ್ಷ್ಮತೆಯಿಂದ ವರ್ತಿಸಬೇಕು. ಸಾರ್ವಜನಿಕರ ದೂರುಗಳ ಸ್ಥಿತಿ ಮತ್ತು ಬಾಕಿ ಇರುವ ಪ್ರಕರಣಗಳ ಕುರಿತು ನಾಗರಿಕರಿಗೆ ಮಾಹಿತಿ ನೀಡಬೇಕು. ಕರ್ತವ್ಯಕ್ಕೆ ಹಾಜರಾಗುವುದು ಮತ್ತು ಅಧಿಕೃತ ಕಾರ್ಯಗಳನ್ನು ನಿರ್ವಹಿಸುವಲ್ಲಿ ಶಿಸ್ತಿನಿಂದ ಸಮಯ ಪಾಲನೆ ಮಾಡಬೇಕು.

ತಂತ್ರಜ್ಞಾನ ಬಳಸಿ: ಪೊಲೀಸ್–ಸಾರ್ವಜನಿಕ ಸಂವಹನದಲ್ಲಿ ನ್ಯಾಯಸಮ್ಮತೆಯನ್ನು ಎತ್ತಿಹಿಡಿಯಲು ಸಮವಸ್ತ್ರದ ಮೇಲೆ ಧರಿಸುವ ಕ್ಯಾಮರಾಗಳನ್ನು ಮತ್ತು ಲಭ್ಯವಿರುವ ತಂತ್ರಜ್ಞಾನಗಳನ್ನು ಜವಾಬ್ದಾರಿಯುತವಾಗಿ ಬಳಸಿಕೊಳ್ಳಬೇಕು. ಎಲ್ಲಾ ಅಧಿಕೃತ ವಿಷಯಗಳಲ್ಲಿ ನ್ಯಾಯಾಂಗ ಮತ್ತು ಆಡಳಿತಾತ್ಮಕ ಅಧಿಕಾರಿಗಳಿಗೆ ಪೂರ್ಣ ಸಹಕಾರವನ್ನು ನೀಡಿ, ಶೋಧ, ಬಂಧನ ಅಥವಾ ವಿಚಾರಣೆಯ ಸಮಯದಲ್ಲಿ ಸಾರ್ವಜನಿಕರ ಖಾಸಗಿತನ ಮತ್ತು ಘನತೆಯನ್ನು ಗೌರವಿಸಿ, ಅಧಿಕಾರದ ದುರುಪಯೋಗ ಅಥವಾ ದೌರ್ಜನ್ಯದಿಂದ ದೂರವಿರಿ ಮತ್ತು ಸದ್ವರ್ತನೆಗೆ ಮಾದರಿಯಾಗಿರಿ. ಸಮುದಾಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಮತ್ತು ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಪಾರದರ್ಶಕ, ಕಾನೂನುಬದ್ಧ ಮತ್ತು ಸಹಾನುಭೂತಿಯ ಪೊಲೀಸಿಂಗ್ ಅಭ್ಯಾಸಗಳ ಮೂಲಕ ಸಾರ್ವಜನಿಕರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು.

ಪೊಲೀಸ್ ಕಾರ್ಯಗಳ ಮೇಲೆ ಪ್ರಭಾವ ಬೀರುವ ಅಥವಾ ಭ್ರಷ್ಟಗೊಳಿಸುವ ಯಾವುದೇ ಪ್ರಯತ್ನಗಳು ಕಂಡುಬಂದಲ್ಲಿ ಈ ಬಗ್ಗೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ನೀಡುತ್ತಿರಿ. ಬೇರೆ ಠಾಣಾ ವ್ಯಾಪ್ತಿಯ ದೂರು ಬಂದಲ್ಲಿ ದೂರುದಾರರನ್ನು ಸಂಬಂಧಿಸಿದ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳದೇ, ಠಾಣೆಯಲ್ಲಿ ಶೂನ್ಯ ಪ್ರಥಮ ವರದಿ. ವರದಿಯನ್ನು ದಾಖಲಿಸಿ ಆ ನಂತರ ವ್ಯಾಪ್ತಿಯ ಆಧಾರದ ಮೇಲೆ ಸಂಬಂಧಪಟ್ಟ ಠಾಣೆಗ ದೂರನ್ನು ವರ್ಗಾಯಿಸುವುದು.

ಮಹಿಳೆಯರ ಸಂಜೆ ಠಾಣೆಗೆ ಕರೆತರಬೇಡಿ: ಮಹಿಳೆಯರನ್ನು ಸಂಜೆ 6 ಗಂಟೆಯ ನಂತರ ಪೊಲೀಸ್ ಠಾಣೆಗೆ ವಿಚಾರಣೆಗಾಗಿ ಅಥವಾ ಹೇಳಿಕೆಯನ್ನು ನೀಡಲು ಕರೆತರಬಾರದು. ಮಹಿಳೆಯು ಒಂದು ವೇಳೆ ಆರೋಪಿಯಾಗಿದ್ದಲ್ಲಿ ಅಥವಾ ಸಂತ್ರಸ್ತೆಯಾಗಿದ್ದಲ್ಲಿ ಆಕೆಯನ್ನು ಮಹಿಳಾ ಪೊಲೀಸ್ ಅಧಿಕಾರಿಯ ನೆರವಿನೊಂದಿಗೆ, ಮಹಿಳೆಯ ವಾಸದ ಸ್ಥಳ, ಮನೆಯಲ್ಲಿಯೇ ವಿಚಾರಣೆ ಮಾಡಬೇಕು.



ಡಾ. ಎಂ.ಎ.ಸಲೀಂ

ಕ್ರಿಮಿನಲ್ ಪ್ರಕರಣಗಳಲ್ಲಿ ಮಹಿಳೆಯರು ಭಾಗಿಯಾದಾಗ ಅವರನ್ನು ಬಂಧಿಸಿ ವಿಚಾರಣೆ ನಡೆಸಿದಾಗ, ಅವರಿಗೆ ಯಾವುದೇ ಅವಮಾನಕ್ಕೆ ಒಳಗಾಗದಂತೆ ನೋಡಿಕೊಳ್ಳಬೇಕು ಮತ್ತು ಅವರನ್ನು ಪೊಲೀಸ್ ಠಾಣೆಯಲ್ಲಿ ಇರಿಸಬಾರದು. ಬದಲಿಗೆ ಅವರನ್ನು ರಾಜ್ಯ ಗೃಹ (ಸ್ಟೇಟ್ ಹೋಮ್) ಆಶ್ರಯ ತಾಣಗಳಲ್ಲಿ ಇರಿಸಬೇಕು.

ಅಚ್ಚುಕಟ್ಟಾದ ಸಮವಸ್ತ್ರ: ಉತ್ತಮವಾದ ಸಮವಸ್ತ್ರ, ಮಫ್ತಿ ಬಟ್ಟೆಗಳನ್ನು ಧರಿಸುವ ಪೊಲೀಸ್ ಅಧಿಕಾರಿಯೂ ಸಾರ್ವಜನಿಕರಿಂದ ಉತ್ತಮ ಗೌರವವನ್ನು ಪಡೆಯುತ್ತಾನೆ. ಅಧಿಕಾರಿ ಮತ್ತು ಸಿಬ್ಬಂದಿಗಳು ನೀಟಾದ Turn out ಹೊಂದಿರಬೇಕು. ಇದು ಪೊಲೀಸ್ ಅಧಿಕಾರಿಯ ವ್ಯಕ್ತಿತ್ವ ಹಾಗೂ ಕಾರ್ಯದಕ್ಷತೆಗಳನ್ನು ಉತ್ತೇಜಿಸುತ್ತದೆ. ನೀಟಾದ ಸಮವಸ್ತ್ರವು ವೃತ್ತಿಪರತೆ ಮತ್ತು ಶಿಸ್ತಿನ ಪ್ರತಿಬಿಂಬ ಅಷ್ಟೇ ಅಲ್ಲ ಪರಿಣಾಮಕಾರಿ ಪೊಲೀಸ್ ಕಾರ್ಯ ನಿರ್ವಹಣೆಗೆ ಅತ್ಯಗತ್ಯ.

ಸಮಾಜದಲ್ಲಿ ಪೊಲೀಸ್ ಇಲಾಖೆ ಬಗ್ಗೆ ಉತ್ತಮ ಅಭಿಪ್ರಾಯ ಮೂಡಬೇಕು. ಪಾರದರ್ಶಕತೆ, ಸೌಜನ್ಯದ ವರ್ತನೆ ಮತ್ತು ನಿಷ್ಠೆಯಿಂದ ಕೆಲಸ ಮಾಡುವುದು. ಪೊಲೀಸರ ನಡವಳಿಕೆಯಲ್ಲಿ ಸೌಜನ್ಯ ಮತ್ತು ಘನತೆ ಎದ್ದು ಕಾಣಬೇಕು. ಸಾರ್ವಜನಿಕರ ಮೇಲೆ ಬಲ ಪ್ರಯೋಗ ಮಾಡುವುದು ಅಥವಾ ದರ್ಪದಿಂದ ವರ್ತಿಸುವುದು ಇಲಾಖೆಯ ಘನತೆಗೆ ತಕ್ಕುದಾದ ನಡವಳಿಕೆಯಲ್ಲ. ಹಕ್ಕುಗಳಿಗೆ ಗೌರವ ನೀಡುವುದು ಮತ್ತು ಸಂಯಮದಿಂದ ವರ್ತಿಸಬೇಕು. ಇದು ಇಲಾಖೆಯ ಘನತೆ ಹೆಚ್ಚಿಸಿ ಜನರಲ್ಲಿ ಬಗ್ಗೆ ಗೌರವ ಮೂಡುವಂತೆ ಮಾಡುತ್ತದೆ.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪ್ರತ್ಯೇಕ ಅಪಘಾತ, ಅನಾಹುತ ಪ್ರಕರಣದಲ್ಲಿ ಮೂವರು ಸಾವು

ಬೆಟ್ಟದಪುರದಲ್ಲಿ ಗ್ಯಾಸ್ ಗೀಸರ್‌ನ ವಿಷಾನಿಲ ಸೇವಿಸಿ ಸಹೋದರಿಯರು ಸಾವು; ಹೆಚ್.ಡಿ.ಕೋಟೆ ಬಳಿ ಟ್ರಾಕ್ಟರ್ ಹರಿದು ಬಾಲಕಿ ಮರಣ

ಬೆಟ್ಟದಪುರ, ಹೆಚ್.ಡಿ. ಕೋಟೆ, ಅ.24– ಪ್ರತ್ಯೇಕ ಅಪಘಾತ, ಅನಾಹುತ ಎರಡು ಪ್ರಕರಣಗಳಲ್ಲಿ ಓರ್ವ ಬಾಲಕಿ ಸೇರಿದಂತೆ ಮೂವರು ಸಾವನ್ನಪ್ಪಿರುವ ಘಟನೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಮತ್ತು ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಸಂಭವಿಸಿದೆ.

ಬೆಟ್ಟದಪುರದ ನಿವಾಸಿ ಅಲ್ತಾಫ್ ಮತ್ತು ಸೂರಯ್ಯ ದಂಪತಿಯ ಪುತ್ರಿಯರಾದ ಗುಲ್ಫಾರ್ಮ್ ತಾಜ್ (23) ಮತ್ತು ಸಿಮ್ರಾನ್ ತಾಜ್ (20) ಗ್ಯಾಸ್ ಗೀಸರ್‌ನಿಂದ ಹೊರ ಹೊಮ್ಮಿದ ವಿಷಾನಿಲದಿಂದ ಉಸಿರುಗಟ್ಟಿ ಸಾವನ್ನಪ್ಪಿದರೆ, ಬಿಹಾರದ ಮಧುಬಣಿ ಜಿಲ್ಲೆಯ ಚೋರಯ್ಯ ಗ್ರಾಮದ ಸಾಜನ್ ಮತ್ತು ಸಂಗೀತದೇವಿ ದಂಪತಿಯ ಪುತ್ರಿ ಸಂಜನಾ (5) ಟ್ರಾಕ್ಟರ್ ದುರಂತದಲ್ಲಿ ಅಸುನೀಗಿದ್ದಾಳೆ.


ಗ್ಯಾಸ್ ಗೀಸರ್ ವಿಷಾನಿಲದಿಂದ ಸಾವನ್ನಪ್ಪಿದ ಗುಲ್ಫಾರ್ಮ್ ತಾನ್, ಸಿಮ್ರಾನ್ ತಾಜ್

ಬೆಟ್ಟದಪುರದಲ್ಲಿ ಸ್ನಾನ ಮಾಡುವ ವೇಳೆ ಗ್ಯಾಸ್ ಗೀಸರ್‌ನಿಂದ ಸೋರಿಕೆಯಾದ ವಿಷಾನಿಲದಿಂದ ಗುಲ್ಫಾರ್ಮ್ ಮತ್ತು ಸಿಮ್ರಾನ್ ತಾಜ್ ಸಾವನಪ್ಪಿದ್ದಾರೆ.

ಮನೆಯಲ್ಲಿ ಗ್ಯಾಸ್ ಗೀಸರ್ ಬಳಸಿ ಸ್ನಾನ ಮಾಡುವಾಗ ಸರಿಯಾದ ವೆಂಟಿಲೇಷನ್ ಇಲ್ಲದಿದ್ದರೆ ಈ ರೀತಿಯ ದುರಂತ ಸಂಭವಿಸುತ್ತದೆ ಎಂದು ತಜ್ಞರು ತಿಳಿಸಿದ್ದಾರೆ.

ಗುಲ್ಫಾರ್ಮ್ ಮತ್ತು ಸಿಮ್ರಾನ್ ತಾಜ್ ಅವರು ತಮ್ಮ ಮನೆಯಲ್ಲಿ ಗ್ಯಾಸ್ ಗೀಸರ್ ಬಳಸಿ ಒಟ್ಟಿಗೆ ಸ್ನಾನ ಮಾಡುತ್ತಿದ್ದ ವೇಳೆ ಗ್ಯಾಸ್‌ನಿಂದ ಹೊರಹೊಮ್ಮುವ ವಿಷಾನಿಲದಿಂದ ಉಸಿರುಗಟ್ಟಿ ಪ್ರಜ್ಞೆತಪ್ಪಿ ಬಿದ್ದಿದ್ದಾರೆ. ಸ್ನಾನದ ಮನೆಯಿಂದ ಇವರಿಬ್ಬರು ಎಷ್ಟು ಹೊತ್ತಾದರೂ ಹೊರ ಬಾರದ ಹಿನ್ನೆಲೆಯಲ್ಲಿ ಬಚ್ಚಲ ಮನೆಯ ಬಾಗಿಲು ತಟ್ಟಿ ಕೂಗಿದರೂ ಬಾಗಿಲು ತೆರೆಯದಿದ್ದಾಗ, ಬಾಗಿಲು ಮುರಿದು ಒಳ ಹೋದಾಗ ಇವರಿಬ್ಬರು ಪ್ರಜ್ಞೆ ಇಲ್ಲದೆ ಬಿದ್ದಿದ್ದರು. ತಕ್ಷಣವೇ ಅವರನ್ನು ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ ಅಷ್ಟರಾಗಲೇ ಅವರಿಬ್ಬರು ಸಾವನ್ನಪ್ಪಿದ್ದರು.

ಈ ಕುರಿತು ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ಪಿರಿಯಾಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಬೆಟ್ಟದಪುರ ನಿವಾಸಿ ಅಲ್ತಾಫ್ ಅವರು ಆಟೋದಲ್ಲಿ ತರಕಾರಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದರು. ಪಾರ್ಥಿವ ಶರೀರವನ್ನು ಬೆಟ್ಟದಪುರದ ನಿವಾಸದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗಿತ್ತು. ಗುಲ್ಫಾಮ ತಾಜ್ ಅವರಿಗೆ ವಿವಾಹ ನಿಶ್ಚಯವಾಗಿತ್ತು. ಈ ಸಂದರ್ಭದಲ್ಲಿ ಗ್ರಾಮದ ಮುಖ್ಯಸ್ಥರು, ವಿವಿಧ ರಾಜಕೀಯ ಪಕ್ಷದ ಮುಖಂಡರು ರೈತ ಸಂಘದ ನಾಯಕರು ಗ್ರಾಮಸ್ಥರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಅಪಘಾತ: ಟ್ರಾಕ್ಟರ್ ಡಿಕ್ಕಿ ಹೊಡೆದು ಬಾಲಕಿಯೊಬ್ಬಳು ಸಾವನ್ನಪ್ಪಿ, ಮತ್ತೊಂದು ಮಗು ಗಾಯಗೊಂಡಿರುವ ಘಟನೆ ಹೆಚ್.ಡಿ. ಕೋಟೆ ತಾಲೂಕಿನ ಆಲನಹಳ್ಳಿಯಲ್ಲಿ ಸಂಭವಿಸಿದೆ.

ಟ್ರಾಕ್ಟರ್ ಡಿಕ್ಕಿಯಿಂದ ಬಿಹಾರದ ಮಧುಬಣಿ ಜಿಲ್ಲೆಯ ಚೋರೆಯಾ ಗ್ರಾಮದ ಸಾಜನ್, ಸಂಗೀತದೇವಿ ಅವರ ಪುತ್ರಿ ಸಂಜನಾ (5) ಮೃತಪಟ್ಟಿದ್ದು, ಮತ್ತೊಂದು ಮಗುವಿಗೆ ಗಾಯವಾಗಿದೆ.

ಆಲನಹಳ್ಳಿ ಗ್ರಾಮದ ಸಮೀಪ ಇರುವ ಸಪ್ತಗಿರಿ ಕೋಳಿ ಫಾರಂನಲ್ಲಿ ಬಿಹಾರ್ ರಾಜ್ಯದ ಮಧುಬಣಿ ಜಿಲ್ಲೆಯ, ಚೋರೆಯಾ ಗ್ರಾಮದಿಂದ ಸುಮಾರು 20 ಮಂದಿ, ವಲಸೆ ಬಂದು ಆಲನಹಳ್ಳಿ ಗ್ರಾಮದ ಕೆಲಸ ನಿರ್ವಹಿಸುತ್ತಿದ್ದಾರೆ. ಮೃತಪಟ್ಟ ಸಂಜನಾ ಅವರ ತಂದೆ ಸಾಜನ್, ತಾಯಿ ಸಂಗೀತದೇವಿ ಕೋಳಿ ಫಾರಂನಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಶುಕ್ರವಾರ ಬೆಳಗ್ಗೆ ಸಪ್ತಗಿರಿ ಫಾರಂನಲ್ಲಿ ಫಾರಂ ಮಾಲೀಕರ ಟ್ರ್ಯಾಕ್ಟರ್ ಚಾಲಕನ ಅಜಾಗರೂಕತೆಯಿಂದ, ಮಗುವಿಗೆ ಟ್ರಾಕ್ಟರ್ ಡಿಕ್ಕಿ ಹೊಡೆದ ಪರಿಣಾಮ 5 ವರ್ಷದ ಹೆಣ್ಣು ಮಗು ಸಂಜನಾ ಸ್ಥಳದಲ್ಲೇ ಸಾವನ್ನಪ್ಪಿದೆ, ಮತ್ತೊಂದು ಹೆಣ್ಣು ಮಗುವಿಗೆ ಎಡಗೈ ಮೂಳೆ ಮುರಿದು ಆಂಬುಲೆನ್ಸ್ ಮೂಲಕ ಎಚ್.ಡಿ.ಕೋಟೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ದಾಖಲು ಮಾಡಲಾಗಿದೆ.


ಸಂಜನಾ

ಮಾಹಿತಿ ತಿಳಿಯುತ್ತಿದಂತೆ ಸ್ಥಳಕ್ಕೆ ಸರ್ಕಲ್ ಇನ್ಸ್‌ಪೆಕ್ಟರ್ ಗಂಗಾಧರ್ ಭೇಟಿ ನೀಡಿ ಪರಿಶೀಲನೆ ನಡೆಸಿ, ತನಿಖೆ ಕೈಗೊಂಡಿದ್ದಾರೆ.

ಈ ಸಂಬಂಧ ಹೆಚ್.ಡಿ.ಕೋಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಕೇಸು ದಾಖಲಾಗಿದೆ.

> ಬಿಹಾರ್ ರಾಜ್ಯದಿಂದ ಕೂಲಿ ಕೆಲಸವನ್ನ ಅವಲಂಬಿಸಿ ವಲಸೆ ಬಂದಿದ್ದಾರೆ. ಅಪಘಾತದಲ್ಲಿ ತಮ್ಮ ಐದು ವರ್ಷದ ಹೆಣ್ಣು ಮಗುವನ್ನು ಕಳೆದುಕೊಂಡ ಕುಟುಂಬ, ಕಂಗಾಲಾಗಿದೆ. ಇನ್ನೊಂದು ಮಗುವಿಗೆ ಎಡಗೈ ಮೂಳೆ ಮುರಿದ್ದು, ಯಾರು ಚಿಕಿತ್ಸೆ ಕೊಡಿಸದ ಕಾರಣ ಶವಾಗಾರದ ಮುಂದೆ ಕುಟುಂಬ ಕುಳಿತಿದೆ. ಮೂಳೆ ಮುರಿದಿರುವ ಮಗುವಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಿ ಮಗು ಕಳೆದುಕೊಂಡಿರುವ ಕುಟುಂಬಕ್ಕೆ ಪರಿಹಾರ ಕೊಡಬೇಕು ಎಂದು ಸಾರ್ವಜನಿಕರು ಕೋಳಿ ಫಾರಂ ಮಾಲೀಕರಿಗೆ ಆಗ್ರಹಿಸಿದ್ದಾರೆ.

ಗ್ಯಾಸ್ ಗೀಸರ್ ಅನಿಲ ಸೋರಿಕೆ; ಬೆಂಕಿ ಹೊತ್ತಿ ದಂಪತಿಗೆ ತೀವ್ರ ಗಾಯ

ಹುಣಸೂರು.ಅ.24– ಮನೆಯ ಗ್ಯಾಸ್ ಗೀಸರ್‌ನಲ್ಲಿ ಅನಿಲ ಸೋರಿಕೆಯಾಗಿ, ಬೆಂಕಿ ಹೊತ್ತಿಕೊಂಡ ಪರಿಣಾಮ ದಂಪತಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಹುಣಸೂರು ನಗರದ ಮೈಲಾರಲಿಂಗೇಶ್ವರ ಪೆಟ್ರೋಲ್ ಬಂಕ್ ಹಿಂಭಾಗದ ಬಡಾವಣೆಯಲ್ಲಿ ಸಂಭವಿಸಿದೆ.

ಪಿರಿಯಾಪಟ್ಟಣ ತಾಲೂಕು ಕಿತ್ತೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಕುಮಾರ್, ಪತ್ನಿ ಶೋಭಾ ಘಟನೆಯಲ್ಲಿ ತೀವ್ರ ಗಾಯಗೊಂಡಿದ್ದು, ಘಟನೆಯಿಂದ ಮನೆಯ ಕಿಟಕಿ, ಬಾಗಿಲು, ಗೋಡೆಗೆ ಹಾನಿಯಾಗಿದೆ. ಇವರ ಪುತ್ರಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೂಲತಃ ತಾಲೂಕಿನ ಹನಗೋಡು ಹೋಬಳಿಯ ತಟ್ಟೆಕೆರೆ ಗ್ರಾಮದವರಾದ ಕುಮಾರ್ ಕೆಲ ದಿನಗಳ ಹಿಂದೆ ನಗರದ ಮೈಲಾರಲಿಂಗೇಶ್ವರ ಪೆಟ್ರೋಲ್ ಬಂಕ್ ಹಿಂಭಾಗವಿರುವ ಹೊಸ ಬಡಾವಣೆಯಲ್ಲಿ ಮನೆ ನಿರ್ಮಿಸಿಕೊಂಡು ವಾಸವಾಗಿದ್ದರು. ಗುರುವಾರ ಬೆಳಗ್ಗೆ ಸ್ನಾನಕೆಂದು ಗೀಸರ್ ಆನ್ ಮಾಡಿದ್ದಾರೆ. ಅದರೆ ಗೀಸರ್ ಬ್ಲಾಕ್ ಆಗಿತ್ತು. ಮನೆಯವರೇ ದುರಸ್ತಿಗೊಳಿಸಿಕೊಂಡು, ಅಡುಗೆ ತಯಾರಿ ನಡೆಸುತ್ತಿದ್ದರು. ಈ ವೇಳೆ ಮನೆ ತುಂಬ ಗ್ಯಾಸ್ ಸೋರಿಕೆಯಾಗಿ ತುಂಬಿಕೊಂಡಿತ್ತು.

ಇದನ್ನು ಅರಿಯದೆ ಅಡಿಗೆ ಮಾಡಲು ಗ್ಯಾಸ್ ಒಲೆಯನ್ನು ಹೊತ್ತಿಸುತ್ತಿದ್ದಂತೆ ಒಮ್ಮೆಲೆ ಶೋಭಾರಿಗೆ ಬೆಂಕಿ ಹತ್ತಿಕೊಂಡಿದೆ. ಪತ್ನಿಯನ್ನು ಕಾಪಾಡಲು ಹೋದ ಪತಿ ಕುಮಾರ್‌ರವರ ಕೈ, ಕಾಲು, ಮುಖಕ್ಕೆ ಸುಟ್ಟಗಾಯವಾಗಿದೆ. ಇಬ್ಬರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ತೀವ್ರಗಾಯಗೊಂಡಿರುವ ಶೋಭಾರ ಸ್ಥಿತಿ ಗಂಭೀರವಾಗಿದೆ.


ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕುಮಾರ್.

ಈ ಸಂಬಂಧ ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳ ಸ್ಥಳಕ್ಕೆ ಭೇಟಿ ನೀಡಿ, ಮನೆಯಲ್ಲಿ ಹೊತ್ತಿ ಉರಿಯುತ್ತಿದ್ದ ಬೆಂಕಿಯನ್ನು ನಂದಿಸಿದರು. ಅಷ್ಟರಲ್ಲಿ ಮನೆಯಲ್ಲಿ ಇದ್ದಂತಹ ವಸ್ತುಗಳು ಸಂಪೂರ್ಣವಾಗಿ ಬೆಂಕಿಯಿಂದ ಸುಟ್ಟುಹೋಗಿದ್ದು ಈ ಸಂದರ್ಭದಲ್ಲಿ ಅಗ್ನಿಶಾಮಕ ಅಧಿಕಾರಿ ಸತೀಶ್ ಬಾಬು, ಚಂದ್ರು, ಸಂತೋಷ್, ವಿಶಾಲ್.ಎಸ್, ಚಾದರ್ ಅವರುಗಳು ಬೆಂಕಿ ನಂದಿಸುವಲ್ಲಿ ಹರಸಾಹಸಪಡಬೇಕಾಯಿತು.

ಪುರಸಭೆ ಉಪಾಧ್ಯಕ್ಷೆಗೆ ಸವಿತಾ ಸಮಾಜದಿಂದ ಅಭಿನಂದನೆ


ಬನ್ನೂರು ಪುರಸಭೆ ಉಪಾಧ್ಯಕ್ಷೆ ಸೌಮ್ಯಾರಾಣಿ ಅವರನ್ನು ಸವಿತಾ ಸಮಾಜದ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಅ.24– ತಿ.ನರಸೀಪುರ ತಾಲೂಕು ಬನ್ನೂರಿನ ಮಹಿಳಾ ಸವಿತಾ ಸಮಾಜದ ಅಧ್ಯಕ್ಷೆಯೂ ಆದ ಪುರಸಭೆ ಉಪಾಧ್ಯಕ್ಷೆ ಶ್ರೀಮತಿ ಸೌಮ್ಯಾರಾಣಿ ಅವರನ್ನು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಸವಿತಾ ಸಮಾಜದ ವತಿಯಿಂದ ಸನ್ಮಾನಿಸಿ, ಅಭಿನಂದಿಸಲಾಯಿತು.

ಈ ವೇಳೆ ಮೈಸೂರು ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್. ನಗರಾಧ್ಯಕ್ಷ ಹರೀಶ್ ರೆಡ್ಡಿ, ಕಾರ್ಯದರ್ಶಿ ರಾಜು ರೆಡ್ಡಿ, ತಿ.ನರಸೀಪುರ ತಾಲೂಕು ಅಧ್ಯಕ್ಷ ನಾಗೇಂದ್ರ, ಕಲಾವಿದರ ಸಂಘದ ಅಧ್ಯಕ್ಷ ಲೋಕೇಶ್, ಪುರಸಭಾ ಮಾಜಿ ಸದಸ್ಯ ಮುರಳೀಧರ್, ಹೆಚ್.ಡಿ.ಕೋಟೆ ತಾಲೂಕು ಅಧ್ಯಕ್ಷ ನರಸಿಂಹ, ಜಿಲ್ಲಾ ಗೌರವಾಧ್ಯಕ್ಷ ರಾಜು. ಕಾರ್ಯಾಧ್ಯಕ್ಷ ವಿ.ಸುರೇಶ್, ಕೆ.ಆರ್.ನಗರ ಕಾಯಕ ಸಮಾಜದ ಅಧ್ಯಕ್ಷ ತಿಮ್ಮಶೆಟ್ಟಿ, ಉಪಾಧ್ಯಕ್ಷ ರಾಮಶೆಟ್ಟಿ, ಕೊಳ್ಳೇಗಾಲದ ಅಧ್ಯಕ್ಷ ತಮ್ಮಯ್ಯ, ಮಾಜಿ ಅಧ್ಯಕ್ಷ ಸೋಮಣ್ಣ, ಚಾಮರಾಜನಗರ ಜಿಲ್ಲೆ ಉಪಾಧ್ಯಕ್ಷ ಮಾದೇವ ಶೆಟ್ಟಿ, ಬೆಂಗಳೂರಿನ ಡೋಲ್ ಚಕ್ರವರ್ತಿ ರಾಜಕುಮಾರ್ ಮತ್ತಿತರರಿದ್ದರು.

ಕುವೆಂಪುಗೆ ಭಾರತ ರತ್ನಕ್ಕೆ ಆಗ್ರಹಿಸುವ ಸಂಬಂಧ ನಾಳಿದ್ದು ಸಭೆ

ಮೈಸೂರು,ಅ.24– ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಹಾಗೂ ದೆಹಲಿ ಕರ್ನಾಟಕ ಕನ್ನಡ ಸಂಘದವರ ಸಹಯೋಗದಲ್ಲಿ ಕುವೆಂಪು ಕುರಿತ ವಿಚಾರ ಸಂಕಿರಣ ಮತ್ತು ಭಾರತರತ್ನ ಪ್ರಶಸ್ತಿಗೆ ಆಗ್ರಹಿಸುವುದು, ಕುವೆಂಪು ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಚರ್ಚಿಸಲು ಅ.27ರಂದು ಸಂಜೆ 4ಕ್ಕೆ ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸಭೆ ಕರೆಯಲಾಗಿದೆ.

ಡಾ.ಶ್ರೀ ನಿಶ್ಚಲಾನಂದ ಸ್ವಾಮೀಜಿ ಸಾನಿಧ್ಯ, ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್ ನೇತೃತ್ವದಲ್ಲಿ ಸಭೆ ನಡೆಯಲಿದ್ದು, ಸಾಹಿತಿಗಳು, ಕಲಾವಿದರು, ನಿವೃತ್ತ ಐಎಎಸ್ ಹಾಗೂ ಕೆಎಎಸ್ ಅಧಿಕಾರಿಗಳು, ವಿಶ್ರಾಂತ ಕುಲಪತಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳನ್ನು ಆಹ್ವಾನಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತುರ್ತು ಕ್ರಮಕ್ಕೆ ಆಗ್ರಹ


ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕ ಭರತ್ ಅವರನ್ನು ಭೇಟಿ ಮಾಡಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಕಾಲೇಜಿನ ಮೇಲ್ವಿಚಾರಣೆ ಮತ್ತು ಉಸ್ತುವಾರಿಯನ್ನು ಇತರೆ ಇಲಾಖೆಯವರಿಗೆ ವಹಿಸುವ ಸುತ್ತೋಲೆ ಹಿಂಪಡೆಯುವುದು ಹಾಗೂ ನೂತನ ಸರ್ಕಾರಿ ಆದರ್ಶ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಮಂಜೂರಾತಿ ಸಂಬಂಧ ತುರ್ತು ಕ್ರಮಕ್ಕೆ ಆಗ್ರಹಿಸಿದರು. ಈ ವೇಳೆ ಇಲಾಖೆಯ ಜಂಟಿ ನಿರ್ದೇಶಕ ರಾಜು, ಪ್ರಾಂಶುಪಾಲರ ಸಂಘದ ರಾಜ್ಯಾಧ್ಯಕ್ಷ ಈರೇಗೌಡ, ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘದ ರಾಜ್ಯಾಧ್ಯಕ್ಷ ನಿಂಗೇಗೌಡ ಮತ್ತಿತರ ಪದಾಧಿಕಾರಿಗಳಿದ್ದರು.

ನಾಳೆ 'ರಾಗ ಅನುರಾಗ' ಹಳೆ ಗೀತೆ ಗಾಯನ

ಮೈಸೂರು, ಅ.24– ಮೈಸೂರಿನ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ಬಿಲ್ಡರ್ಸ್ ಕರೋಕೆ ಕ್ಲಬ್ ಅರ್ಪಿಸುವ 'ರಾಗ ಅನುರಾಗ' ಹಳೆಯ ಜನಪ್ರಿಯ ಕನ್ನಡ ಮತ್ತು ಹಿಂದಿ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮವನ್ನು ಅ.26ರಂದು ಆಯೋಜಿಸಲಾಗಿದೆ. ಅಕ್ಕಮಹಾದೇವಿ ರಸ್ತೆ (ಸ್ಟರ್ಲಿಂಗ್ ಥಿಯೇಟರ್ ರೋಡ್)ನಲ್ಲಿರುವ ಎಂ.ಬಿ.ಸಿ.ಟಿ. ಸಭಾಂಗಣದಲ್ಲಿ ಅಂದು ಸಂಜೆ 6 ರಿಂದ 9 ಗಂಟೆವರೆಗೆ ಕಾರ್ಯಕ್ರಮ ನಡೆಯಲಿದ್ದು, ಉಚಿತ ಪ್ರವೇಶ ಹಾಗೂ ಲಘು ಉಪಾಹಾರ ವ್ಯವಸ್ಥೆ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗೆ ಎಸ್.ಉಮೇಶ್(9448474722) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮ

ರೌಡಿಶೀಟರ್‌ಗಳಿಗೆ ಬಿಂದುಮಣಿ ಎಚ್ಚರಿಕೆ

ಮೈಸೂರು, ಅ.24(ಎಸ್‌ಪಿಎನ್)– ಅಪರಾಧ ಕೃತ್ಯದಲ್ಲಿ ಭಾಗಿಯಾಗುವವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್.ಎನ್. ಬಿಂದು ಮಣಿ, ರೌಡಿಶೀಟರ್‌ಗಳಿಗೆ ಎಚ್ಚರಿಸಿದ್ದಾರೆ.

ಮೈಸೂರು ಜಯಲಕ್ಷ್ಮೀಪುರಂ ಪೊಲೀಸ್ ಠಾಣಾ ಆವರಣದಲ್ಲಿ ಗುರುವಾರ ನಡೆದ ಜಯಲಕ್ಷ್ಮೀಪುರಂ ಹಾಗೂ ವಿವಿ ಮೊಹಲ್ಲಾ ಠಾಣಾ ವ್ಯಾಪ್ತಿಯ 50ಕ್ಕೂ ಹೆಚ್ಚು ರೌಡಿಗಳ ಪೆರೇಡ್‌ನಲ್ಲಿ ಎಚ್ಚರಿಸಲಾಯಿತು.


ಜಯಲಕ್ಷ್ಮೀಪುರಂ, ವಿವಿ ಮೊಹಲ್ಲಾ ಠಾಣಾ ವ್ಯಾಪ್ತಿಯ ರೌಡಿಗಳ ಪೆರೇಡ್ ನಡೆಸಲಾಯಿತು.


ಸಾರ್ವಜನಿಕರಲ್ಲಿ ಪದೇ ಪದೆ ಹೆದರಿಕೆ ಹುಟ್ಟಿಸುವಂತಹ, ಸಾಮಾಜಿಕ ಮಾಧ್ಯಮಗಳಲ್ಲಿ ಕಾನೂನು ಬಾಹಿರ ಪೋಸ್ಟ್ ಹಾಗೂ ರೀಲ್ಸ್‌ಗಳನ್ನು ಹಾಕಿದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಿದರು. ನೀವು ಮಾಡುವ ತಪ್ಪಿಗೆ ನಿಮ್ಮ ಕುಟುಂಬಗಳು ಬೀದಿಗೆ ಬೀಳುತ್ತವೆ. ಹಾಗೂ ಸಮಾಜದಲ್ಲಿ ಉತ್ತಮ ನಡವಳಿಕೆ ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗುವಂತೆ ತಿಳುವಳಿಕೆ ಹೇಳಿದರು. ಈ ವೇಳೆ ರೌಡಿ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಪ್ರತಿಯೊಬ್ಬ ರೌಡಿಶೀಟರ್‌ಗಳನ್ನು ವಿಚಾರಣೆ ನಡೆಸಿ, ಎಚ್ಚರಿಸಿದರು. ಈ ವೇಳೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಕೆ.ಎಸ್.ಸುಂದರರಾಜ್, ನರಸಿಂಹರಾಜ ಎಸಿಪಿ ಮಾಥ್ಯೂಥಾಮಸ್, ಜಯಲಕ್ಷ್ಮೀಪುರಂ ಇನ್ಸ್‌ಪೆಕ್ಟರ್ ಕುಮಾರ್, ವಿವಿ ಮೊಹಲ್ಲಾ ಇನ್ಸ್‌ಪೆಕ್ಟರ್ ವಿವೇಕಾನಂದ ಹಾಗೂ ಸಬ್ ಇನ್ಸ್‌ಪೆಕ್ಟರ್‌ಗಳು ಭಾಗಿಯಾಗಿದ್ದರು.

ಅಶೋಕಪುರಂ ಠಾಣೆ: ಗುರುವಾರ ರಾತ್ರಿ ಸದರಿ ಠಾಣಾ ವ್ಯಾಪ್ತಿಯಲ್ಲಿ ಕಾನೂನುಬಾಹಿರ ಚಟುವಟಿಕೆಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಡಿಸಿಪಿ ಆರ್. ಎನ್.ಬಿಂದುಮಣಿ ನೇತೃತ್ವದಲ್ಲಿ ಠಾಣಾಧಿಕಾರಿ, ಕಮಾಂಡೋ ಪಡೆ ಮತ್ತು ಸಿಬ್ಬಂದಿಗಳೊಂದಿಗೆ ಪಥಸಂಚಲನ ನಡೆಸಿದರು. ಕಾನೂನು, ಸುವ್ಯವಸ್ಥೆಗೆ ಧಕ್ಕೆ ತರುವವರ ವಿರುದ್ಧ, ಕೋಪ್ಟ ಕಾಯ್ದೆಯಡಿ ಕ್ರಮ ಜರುಗಿಸಿದ್ದಾರೆ. ಮತ್ತೊಂದೆಡೆ ಅಶೋಕಪುರಂ ಬೀಟ್ ಪೋಲೀಸರು ಅಲ್ಲಲ್ಲಿ ಬೀಟ್ ಸಭೆ ನಡೆಸಿ, ನಾಗರಿಕರಿಗೆ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ.

ಸರಸ್ವತಿಪುರಂ ಠಾಣೆ: ಈ ಠಾಣಾ ವ್ಯಾಪ್ತಿಯ ಪ್ರದೇಶಗಳಲ್ಲಿ ಅಪರಾಧ ಚಟುವಟಿಕೆ ತಡೆಗಟ್ಟಲು, ಪೊಲೀಸರು ಗಸ್ತು ಹೆಚ್ಚಿಸಿದ್ದಾರೆ. ಕೆಲವೆಡೆ ರೌಡಿಗಳು, ಅನುಮಾನಾಸ್ಪದ ವ್ಯಕ್ತಿಗಳು ಮತ್ತು ವಾಹನಗಳನ್ನು ತಪಾಸಣೆ ಮಾಡಿ, ಅಂಗಡಿ–ಮುಂಗಟ್ಟುಗಳನ್ನು ನಿಗದಿತ ಸಮಯದೊಳಗೆ ಮುಚ್ಚುವಂತೆಯು ಅಂಗಡಿ ಮಾಲೀಕರಿಗೆ ತಾಕೀತು ಮಾಡಿದ್ದಾರೆ.

ವಿಜಯನಗರ ಠಾಣೆ: ಈ ಠಾಣಾ ವ್ಯಾಪ್ತಿಯಲ್ಲಿ ವಿಜಯನಗರ ವಿಭಾಗದ ಎಸಿಪಿ ನೇತೃತ್ವದಲ್ಲಿ ಠಾಣಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ನಿರ್ಜನ ಪ್ರದೇಶ ಹಾಗು ರಸ್ತೆ ಬದಿಯಲ್ಲಿ ಅಕ್ರಮ ಮದ್ಯ ಸೇವನೆ ಹಾಗೂ ಇತರ ಅಕ್ರಮ ಚಟುವಟಿಕೆಗಳ ವಿರುದ್ಧ ಕಾನೂನು ಕ್ರಮ ಜರುಗಿಸಿದ್ದಾರೆ.

ಸಹಕಾರ ಶಿಕ್ಷಣ ನಿಧಿ ಚೆಕ್ ಹಸ್ತಾಂತರ


ಮೈಸೂರಿನ ಗಾಂಧಿ ವೃತ್ತದಲ್ಲಿರುವ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ವತಿಯಿಂದ 2024–2025ನೇ ಸಾಲಿನ ಸಹಕಾರ ಶಿಕ್ಷಣ ನಿಧಿಯ ಚೆಕ್ ಅನ್ನು, ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಿಯ ಅಧ್ಯಕ್ಷರಾದ ಕಾನೂನು ಸಚಿವ ಹೆಚ್.ಕೆ. ಪಾಟೀಲ್ ಅವರಿಗೆ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್ ನೀಡಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರುಗಳಾದ ಎಸ್‌ಬಿಎಂ ಮಂಜು, ಆರ್.ಸೋಮಣ್ಣ, ಹೆಚ್.ಹರೀಶ್ ಕುಮಾರ್, ಪಿ.ರಾಜೇಶ್ವರಿ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಇದ್ದರು.

ಅಭಿನಂದನೆ


ಮೈಸೂರು ಜಿಲ್ಲಾ ಸಹಕಾರಿ ಒಕ್ಕೂಟದ ನೂತನ ಅಧ್ಯಕ್ಷರಾದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ ಅವರನ್ನು ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಹಾಗೂ ದಿ ಮೈಸೂರ್ ಕೋ ಆಪರೇಟಿವ್ ಬ್ಯಾಂಕ್‌ನ ನೂತನ ನಿರ್ದೇಶಕ ವಿಕಾಶ್.ವೈ ಅಭಿನಂದಿಸಿದರು. ಈ ವೇಳೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ಕುಂಬಾರ ಕೊಪ್ಪಲ್ ಚೇತನ್, ಎಸ್‌ಬಿಎಂ ಯೋಗೇಶ್, ರಾಮಕೃಷ್ಣ, ಹನುಮೇಗೌಡ, ಕೃಷ್ಣಚಾರಿ ಮತ್ತಿತರರು ಉಪಸ್ಥಿತರಿದ್ದರು.

ನ.15ಕ್ಕೆ ಶಿವಯೋಗಿ ಶ್ರೀ ಶಿವಪಾದಸ್ವಾಮಿಗಳ ಕಂಚಿನ ಪುತ್ಥಳಿ ಅನಾವರಣ; ಮಾಹಿತಿ ಕೈಪಿಡಿ ಬಿಡುಗಡೆ

ಮೈಸೂರು, ಅ.24(ವಿವಿಹೆಚ್)– ಶ್ರೀ ಶಿವಪಾದ ಗುರುಸೇವಾ ನಂದಿಧ್ವಜ ಸಂಘದ ವತಿಯಿಂದ ಇದೇ ನವೆಂಬರ್ 15ರಂದು ಆಯೋಜಿಸಲಾಗಿರುವ 'ಶಿವಯೋಗಿ ಶ್ರೀ ಶಿವಪಾದಸ್ವಾಮಿಗಳ ಕಂಚಿನ ಪುತ್ಥಳಿ ಅನಾವರಣ ಹಾಗೂ ಸಂಘದ 89ನೇ ವಾರ್ಷಿಕೋತ್ಸವ ಸಮಾರಂಭದ 'ಕಾರ್ಯಕ್ರಮದ ಮಾಹಿತಿ' ಕೈಪಿಡಿಯನ್ನು ಕುದೇರು ಮಠದ ಕಿರಿಯ ಶ್ರೀಗಳಾದ ಇಮ್ಮಡಿ ಗುರುಲಿಂಗ ಸ್ವಾಮಿಗಳು ಬಿಡುಗಡೆಗೊಳಿಸಿದರು.


ಶಿವಯೋಗಿ ಶ್ರೀ ಶಿವಪಾದಸ್ವಾಮಿಗಳ ಕಂಚಿನ ಪುತ್ಥಳಿ ಅನಾವರಣ ಹಾಗೂ ಸಂಘದ 89ನೇ ವಾರ್ಷಿಕೋತ್ಸವ ಸಮಾರಂಭದ 'ಕಾರ್ಯಕ್ರಮದ ಮಾಹಿತಿ' ಕೈಪಿಡಿಯನ್ನು ಇಮ್ಮಡಿ ಗುರುಲಿಂಗಸ್ವಾಮಿಗಳು ಬಿಡುಗಡೆಗೊಳಿಸಿದರು.

ಬಳಿಕ ಮಾತನಾಡಿ, ಇದೇ ನವೆಂಬರ್ 15 ರಂದು ಬಸವೇಶ್ವರ ರಸ್ತೆ 4ನೇ ಕ್ರಾಸ್‌ನಲ್ಲಿ ಶಿವಪಾದಸ್ವಾಮಿಗಳ ಪುತ್ಥಳಿ ಅನಾವರಣ ಆಗಲಿದೆ. ಕಾರ್ಯಕ್ರಮದ ಸಾನಿಧ್ಯವನ್ನು ತುಮಕೂರು ಸಿದ್ಧಗಂಗಾ ಮಠದ ಸಿದ್ದಲಿಂಗ ಮಹಾಸ್ವಾಮಿಗಳು ವಹಿಸಲಿದ್ದಾರೆ. ಕಂಚಿನ ಪುತ್ಥಳಿ ಉದ್ಘಾಟನಾ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಡೆಸಿಕೊಡಲಿದ್ದಾರೆ.

ಸಂಘದ ವಾರ್ಷಿಕೋತ್ಸವನ್ನು ಮೈಸೂರು–ಕೊಡಗು ಲೋಕಸಭಾ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ನಡೆಸಿಕೊಡಲಿದ್ದಾರೆ. ಕುದೇರು ಮಠದ ಗುರು ಶಾಂತಸ್ವಾಮಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಟ್ರಾಕ್ಟರ್ ಎಲ್.ವಿ.ಲೋಕೇಶ್ ಕುಮಾರ್, ಮೈಸೂರು ಬಸವ ಬಳಗಗಳ ಒಕ್ಕೂಟದ ಮಾಜಿ ಅಧ್ಯಕ್ಷ ಎಂ.ಪ್ರದೀಪ್ ಕುಮಾರ್, ಎಂಡಿಎ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಜಿ.ಪಂ ಮಾಜಿ ಸದಸ್ಯ ಎ.ಎಂ.ಗುರುಸ್ವಾಮಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಬಹಳ ವಿಜೃಂಭಣೆಯಿಂದ ಕಾರ್ಯಕ್ರಮ ಆಯೋಜಿಸಲು ಸಂಘದ ಸದಸ್ಯರು ತೀರ್ಮಾನಿಸಿದ್ದಾರೆ. ಸಂಘದ ವತಿಯಿಂದ ಮತ್ತಷ್ಟು ಉತ್ತಮ ಕಾರ್ಯಗಳು ಮಠಕ್ಕೆ, ಸಮಾಜಕ್ಕೆ ಸಿಗಲಿ. ಈ ಸಂಘ ಶತಮಾನೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುವ ಮೂಲಕ ಸಮಾಜ ಏಳಿಗೆಗೆ ಶ್ರಮಿಸುವಂತಾಗಲಿ ಎಂದರು.

ಈ ಬಾರಿ 10 ಸಾವಿರಕ್ಕೂ ಅಧಿಕ ಮಂದಿ ಅನ್ನಸಂತರ್ಪಣೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದ್ದು, ಅಗತ್ಯ ಸೌಕರ್ಯಗಳನ್ನು ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಈ ವೇಳೆ ಸಂಘದ ಅಧ್ಯಕ್ಷ ಆರ್. ರಂಗಯ್ಯ, ಕಾರ್ಯದರ್ಶಿ ಹೆಚ್.ಜಿ. ರಾಜು, ಜಿ.ಮಹೇಶ್, ಪ್ರಭು, ನಿತೀಶ್ ಕುಮಾರ್ ಸೇರಿ ಹಲವರು ಉಪಸ್ಥಿತರಿದ್ದರು.

ಕೆಳ ಸೇತುವೆ ಕಾಮಗಾರಿ ಹಿನ್ನಲೆ

ರೈಲುಗಳ ವೇಳಾಪಟ್ಟಿ ಮರು ನಿಗದಿ, ನಿಯಂತ್ರಣ, ಭಾಗಶಃ ರದ್ದು ಪ್ರಕಟಣೆ

ಮೈಸೂರು, ಅ.24(ಎಸ್‌ಪಿಎನ್)– ಮೈಸೂರು ನ್ಯೂ ಗೂಡ್ಸ್ ಟರ್ಮಿನಲ್ ಮತ್ತು ನಾಗನಹಳ್ಳಿ ನಡುವೆ ರಸ್ತೆ ಕೆಳಸೇತುವೆ ಕಾಮಗಾರಿ ಕೈಗೊಳ್ಳುವ ಹಿನ್ನೆಲೆಯಲ್ಲಿ, ಅಕ್ಟೋಬರ್, ನವಂಬರ್ ಹಾಗೂ ಡಿಸೆಂಬರ್ ತಿಂಗಳಲ್ಲಿ ಕೆಲ ರೈಲು ಸೇವೆಗಳ ವೇಳಾಪಟ್ಟಿ ಮರುನಿಗದಿ, ನಿಯಂತ್ರಣ ಮತ್ತು ಭಾಗಶಃ ರದ್ದುಪಡಿಸಲಾಗುವುದು ಎಂದು ನೈರುತ್ಯ ರೈಲ್ವೆಯ ಡಿಆರ್‌ಎಂ ಗಿರೀಶ್ ಧರ್ಮರಾಜ್ ಕಲಗೊಂಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೈಲುಗಳ ಮರುನಿಗದಿ: ರೈಲು ಸಂಖ್ಯೆ 16552 ಅಶೋಕಪುರಂನಿಂದ ಹೊರಡುವ ಎಂ.ಜಿ.ಆರ್ ಚೆನ್ನೈ ಸೆಂಟ್ರಲ್ ಎಕ್ಸ್‌ಪ್ರೆಸ್ ಅ.29, 31 ಮತ್ತು ನ.19, 21, 26, 28 ರಂದು ಮತ್ತು ಡಿ.17, 19 ರಂದು ಅಶೋಕಪುರಂ ರೈಲ್ವೆ ನಿಲ್ದಾಣದಿಂದ 40 ನಿಮಿಷ ತಡವಾಗಿ ಹೊರಡಲಿದೆ.

ರೈಲು ಸಂಖ್ಯೆ 66554 ಅಶೋಕಪುರಂನಿಂದ ಕೆಎಸ್‌ಆರ್ ಬೆಂಗಳೂರು ಮೆಮೂ, ಅ.29, 31 ರಂದು ಮತ್ತು ನ.19, 21, 26, 28 ರಂದು ಮತ್ತು ಡಿ.17, 19ರಂದು ಅಶೋಕಪುರಂನಿಂದ 45 ನಿಮಿಷ ತಡವಾಗಿ ಹೊರಡಲಿದೆ.

ರೈಲುಗಳ ನಿಯಂತ್ರಣ: ರೈಲು ಸಂಖ್ಯೆ:16586 ಮುರ್ಡೇಶ್ವರ–ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್, ಅ.28, 30 ಮತ್ತು ನ.18, 20, 25, 27 ಮತ್ತು ಡಿ.16, 18 ರಂದು ಮಾರ್ಗಮಧ್ಯೆ 90 ನಿಮಿಷಗಳ ಕಾಲ ನಿಯಂತ್ರಿಸಲ್ಪಡಲಿದೆ. ರೈಲು ಸಂಖ್ಯೆ:06270 ಎಸ್‌ಎಂವಿಟಿ ಬೆಂಗಳೂರು–ಮೈಸೂರು ಪ್ಯಾಸೆಂಜರ್, ರೈಲು ಅ.28, 30 ಮತ್ತು ನ.18, 20, 25, 27 ರಂದು ಮತ್ತು ಡಿ.16, 18 ರಂದು ಮಾರ್ಗಮಧ್ಯೆ 100 ನಿಮಿಷಗಳ ಕಾಲ ನಿಯಂತ್ರಿಸಲ್ಪಡಲಿದೆ.

ರೈಲು ಸಂಖ್ಯೆ 66579 ಕೆಎಸ್‌ಆರ್ ಬೆಂಗಳೂರು–ಅಶೋಕಪುರಂ ಮೆಮೂ, ಅ. 29, 31 ಮತ್ತು ನ.19, 21, 26, 28 ಮತ್ತು ಡಿ.17, 19 ರಂದು ಮಾರ್ಗಮಧ್ಯೆ 60 ನಿಮಿಷಗಳ ಕಾಲ ನಿಯಂತ್ರಿಸಲ್ಪಡಲಿದೆ.

ರೈಲುಗಳ ಭಾಗಶಃ ರದ್ದು: ರೈಲು ಸಂಖ್ಯೆ 66579 ಕೆಎಸ್‌ಆರ್ ಬೆಂಗಳೂರು–ಅಶೋಕಪುರಂ ಮೆಮೂ, ಅ.29, 31 ಮತ್ತು ನ.19, 21, 26, 28 ಮತ್ತು ಡಿ.17, 19 ರಂದು ಪಾಂಡವಪುರ–ಅಶೋಕಪುರಂ ಮಧ್ಯೆ ಭಾಗಶಃ ರದ್ದುಪಡಿಸಲಾಗಿದೆ. ಈ ರೈಲಿನ ಕಾರ್ಯಾಚರಣೆ ಪಾಂಡವಪುರ ನಿಲ್ದಾಣದಲ್ಲಿ ಮುಕ್ತಾಯಗೊಳ್ಳುತ್ತದೆ.

ರೈಲು ಸಂಖ್ಯೆ 66554 ಅಶೋಕಪುರಂ–ಕೆಎಸ್‌ಆರ್ ಬೆಂಗಳೂರು ಮೆಮೂ, ಅ.9, 31 ಮತ್ತು ನ.19, 21, 26, 28 ಮತ್ತು ಡಿ.17, 19 ರಂದು ಅಶೋಕಪುರಂ–ಪಾಂಡವಪುರ ಮಧ್ಯೆ ಭಾಗಶಃ ರದ್ದುಪಡಿಸಲಾಗಿದೆ. ಈ ರೈಲು ನಿಗದಿತ ಸಮಯದಂತೆ ಅಶೋಕಪುರಂ ಬದಲು ಪಾಂಡವಪುರದಿಂದ ಹೊರಡುತ್ತದೆ. ಹಾಗಾಗಿ ಸಾರ್ವಜನಿಕ ರೈಲ್ವೆ ವೇಳಾಪಟ್ಟಿಯಲ್ಲಿ ವ್ಯತ್ಯಾಸವಾಗುವುದರಿಂದ ಸಹಕರಿಸುವಂತೆ ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ ಶನಿವಾರ 25 ಅಕ್ಟೋಬರ್ 2025

ಅಂಗಾಂಗ ಕಸಿ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ

ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣಪ್ರಕಾಶ್ ಆರ್.ಪಾಟೀಲ್

ಬಿ.ಜಿ.ನಗರ, ಅ.24– ಕರ್ನಾಟಕ ವನ್ನು ಆರೋಗ್ಯವಂತ ರಾಜ್ಯವನ್ನಾಗಿ ಮಾಡಲು ನಮ್ಮ ಸರ್ಕಾರ ಬದ್ಧವಾಗಿದೆ. ಇತ್ತೀಚೆಗೆ ಹೆಚ್ಚು ಅಗತ್ಯವಾಗಿರುವ ಅಂಗಾಂಗ ಕಸಿ ಕ್ಷೇತ್ರಕ್ಕೆ ಹೆಚ್ಚು ಆದ್ಯತೆ ನೀಡಲು ನಾವು ಮುಂದಾಗಿದ್ದೇವೆ ಎಂದು ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಮತ್ತು ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ್ ತಿಳಿಸಿದರು.



ಎಂಬಿಬಿಎಸ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ ನಡೆಯಿತು.

ನಾಗಮಂಗಲ ತಾಲೂಕಿನ ಬಿ.ಜಿ. ನಗರದಲ್ಲಿ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2025ನೇ ಸಾಲಿನ ಎಂಬಿಬಿಎಸ್ ಮತ್ತು ಅಲೈಡ್ ಹೆಲ್ತ್ ಸೈನ್ಸ್ ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮವನ್ನು ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿಗಳ ಸಾನಿಧ್ಯದಲ್ಲಿ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ನಮ್ಮ ಗ್ಯಾಸ್ಟ್ರೋ ಎಂಟರಾಲಜಿ ಮತ್ತು ಅಂಗಾಂಗ ಕಸಿ ಸಂಸ್ಥೆ ಮೂಲಕ ರಾಜ್ಯದಲ್ಲಿ ಪ್ರಮುಖ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ. ಅಂಗಾಂಗ ಕಸಿಯನ್ನು ಸರ್ಕಾರಿ ಸಂಸ್ಥೆಯಿಂದಲೇ ಮಾಡಲಾಗುತ್ತಿದೆ. ಎಲ್ಲರಿಗೂ ಉತ್ತಮ ಆರೋಗ್ಯ ನೀಡಬೇಕು ಎನ್ನುವುದು ನಮ್ಮ ಗುರಿ ಎಂದರು.

ಅಂಗಾಂಗ ಕಸಿ ಖಾಸಗಿಯಾಗಿ ಮಾಡಿಸಿದರೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಬೇಕಾಗುತ್ತದೆ. ಅತ್ಯಾಧುನಿಕ ವೈದ್ಯಕೀಯ ಸಾಧನಗಳೊಂದಿಗೆ, ಮಿತವ್ಯಯವಾಗಿ ನಾವು ಅಂಗಾಂಗ ಕಸಿ ಸೇವೆ ನೀಡಲು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದರು.

ಅಂಗಾಂಗ ಕಸಿ ಸೇವೆಯನ್ನು ಮತ್ತಷ್ಟು ಹೆಚ್ಚು ಮಾಡಲು ನಾವು ಕ್ರಮ ಕೈಗೊಂಡಿದ್ದೇವೆ. ಇದಕ್ಕಾಗಿ ನಾವು ಬೆಂಗಳೂರಿನಲ್ಲಿ 10 ಮಹಡಿಯ ಬೃಹತ್ ಕಟ್ಟಡ ನಿರ್ಮಿಸುತ್ತಿದ್ದೇವೆ. ಅಂಗಾಂಗ ಕಸಿ ಸೇವೆ ಅಗತ್ಯವಿರುವವರಿಗೆ ಕೈಗೆಟಕುವ ದರದಲ್ಲಿ ಚಿಕಿತ್ಸೆ ಸಿಗಬೇಕು ಎನ್ನುವುದು ನಮ್ಮ ಉದ್ದೇಶ ಎಂದರು.

ಕಾಂಗ್ರೆಸ್ ಸರ್ಕಾರದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಹೆಚ್ಚು ಅನುದಾನ, ನೆರವು ದೊರೆಯುತ್ತಿದೆ. ಹೀಗಾಗಿ ನಾವು ಆರೋಗ್ಯವಂತ ಕರ್ನಾಟಕ ನಿರ್ಮಿಸಲು ಪಣತೊಟ್ಟಿದ್ದೇವೆ. ವೈದ್ಯಕೀಯ ಶಿಕ್ಷಣ ಮಾತ್ರವಲ್ಲ, ಇತರೆ ಸಚಿವಾಲಯಕ್ಕೂ ಹೆಚ್ಚಿನ ಸೌಲಭ್ಯ ದೊರೆಯುತ್ತಿದೆ ಎಂದು ವಿವರಿಸಿದರು.

ವೈದ್ಯ ಶಿಕ್ಷಣ ವಿದ್ಯಾರ್ಥಿಗಳಿಗೆ ಕರುಣೆ ಇರಲಿ: ವೈದ್ಯಕೀಯ ಶಿಕ್ಷಣಕ್ಕೆ ಬರುವ ವಿದ್ಯಾರ್ಥಿಗಳಿಗೆ ಸೇವಾ ಮನೋಭಾವ ಹಾಗೂ ಕರುಣೆ ಹೆಚ್ಚಾಗಿರಬೇಕು. ರೋಗಿಗಳನ್ನು ಚೆನ್ನಾಗಿ ನೋಡಿಕೊಳ್ಳುವ ಮನಃಸ್ಥಿತಿ ಇರಬೇಕು. ನಿಮ್ಮ ಕೈಗುಣ ಚೆನ್ನಾಗಿದ್ದರೆ ರೋಗಿಗಳಿಗೆ ಅರ್ಧ ಚಿಕಿತ್ಸೆ ದೊರಕಿದಂತೆ. ಈ ನಿಟ್ಟಿನಲ್ಲಿ ನೀವು ಎಂದು ಸಲಹೆ ನೀಡಿದರು.


ಕಾರ್ಯಕ್ರಮದಲ್ಲಿ ಡಾ.ಅರುಂಧತಿ ಚಂದ್ರಶೇಖರ, ಡಾ.ಎನ್.ಎಸ್.ನಾಗೇಶ್, ಆದಿಚುಂಚನಗಿರಿ ವಿವಿ ಉಪಕುಲಪತಿ ಡಾ. ಎಸ್.ಎನ್.ಶ್ರೀಧರ, ರಿಜಿಸ್ಟ್ರಾರ್ ಎಸಿಯು ಡಾ.ಸಿ.ಕೆ.ಸುಬ್ಬರಾಯ, ಪ್ರಿನ್ಸಿಪಾಲ್ ಡಾ.ಎಂ.ಜಿ.ಶಿವರಾಮು, ಎಐಎಂಎಸ್ ಡೀನ್, ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಹಾಗೂ ಪೋಷಕರಿದ್ದರು.

ಸಾರಿಗೆ ಬಸ್–ಕಾರು ಡಿಕ್ಕಿ: ಓರ್ವ ಸಾವು

• ಮಹಿಳೆ ಗಂಭೀರ • ಬಸ್‌ನಲ್ಲಿದ್ದ 20ಕ್ಕೂ ಹೆಚ್ಚು ಮಂದಿಗೆ ಗಾಯ, ಸ್ಥಳೀಯರ ಪ್ರತಿಭಟನೆ

ಮದ್ದೂರು, ಅ.24– ಸಾರಿಗೆ ಬಸ್, ಕಾರಿನ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಕಾರು ಚಾಲಕ ಸ್ಥಳದಲ್ಲೇ ಮೃತಪಟ್ಟು, ಬಸ್ಸಿನಲ್ಲಿದ್ದ 20 ಪ್ರಯಾಣಿಕರು ಸೇರಿದಂತೆ ಕಾರಿನಲ್ಲಿದ್ದ ಓರ್ವ ಮಹಿಳೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಕೆಸ್ತೂರು ಸಮೀಪದ ಮಾಚಹಳ್ಳಿ ಬಳಿ ಶುಕ್ರವಾರ ಮಧ್ಯಾಹ್ನ ಸಂಭವಿಸಿದೆ.

ಕಾರು ಚಾಲಕ ಬೆಂಗಳೂರಿನ ಜಯನಗರ ನಿವಾಸಿ ಶಿವಕುಮಾರ್ (45) ಸ್ಥಳದಲ್ಲೇ ಮೃತಪಟ್ಟರೇ, ಕಾರಿನಲ್ಲಿದ್ದ ಮಹಿಳೆ ತಲೆಗೆ ಪೆಟ್ಟಾಗಿ ತೀವ್ರವಾಗಿ ಗಾಯಗೊಂಡಿರುವ ಹಿನ್ನೆಲೆಯಲ್ಲಿ ಆಕೆಯನ್ನು ಬೆಂಗಳೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ತಿಳಿದು ಬಂದಿದೆ.



ಸಾರಿಗೆ ಬಸ್–ಕಾರಿನ ನಡುವೆ ಅಪಘಾತ ಸಂಭವಿಸಿರುವುದು.



ಸಮಯಕ್ಕೆ ಸರಿಯಾಗಿ ಆಂಬುಲೆನ್ಸ್ ಬಾರದ ಹಿನ್ನಲೆಯಲ್ಲಿ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಸಾರಿಗೆ ಬಸ್‌ನಲ್ಲಿ ಸಂಚರಿಸುತ್ತಿದ್ದ ಪ್ರಯಾಣಿಕರಾದ ಬಿ.ಎಸ್.ರೇಷ್ಮಾ, ಲೋಕೇಶ್, ಸೌಭಾಗ್ಯ, ಜಯಲಕ್ಷ್ಮಮ್ಮ, ಭಾಗ್ಯ, ರಜನಿ, ಜಯಮ್ಮ, ಮಮತ, ಯಶೋಧಮ್ಮ, ಲಕ್ಷ್ಮಿ, ಚೆನ್ನಮ್ಮ, ಭಾಗ್ಯ, ರತ್ನಮ್ಮ, ಶೋಭಾ, ತಾಯಮ್ಮ, ಸಹನ, ಶಿವಕುಮಾರ್, ಜಯಮ್ಮ, ರಾಮಲಿಂಗ, ಚಿಕ್ಕಮ್ಮ ಎಂಬುವರಿಗೆ ಗಾಯಗಳಾಗಿ ನಗರದ ಗುರುಶಾಂತಪ್ಪ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ವಿವರ: ಚನ್ನಪಟ್ಟಣ ತಾಲೂಕಿನ ಪ್ರಸಿದ್ಧ ಯಾತ್ರಾ ಸ್ಥಳ ಗೌಡಗೆರೆ ಶ್ರೀ ಚಾಮುಂಡೇಶ್ವರಿ ದೇವಾಲಯದಿಂದ ನೂರಕ್ಕೂ ಹೆಚ್ಚು ಭಕ್ತರನ್ನು ಮದ್ದೂರು ನಗರಕ್ಕೆ ಕರೆ ತರುತ್ತಿದ್ದ ಸರ್ಕಾರಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಮಾಚಹಳ್ಳಿ ಸಮೀಪ ಮದ್ದೂರಿನಿಂದ ತುಮಕೂರು ಕಡೆಗೆ ಹೋಗುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಈ ಘಟನೆ ನಡೆದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೆಸ್ತೂರು ಪಿಎಸ್ಐ ಶರಣ್ ರೆಡ್ಡಿ ಹಾಗೂ ಸಿಬ್ಬಂದಿ ಗಾಯಗೊಂಡವರನ್ನು ಖಾಸಗಿ ವಾಹನಗಳ ಮೂಲಕ ಆಸ್ಪತ್ರೆಗೆ ರವಾನಿಸಿ ಪರಿಸ್ಥಿತಿ ನಿಯಂತ್ರಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಟ್ಟರು. ಈ ಸಂಬಂಧ ಕೆಸ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆ: ಅಪಘಾತ ಸಂಭವಿಸಿ ಒಂದು ಗಂಟೆಯಾದರೂ ಸ್ಥಳಕ್ಕೆ ಆಂಬುಲೆನ್ಸ್ ಬಾರದ ಕಾರಣ ರೈತ ಮುಖಂಡ ವಿನೋದ್ ಬಾಬು ನೇತೃತ್ವದಲ್ಲಿ ಸ್ಥಳೀಯರು ಮದ್ದೂರು–ತುಮಕೂರು ರಾಷ್ಟ್ರೀಯ ಹೆದ್ದಾರಿ ತಡೆದು, ಶವವನ್ನು ಹೆದ್ದಾರಿಯಲ್ಲಿಟ್ಟು ಪ್ರತಿಭಟನೆ ನಡೆಸಿದರು. ಅಲ್ಲದೇ ಕೆಸ್ತೂರು ಆಸ್ಪತ್ರೆಗೆ ಮುತ್ತಿಗೆ ಹಾಕಿ ಆಕ್ರೋಶ ಹೊರ ಹಾಕಿದರು.

ಅಪಘಾತದಲ್ಲಿ ಸಾಕಷ್ಟು ಮಂದಿ ಗಾಯಗೊಂಡಿದ್ದರು. ಅವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲು ಆಂಬುಲೆನ್ಸ್‌ಗೆ ಕರೆ ಮಾಡಿದರೂ ಸರಿಯಾದ ಸಮಯಕ್ಕೆ ಆಂಬುಲೆನ್ಸ್‌ಗಳು ಬರಲಿಲ್ಲ. ಇಂತಹ ಸಮಯದಲ್ಲಿ ದಾರಿಹೋಕರ ಬೈಕುಗಳನ್ನು ಅಡ್ಡಗಟ್ಟಿ ಗಾಯಾಳುಗಳನ್ನು ಆಸ್ಪತ್ರೆಗೆ ಕಳುಹಿಸಿದೆವು. 1 ಗಂಟೆ ನಂತರ ಆಂಬುಲೆನ್ಸ್ ಆಗಮಿಸಿತು ಎಂದು ವಿನೋದ್ ಬಾಬು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಕೆಸ್ತೂರು ಆಸ್ಪತ್ರೆಯಲ್ಲಿ ಯಾವುದೇ ಆಂಬುಲೆನ್ಸ್ ಇಲ್ಲ. ಆಂಬುಲೆನ್ಸ್ ವ್ಯವಸ್ಥೆ ಮಾಡಿ. ಖಾಯಂ ವೈದ್ಯರನ್ನು ನೇಮಕ ಮಾಡಿ ಎಂದು ತಾಲೂಕು ಆರೋಗ್ಯಾಧಿಕಾರಿ ಹಾಗೂ ಜಿಲ್ಲಾ ವೈದ್ಯಾಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ ಕ್ರಮ ಕೈಗೊಂಡಿಲ್ಲ. ಮನವಿ ಕೊಟ್ಟ ನಂತರ ಈ ಭಾಗದಲ್ಲಿ ಇದು 3ನೇ ಅಪಘಾತವಾಗಿ ಸಾವು ನೋವುಗಳು ಸಂಭವಿಸುತ್ತಿವೆ ಎಂದು ಆರೋಪಿಸಿದರು.

ಶೀಘ್ರ ಆಂಬುಲೆನ್ಸ್ ಹಾಗೂ ಖಾಯಂ ವೈದ್ಯರನ್ನು ನೇಮಿಸದಿದ್ದರೆ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಸಂಜಯ್, ವೆಂಕಟೇಗೌಡ, ನವನೀತ್, ರಾಜೇಶ್, ನವೀನ್ ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ, ಅ.24– ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆವಿ ಡಿಸಿ ವಿದ್ಯುತ್ ಮಾರ್ಗದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಅ.25ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ನಗರದ ಮರೀಗೌಡ ಬಡಾವಣೆ, ನಾಲ್ವಡಿ ಕೃಷ್ಣರಾಜ ಬಡಾವಣೆ, ಕ್ಯಾತುಂಗೆರೆ ಗ್ರಾಮ, ಕ್ಯಾತುಂಗೆರೆ ಬಡಾವಣೆ, ಸಿದ್ದೇಶ್ವರ ಬಡಾವಣೆ, ಚಾಮುಂಡೇಶ್ವರಿ ನಗರ, ಅನ್ನಪೂರ್ಣೇಶ್ವರಿ ನಗರ 1 ಮತ್ತು 2ನೇ ಹಂತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

12 ಸ್ಥಾನಗಳಿಗೆ 24 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ

ನ.2ರಂದು ಡಿಸಿಸಿ ಬ್ಯಾಂಕ್ ಚುನಾವಣೆ

ಮಂಡ್ಯ, ಅ.24– ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ 12 ನಿರ್ದೇಶಕ ಸ್ಥಾನಗಳಿಗೆ ನ.2ರಂದು ಚುನಾವಣೆ ನಡೆಯಲಿದ್ದು, ನಾಮಪತ್ರ ಸಲ್ಲಿಕೆಯ ಅಂತಿಮ ದಿನವಾದ ಶುಕ್ರವಾರ ನಾಮಪತ್ರ ಸಲ್ಲಿಕೆ ಭರಾಟೆ ಜೋರಾಗಿತ್ತು. ಒಟ್ಟಾರೆ 24 ಅಭ್ಯರ್ಥಿಗಳಿಂದ 42 ಉಮೇದುವಾರಿಕೆ ಸಲ್ಲಿಕೆಯಾಗಿದೆ.

ಮಂಡ್ಯ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಎಸ್.ಸತೀಶ್, ಹಳೇ ಬೂದನೂರು ಸ್ವಾಮಿ, ಮದ್ದೂರು ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಪಿ.ಸಂದರ್ಶ, ಮಳವಳ್ಳಿ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಪಿ.ಎಂ. ನರೇಂದ್ರಸ್ವಾಮಿ, ರಾವಣಿ ಶಿವಲಿಂಗಯ್ಯ,



ನಾಗಮಂಗಲ ತಾಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸಚಿವ ಎನ್.ಚಲುವರಾಯಸ್ವಾಮಿ ಪುತ್ರ ಹಾಗೂ ನಟ ಸಚಿನ್ ಚಲುವರಾಯಸ್ವಾಮಿ ಅವರು ಉಮೇದುವಾರಿಕೆ ಸಲ್ಲಿಸಿದರು.

ಪಾಂಡವಪುರ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಎ.ಆರ್.ಅಶೋಕ, ಹೆಚ್.ಸಿ. ಪುಟ್ಟಸ್ವಾಮಿಗೌಡ, ಶ್ರೀರಂಗಪಟ್ಟಣ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಡಿ.ಇ. ಧನಂಜಯ, ಬಿ.ಗಿರೀಶ, ಕೆ.ಆರ್.ಪೇಟೆ ತಾಲೂಕು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಎಸ್.ಎಸ್. ಅಂಬರೀಶ್, ನಾಗಮಂಗಲ ತಾಲೂಕು ಕೃಷಿ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ.ಸಚಿನ್ ಚಲುವರಾಯಸ್ವಾಮಿ ಉಮೇದುವಾರಿಕೆ ಸಲ್ಲಿಸಿದರು.

ಜಿಲ್ಲೆಯ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳ ಕ್ಷೇತ್ರದಿಂದ ಕೆ.ವಿ.ದಿನೇಶ್, ವ್ಯವಸಾಯೇತರ ಪತ್ತಿನ ಸಹಕಾರ ಸಂಘಗಳ ಕ್ಷೇತ್ರದಿಂದ ಹೆಚ್.ಅಶೋಕ, ಎಸ್.ಕೆ.ನಂಜೇಗೌಡ, ಬಿ.ಎನ್.ಹರ್ಷ, ಮಂಡ್ಯ ಉಪವಿಭಾಗದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಸಿ.ಚಲುವರಾಜು, ವಿ.ಎಂ.ವಿಶ್ವನಾಥ್, ಎಸ್.ಶಿವರಾಜು, ಪಾಂಡವಪುರ ಉಪವಿಭಾಗದ ಹಾಲು ಉತ್ಪಾದಕರ ಸಹಕಾರ ಸಂಘಗಳ ಕ್ಷೇತ್ರದಿಂದ ಎಂ.ಸುರೇಶ್ ಗೌಡ, ಜಿ.ಈ.ರವಿಕುಮಾರ, ಎ.ವಿಜೇಂದ್ರ ಮೂರ್ತಿ, ಎನ್.ಎಂ.ದೇವೇಗೌಡ, ಕೆ.ರಾಮಚಂದ್ರ, ಸಹಕಾರ ಸಂಘಗಳು (ಫಾರ್ಮಿಂಗ್ ಸಹಕಾರ ಸಂಘಗಳು ಸೇರಿದಂತೆ) ಕ್ಷೇತ್ರದಿಂದ ಕೆ.ಸಿ.ಜೋಗಿಗೌಡ, ಎನ್.ಮುರಳಿ ನಾಮಪತ್ರ ಸಲ್ಲಿಸಿದರು.

ಮಂಡ್ಯ ಎಸಿ ಎಂ.ಶಿವಮೂರ್ತಿ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಕಾಂಗ್ರೆಸ್ ಬೆಂಬಲಿತ ಹಲವು ಅಭ್ಯರ್ಥಿಗಳು ನಗರದ ಶ್ರೀಕಾಳಿಕಾಂಬ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗೆ ಆಗಮಿಸಿ ತಮ್ಮ ಉಮೇದುವಾರಿಕೆ ಸಲ್ಲಿಸಿದರು.

ನ.5ಕ್ಕೆ ಕಲಾಶ್ರೀ ಸ್ಪರ್ಧೆ

ಮಂಡ್ಯ, ಅ.24– ಮಕ್ಕಳ ದಿನಾಚರಣೆ ಅಂಗವಾಗಿ ನ.5ರಂದು 5 ರಿಂದ 15 ವರ್ಷದೊಳಗಿನ ಮಕ್ಕಳಿಗೆ ಜಿಲ್ಲೆಯ ಬಾಲ ಭವನದಲ್ಲಿ ಜಿಲ್ಲಾ ಮಟ್ಟದ ಕಲಾಶ್ರೀ ಸ್ಪರ್ಧೆ ಆಯೋಜಿಸಲಾಗಿದೆ. ಸೃಜನಾತ್ಮಕ ಕಲೆ, ಸೃಜನಾತ್ಮಕ ಪ್ರದರ್ಶನ ಕಲೆ, ಸೃಜನಾತ್ಮಕ ಬರವಣಿಗೆ ಮತ್ತು ವಿಜ್ಞಾನದಲ್ಲಿ ನೂತನ ಆವಿಷ್ಕಾರ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗುವುದು. 6 ರಿಂದ 16 ವರ್ಷದೊಳಗಿನ ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ಕಾರ್ಯಕ್ರಮ ಸಂಯೋಜಕಿ ಪಿ.ಕೋಮಲ ಮೊ. 9036801065 ಸಂಪರ್ಕಿಸಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಬಸ್ ಬೆಂಕಿಗೆ 20 ಜನ ಭಸ್ಮ

ಪ್ರಯಾಣಿಕರಲ್ಲಿ ಸುಮಾರು 20 ಮಂದಿ ಚಿರನಿದ್ರೆಗೆ ಜಾರಿದ್ದಾರೆ. ಹಲವರು ತುರ್ತು ನಿರ್ಗಮನ ಮತ್ತು ಕಿಟಕಿ ಗಾಜುಗಳನ್ನು ಒಡೆದು ಬಸ್‌ನಿಂದ ಹಾರಿ ಪ್ರಾಣ ಉಳಿಸಿಕೊಂಡಿದ್ದಾರೆ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗುತ್ತಿದೆ. ಕಾವೇರಿ ಟ್ರಾವೆಲ್ಸ್ ನಿರ್ವಹಿಸುತ್ತಿದ್ದ ಖಾಸಗಿ ಬಸ್(ನೋಂ.ಸಂ.DD 09 N 9490) ಇಂದು ನಸುಕಿನ ಜಾವ 3 ಗಂಟೆ ಸುಮಾರಿಗೆ ಚಿನ್ನತೇಕೂರು ಗ್ರಾಮದ ಬಳಿ ದ್ವಿಚಕ್ರ ವಾಹನವೊಂದಕ್ಕೆ ಹಿಂದಿನಿಂದ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ದ್ವಿಚಕ್ರ ವಾಹನ ರಸ್ತೆಗುರುಳಿದೆ. ಗಾಬರಿಯಲ್ಲಿ ಚಾಲಕ ಬಸ್ ನಿಲ್ಲಿಸದೆ ವೇಗವಾಗಿ ಚಲಾಯಿಸಿದ್ದಾನೆ. ಸುಮಾರು 300 ಮೀಟರ್ ದೂರದವರೆಗೂ ದ್ವಿಚಕ್ರ ವಾಹನವನ್ನು ಬಸ್ ಎಳೆದೊಯ್ದಿದೆ. ಈ ವೇಳೆ ದ್ವಿಚಕ್ರ ವಾಹನದ ಪೆಟ್ರೋಲ್ ರಸ್ತೆಗೆ ಸುರಿದಿದ್ದಲ್ಲದೆ, ವಾಹನಗಳ ವೇಗ ಹಾಗೂ ಘರ್ಷಣೆಯಿಂದ ಕಿಡಿ ಹೊತ್ತಿದೆ. ಆ ಕಿಡಿ ಬಸ್‌ನ ಡೀಸೆಲ್ ಟ್ಯಾಂಕ್‌ಗೂ ತಗುಲಿ, ಅದು ಸ್ಫೋಟಗೊಂಡಿದೆ. ಆಗ ಟ್ಯಾಂಕ್‌ನಲ್ಲಿ ಭಾರೀ ಪ್ರಮಾಣದ ಡೀಸೆಲ್, ಎಲ್ಲಾ ಕಡೆಗೂ ಚಿಮ್ಮಿದ್ದರಿಂದ ಬೆಂಕಿ ಕ್ಷಣಾರ್ಧದಲ್ಲಿ ಧಗಧಗಿಸಿದೆ ಎಂದು ಪ್ರಾಥಮಿಕ ಪರಿಶೀಲನೆಯಿಂದ ತಿಳಿದುಬಂದಿದೆ.

ಕರ್ನೂಲ್ ಬಸ್ ದುರಂತದ ಬಗ್ಗೆ ಮಾತನಾಡಿರುವ ಅಲ್ಲಿನ ಜಿಲ್ಲಾಧಿಕಾರಿ ಡಾ.ಎ.ಸಿರಿ, ಖಾಸಗಿ ಬಸ್ ದುರಂತ ಬೆಳಗ್ಗಿನ ಜಾವ 3 ರಿಂದ 3:10ರ ಸುಮಾರಿಗೆ ಸಂಭವಿಸಿದ್ದು, ಮೋಟಾರ್ ಸೈಕಲ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಂಧನ ಸೋರಿಕೆಯಾಗಿ ಬೆಂಕಿ ಆವರಿಸಿಕೊಂಡಿದೆ. ಬಸ್‌ನಲ್ಲಿದ್ದ 41 ಪ್ರಯಾಣಿಕರಲ್ಲಿ 23 ಜನರನ್ನ ರಕ್ಷಿಸಲಾಗಿದೆ. ಇಲ್ಲಿಯವರೆಗೆ ಮೃತರಲ್ಲಿ 11 ಜನರನ್ನು ಗುರುತಿಸಲಾಗಿದ್ದು, ಉಳಿದವರ ಗುರುತು ಪತ್ತೆ ಕಾರ್ಯ ಮುಂದುವರೆಸಿರುವುದಾಗಿ ತಿಳಿಸಿದ್ದಾರೆ.

ಬೆಂಕಿ ಆವರಿಸುತ್ತಿದ್ದಂತೆ ಬಸ್‌ನ ಚಾಲಕ ಮತ್ತು ನಿರ್ವಾಹಕ ಪರಾರಿಯಾಗಿದ್ದಾರೆ. ಪೊಲೀಸರು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಗಾಯಾಳುಗಳನ್ನು ಕರ್ನೂಲ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆ ವೇಳೆ ಭಾರೀ ಮಳೆ ಸುರಿದಿದ್ದರಿಂದ ರಕ್ಷಣಾ ಕಾರ್ಯಕ್ಕೆ ತೀವ್ರ ಅಡ್ಡಿಯಾದರೂ, ಗಾಯಾಳುಗಳ ರಕ್ಷಣೆ ಮಾಡಿದ್ದಾರೆ. ಅಪಘಾತದಿಂದಾಗಿ ಹೆದ್ದಾರಿಯಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿ, ವಾಹನಗಳು ಗಂಟೆಗಟ್ಟಲೆ ಸಿಲುಕಿಕೊಂಡಿದ್ದವು. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಹಲವು ಶವಗಳು ಗುರುತಿಸಲಾಗದಷ್ಟು ಸುಟ್ಟು ಕರಕಲಾಗಿರುವುದರಿಂದ ವಿಧಿವಿಜ್ಞಾನ ತಂಡಗಳು ಮಾದರಿ ಸಂಗ್ರಹಿಸಿದ್ದು, ಆ ಮೂಲಕ ಗುರುತು ಪತ್ತೆಗೆ ಕ್ರಮ ವಹಿಸಲಾಗಿದೆ.

ಪ್ರಧಾನಿ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಸಂತಾಪ

2 ಲಕ್ಷ ರೂ ಪರಿಹಾರ ಘೋಷಣೆ



ನರೇಂದ್ರ ಮೋದಿ



ದ್ರೌಪದಿ ಮುರ್ಮು

ನವದೆಹಲಿ: ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಸಂಭವಿಸಿದ ಬಸ್ ದುರಂತದಲ್ಲಿ 20 ಮಂದಿ ಸಜೀವ ದಹನವಾಗಿದ್ದು, ದುರ್ಘಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ತೀವ್ರ ಸಂತಾಪ ಸೂಚಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ಸಂಭವಿಸಿದ ಭೀಕರ ಬಸ್ ಅಗ್ನಿ ಅಪಘಾತದಲ್ಲಿ ಜೀವಹಾನಿ ಸಂಭವಿಸಿರುವುದು ಅತ್ಯಂತ ದುರದೃಷ್ಟಕರ. ಮೃತರ ಕುಟುಂಬಕ್ಕೆ ಸಂತಾಪ ಸೂಚಿಸುತ್ತೇನೆ. ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆಂದು ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಟ್ವೀಟ್ ಮಾಡಿ, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯಲ್ಲಿ ಸಂಭವಿಸಿದ ಅಪಘಾತದಿಂದ ಜೀವಹಾನಿಯಾಗಿದೆ ಎಂದು ತಿಳಿದು ತೀವ್ರ ದುಃಖವಾಗಿದೆ. ಈ ಕಷ್ಟದ ಸಮಯದಲ್ಲಿ ಸಂತ್ರಸ್ತ ಜನರು ಮತ್ತು ಅವರ ಕುಟುಂಬಕ್ಕೆ ತೀವ್ರ ಸಂತಾಪ ಸೂಚಿಸುತ್ತೇನೆ. ಗಾಯಾಳುಗಳು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಪ್ರಾರ್ಥಿಸುತ್ತೇನೆಂದು ತಿಳಿಸಿದ್ದಾರೆ. ಇದೇ ವೇಳೆ ಮೃತರ ಕುಟುಂಬಕ್ಕೆ ಪ್ರಧಾನಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ 50,000 ರೂ. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ.

ಚಂದ್ರಬಾಬು ನಾಯ್ಡು, ಸಿದ್ದರಾಮಯ್ಯ ಸಂತಾಪ



ಚಂದ್ರಬಾಬುನಾಯ್ಡು



ಸಿದ್ದರಾಮಯ್ಯ

ಬೆಂಗಳೂರು, ಅ.24– ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿ ಸಂಭವಿಸಿದ ದುರಂತ ಸಂಬಂಧ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಕರ್ನಾಟಕ ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗೂ ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸಂತಾಪ ಸೂಚಿಸಿದ್ದಾರೆ.

'ಕರ್ನೂಲ್‌ನ ಬೆಂಗಳೂರು–ಹೈದರಾಬಾದ್ ಹೆದ್ದಾರಿಯಲ್ಲಿ ಸಂಭವಿಸಿದ ಭೀಕರ ಬಸ್ ಅಪಘಾತದಲ್ಲಿ ಬಸ್‌ಗೆ ಬೆಂಕಿ ತಗುಲಿ ಹಲವು ಪ್ರಯಾಣಿಕರು ಪ್ರಾಣ ಕಳೆದುಕೊಂಡ ಸುದ್ದಿ ಕೇಳಿ ಅತೀವ ದುಃಖವಾಯಿತು. ದುರಂತದಲ್ಲಿ ಮಡಿದವರ ಕುಟುಂಬಕ್ಕೆ ನನ್ನ ಸಂತಾಪಗಳು. ಗಾಯಾಳುಗಳು ಆದಷ್ಟು ಶೀಘ್ರ ಗುಣಮುಖರಾಗಲಿ' ಎಂದು ಸಿದ್ದರಾಮಯ್ಯ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

'ಕರ್ನೂಲ್ ಬಳಿ ಭೀಕರ ಅಪಘಾತದಲ್ಲಿ ಬಸ್‌ಗೆ ಬೆಂಕಿ ತಗುಲಿ ಅನೇಕರು ಪ್ರಾಣ ಕಳೆದುಕೊಂಡ ಸುದ್ದಿ ಕೇಳಿ ನನಗೆ ಆಘಾತವಾಗಿದೆ. ಪ್ರೀತಿಪಾತ್ರರನ್ನು ಕಳೆದುಕೊಂಡವರ ಕುಟುಂಬಗಳಿಗೆ ಈ ನೋವನ್ನು ಸಹಿಸಿಕೊಳ್ಳುವ ಶಕ್ತಿ ದೇವರು ಕರುಣಿಸಲಿ. ಗಾಯಗೊಂಡವರು ಮತ್ತು ಮೃತರ ಕುಟುಂಬಗಳಿಗೆ ಸರ್ಕಾರ ಅಗತ್ಯವಿರುವ ಸಹಾಯ ಮಾಡುತ್ತದೆ ಎಂದು ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಒಟ್ಟಾಗಿ ಸ್ಫೋಟಿಸಿದ್ದೂ ಕಾರಣ?

ಈ ಮೊಬೈಲ್‌ಗಳು ಒಮ್ಮೆಲೆ ಸ್ಫೋಟಗೊಂಡಿರುವುದರಿಂದ ಬೆಂಕಿಯ ಪ್ರಮಾಣ ವ್ಯಾಪಿಸಿರಬಹುದು. ಜೊತೆಗೆ ಎಸಿಗಳು ಹಾಗೂ ಇತರ ಉದ್ದೇಶಗಳಿಗಾಗಿ ಬಸ್‌ನಲ್ಲಿ ಅಳವಡಿಸಿದ್ದ ವಿದ್ಯುತ್ ಬ್ಯಾಟರಿಗಳು ಸಹ ಸ್ಫೋಟಗೊಂಡಿದ್ದು ದುರಂತಕ್ಕೆ ಕಾರಣವಾಗಿದೆ. ಬೆಂಕಿಯ ಪ್ರಮಾಣ ಎಷ್ಟಿತ್ತೆಂದರೆ ಬಸ್‌ಗೆ ಅಳವಡಿಸಿದ್ದ ಅಲ್ಯೂಮಿನಿಯಂ ನೆಲಹಾಸು ನೀರಿನಂತೆ ಕರಗಿಹೋಗಿದ್ದು, ಮೂಳೆಗಳು ಬೂದಿಯಂತೆ ಉದುರುತ್ತಿದ್ದವು ಎಂದು ಅಧಿಕಾರಿಗಳು ಭಯಾನಕ ಸನ್ನಿವೇಶವನ್ನು ವಿವರಿಸಿದ್ದಾರೆ.

ಶಿವಕುಮಾರ್ ಅಲರ್ಟ್

ಸಿದ್ದರಾಮಯ್ಯ ಪುತ್ರ ಡಾ.ಯತೀಂದ್ರ ವಿರುದ್ಧ ಹರಿಹಾಯ್ದಿದ್ದಾರೆ. ಮುಖ್ಯಮಂತ್ರಿ ಅವರಂತೆಯೇ ಉಪಮುಖ್ಯಮಂತ್ರಿ ಸಹ ಸಾಮಾಜಿಕ ಬದ್ಧತೆ ಮೇಲೆ ರಾಜಕೀಯ ಮಾಡಿಕೊಂಡು ನಿಷ್ಠಾವಂತ ಕಾಂಗ್ರೆಸ್ಸಿಗರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಶಾಸಕರಾದ ರಂಗನಾಥ್ ಹಾಗೂ ಇಕ್ಬಾಲ್ ಹುಸೇನ್ ಪ್ರತಿಕ್ರಿಯಿಸಿದ್ದಾರೆ.

ಶಾಸಕಾಂಗ ಪಕ್ಷದ ನಾಯಕತ್ವ ಹೊಣೆ ಯಾರಿಗೆ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಹುದ್ದೆ ಯಾರು ನಿರ್ವಹಿಸಬೇಕೆಂಬ ತೀರ್ಮಾನವನ್ನು ಪಕ್ಷದ ವರಿಷ್ಠರೇ ಕೈಗೊಳ್ಳುತ್ತಾರೆ.

ಕಾಂಗ್ರೆಸ್ ಸಾಮಾಜಿಕ ಬದ್ಧತೆಯ ಪಕ್ಷ, ಕಾರ್ಯಕರ್ತರು, ಶಾಸಕರು, ನಾಯಕರು ಅದರಡಿಯೇ ಕಾರ್ಯನಿರ್ವಹಿಸುತ್ತಾರೆ. ಇದರ ಅರಿವು ಯತೀಂದ್ರ ಅವರಿಗೂ ಇರುತ್ತದೆ ಎಂದಿದ್ದಾರೆ. ಶಿವಕುಮಾರ್ ಯಾವುದೇ ಒಂದು ಸಮುದಾಯದ ಪರವಾಗಿ ನಿಲ್ಲದೆ, ಎಲ್ಲ ಸಮುದಾಯಗಳನ್ನು ಒಟ್ಟಾಗಿ ತೆಗೆದುಕೊಂಡು ಹೋಗುವ ಜವಾಬ್ದಾರಿಯನ್ನು ಪಕ್ಷ ಮತ್ತು ಸರ್ಕಾರದಲ್ಲಿ ಮಾಡುತ್ತಿದ್ದಾರೆ. ಅವರು ಮುಖ್ಯಮಂತ್ರಿ ಆಗುವುದು ಖಚಿತ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸಚಿವ ಸತೀಶ್ ಜಾರಕಿಹೊಳಿ ಹೆಸರನ್ನು ಯತೀಂದ್ರ ಮುನ್ನೆಲೆಗೆ ಏಕೆ ತಂದರು ಎಂಬ ಬಗ್ಗೆ ನಾನು ಮಾತನಾಡುವುದಿಲ್ಲ ಎಂದು ರಂಗನಾಥ್ ತಿಳಿಸಿದರು. ನಾಯಕತ್ವದ ಬಗ್ಗೆ ಮಾತನಾಡಿದರೆ, ನಮಗೆ ನೋಟಿಸ್ ನೀಡುವ ಪಕ್ಷ ಯತೀಂದ್ರ ಮೇಲೂ ಅದೇ ಮಾನದಂಡ ಅನುಸರಿಸಬೇಕೆಂದು ಇಕ್ಬಾಲ್ ಹುಸೇನ್ ಒತ್ತಾಯಿಸಿದ್ದಾರೆ.

ವರಿಷ್ಠರೇ ಎಲ್ಲವನ್ನ ತೀರ್ಮಾನಿಸ್ತಾರೆ: ಈ ಮಧ್ಯೆ, ಸುದ್ದಿಗಾರರೊಂದಿಗೆ ಮಾತನಾಡಿದ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ನಾಯಕತ್ವ ವಿಚಾರಕ್ಕೆ ಸಂಬಂಧಿಸಿದಂತೆ ನಮ್ಮಲ್ಲಿ ಯಾವುದೇ ಗೊಂದಲ ಇಲ್ಲ. ಯಾವಾಗ ಏನು ಆಗಬೇಕೋ, ಅದನ್ನು ವರಿಷ್ಠರು ತೀರ್ಮಾನಿಸುತ್ತಾರೆ. ಅದನ್ನು ಬಿಟ್ಟರೆ ಬೇರೆಯವರ ಮಾತಿಗೆ ನಮ್ಮಲ್ಲಿ ಮಾನ್ಯತೆ ಇಲ್ಲ ಎಂದಿದ್ದಾರೆ.

ಯತೀಂದ್ರ ಹೇಳಿಕೆಯನ್ನು ನಾನು ವಿಶ್ಲೇಷಣೆ ಮಾಡುವುದಿಲ್ಲ ಅವರನ್ನೇ ಕೇಳಿಕೊಳ್ಳಿ. ವರಿಷ್ಠರ ತೀರ್ಮಾನವೇ ಅಂತಿಮ. ಕಾಂಗ್ರೆಸ್ ವ್ಯವಸ್ಥೆಗೆ ಯಾರೂ ಅನಿವಾರ್ಯ ರಲ್ಲ. ಒಂದು ಕಾಲದಲ್ಲಿ ಇಂದಿರಾ ಗಾಂಧಿ., ಇಂದಿರಾ ಗಾಂಧಿ ಅನ್ನುತ್ತಿದ್ದರು. ಅವರ ಕಾಲಾನಂತರ ಪಕ್ಷ ಮೂರ್ನಾಲ್ಕು ಬಾರಿ ದೇಶದ ಚುಕ್ಕಾಣಿ ಹಿಡಿಯಲಿಲ್ಲವೇ ಎಂದರು. ಯತೀಂದ್ರ ಭಾಷಣವನ್ನು ತಮ್ಮದೇ ಧಾಟಿಯಲ್ಲಿ ವಿಶ್ಲೇಷಿಸಿದ ಸಚಿವ ಪ್ರಿಯಾಂಕ್ ಖರ್ಗೆ, ಅವರು ಸೈದ್ಧಾಂತಿಕವಾಗಿ ಮಾತನಾಡಿ ದ್ದಾರೆ. ಅದರಲ್ಲಿ ತಪ್ಪೇನಿದೆ ಎಂದು ಮರು ಮಾತನಾಡದೆ ಪತ್ರಕರ್ತರ ಪ್ರಶ್ನೆಗಳಿಂದ ಜಾರಿಕೊಂಡರು.

ಬಿಗ್ ಬಾಸ್ ಮಾಜಿ ಸ್ಪರ್ಧಿ ದಿವ್ಯಾ ಸುರೇಶ್ ಹಿಟ್ ಅಂಡ್ ರನ್: ಮಹಿಳೆಯ ಕಾಲು ಮುರಿತ!

ಬೆಂಗಳೂರು: ಮಾಜಿ ಬಿಗ್‌ಬಾಸ್ ಸ್ಪರ್ಧಿ, ನಟಿ ದಿವ್ಯಾ ಸುರೇಶ್ ವಿರುದ್ಧ ದೂರು ದಾಖಲಾಗಿದೆ. ಅಕ್ಟೋಬರ್ 04 ರಂದು ನಟಿ ದಿವ್ಯಾ ಸುರೇಶ್ ಕಾರಿನಲ್ಲಿ ಅಪಘಾತ ಮಾಡಿ ಸ್ಥಳದಿಂದ ಪರಾರಿ ಆಗಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.



ಅಕ್ಟೋಬರ್ 04 ರಂದು ಕಿರಣ್, ಅನುಷಾ, ಅನಿತಾ ಎಂಬವರು ಬೈಕ್‌ನಲ್ಲಿ ಆಸ್ಪತ್ರೆಗೆ ತೆರಳುತ್ತಿದ್ದರು. ಈ ವೇಳೆ ಬ್ಯಾಟರಾನಪುರದ ಎಂ.ಎಂ ರಸ್ತೆ ಬಳಿ ನಾಯಿಗಳಿದ್ದು, ಭಯದಿಂದ ಕಿರಣ್ ಬೈಕ್ ಅನ್ನು ಸ್ವಲ್ಪ ಬಲಕ್ಕೆ ತಂದಿದ್ದಾರೆ. ಈ ವೇಳೆ ವೇಗವಾಗಿ ಬಂದ ದಿವ್ಯಾ ಸುರೇಶ್ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಕಾರು ಡಿಕ್ಕಿಯಾದ ರಭಸಕ್ಕೆ ಮೂವರೂ ಬೈಕ್‌ನಿಂದ ಬಿದ್ದಿದ್ದು, ಒಬ್ಬರು ಗಾಯಗೊಂಡಿದ್ದಾರೆ. ಅನಿತಾ ಎಂಬವರ ಕಾಲಿನ ಮಂಡಿ ಚಿಪ್ಪಿಗೆ ಪೆಟ್ಟಾಗಿದೆ.

ಘಟನೆಯಲ್ಲಿ ಅನಿತಾ ಅವರ ಕಾಲು ಮುರಿದಿದೆ. ಆದರೆ ದಿವ್ಯಾ ಅವರು ಕಾರು ನಿಲ್ಲಿಸದೆ ಅಲ್ಲಿಂದ ಪರಾರಿ ಆಗಿದ್ದಾರೆ. ಘಟನೆ ಕುರಿತಂತೆ ದಿವ್ಯಾ ಸುರೇಶ್ ವಿರುದ್ಧ ಕಿರಣ್ ಎಂಬುವರು ದೂರು ನೀಡಿದ್ದಾರೆ. ನಮ್ಮ ಸಂಬಂಧಿ ಅನುಷಾಗೆ ಹುಷಾರಿರಲಿಲ್ಲ. ಹೀಗಾಗಿ ರಾತ್ರಿ ಗಿರಿನಗರ ಆಸ್ಪತ್ರೆಗೆ ಹೋಗುತ್ತಿದ್ದೆವು. ಬೈಕ್‌ನಲ್ಲಿ ಮಧ್ಯೆ ಅನುಷಾ ಕುಳಿತಿದ್ದರು. ನಾನು ಬೈಕ್ ಓಡಿಸುತ್ತಾ ಇದ್ದೆ. ಅನಿತಾ ಹಿಂದೆ ಕುಳಿತಿದ್ದರು. ಏಕಾಏಕಿ ಕ್ರಾಸ್‌ನಲ್ಲಿ ಬಂದು ದಿವ್ಯಾ ಸುರೇಶ್ ಕಾರು ಅನಿತಾ ಅವರ ಕಾಲಿಗೆ ಗುದ್ದಿದೆ.

ನಾವೆಲ್ಲರೂ ಕೆಳಗೆ ಬಿದ್ದೆವು. ಕೂಗಿದರೂ ನಿಲ್ಲಿಸದೇ ದಿವ್ಯಾ ಸುರೇಶ್ ಕಾರು ತೆಗೆದುಕೊಂಡು ಎಸ್ಕೇಪ್ ಆದರು. ಬಳಿಕ ನಾವು ಬಂದು ಬ್ಯಾಟರಾಯನಪುರ ಠಾಣೆಗೆ ದೂರು ನೀಡಿದೆವು. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಇದುವರೆಗೂ ದಿವ್ಯಾ ಸುರೇಶ್, ಅನಿತಾ ಹೇಗಿದ್ದಾರೆ ಎಂದು ಸಹ ವಿಚಾರಿಸಿಲ್ಲ ಎಂದು ಕಿರಣ್ ಅವರು ದೂರು ನೀಡಿದ್ದಾರೆ.

ತಪ್ಪು ಮಾಡಿದವ್ರಿಗೆ ಶಿಕ್ಷೆ ಆಗೇ ಆಗುತ್ತೆ: ತಮ್ಮ ಕಾರು ಡಿಕ್ಕಿ ಹೊಡೆದು ಇಬ್ಬರು ಮಹಿಳೆಯರು ಗಂಭೀರವಾಗಿ ಗಾಯಗೊಂಡಿದ್ದಾರೆಂಬ ಆರೋಪ ಕುರಿತು ಬಿಗ್ ಬಾಸ್ ಮಾಜಿ ಸ್ಪರ್ಧಿ ದಿವ್ಯಾ ಸುರೇಶ್ ಮೊದಲ ಪ್ರತಿಕ್ರಿಯೆ ನೀಡಿದ್ದಾರೆ. ಕಾನೂನಿನ ಮುಂದೆ ಯಾರೂ ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ. ನಾವು ಎಲ್ಲರು ಸಮಾನರೆ ಎಂದು ಹೇಳಿದ್ದಾರೆ.

ರಿಂಗ್ ರಸ್ತೆ ನಿರ್ಮಿಸಿದ ಗುತ್ತಿಗೆದಾರನಿಗೆ ಮುಂದಿನ ವಾರದೊಳಗೆ ಬಿಲ್ ಬಾಕಿ ಪಾವತಿ

ಮೈಸೂರು, ಅ.25(ಬಿಎಲ್‌ಯು)– ರಿಂಗ್ ರಸ್ತೆ ನಿರ್ಮಾಣ ಮಾಡಿರುವ ಗುತ್ತಿಗೆದಾರನ ಬಾಕಿ ಪಾವತಿಸದ ಹಿನ್ನೆಲೆಯಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ

ಎಂಡಿಎ ಆಯುಕ್ತರ ಭರವಸೆ

ಪೀಠೋಪಕರಣ ಜಪ್ತಿ ಮಾಡುವಂತೆ ನ್ಯಾಯಾಲಯ ಆದೇಶ ನೀಡಿದೆ ಎಂದು ಗುತ್ತಿಗೆದಾರರ ಪರ ವಕೀಲ ಮಹೇಶ್ ತಿಳಿಸಿದರು.

ಮೈಸೂರಿನ ಬೋಗಾದಿ ಸಿಗ್ನಲ್‌ನಿಂದ ದಟ್ಟಗಳ್ಳಿವರೆಗೆ ಕೆಎಂಸಿ ಕನ್ಸ್ಟ್ರಕ್ಷನ್ಸ್‌ನವರು ರಿಂಗ್ ರಸ್ತೆ ನಿರ್ಮಿಸಿದ್ದರು. ಆದರೆ ಅಂದಿನ ಮುಡಾ ಬಿಲ್ ಪಾವತಿ ಮಾಡರಲಿಲ್ಲ. ಈ ಹಿನ್ನೆಲೆ 7 ಕೋಟಿ ಬಿಲ್‌ಗೆ ಶೇಕಡ 9ರಷ್ಟು ಬಡ್ಡಿಯಂತೆ ಒಟ್ಟು 13 ಕೋಟಿ ನೀಡುವಂತೆ ನ್ಯಾಯಾಲಯ ಮೈಸೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೂಚನೆ ನೀಡಿದೆ ಎಂದರು.

ಒಂದು ವೇಳೆ ಬಿಲ್ ಪಾವತಿ ಮಾಡದಿದ್ದರೆ ಪೀಠೋಪಕರಣ ಜಪ್ತಿಗೆ ಆದೇಶ ನೀಡಿದೆ. ಈ ಹಿನ್ನೆಲೆಯಲ್ಲಿ ಇಂದು ಪ್ರಾಧಿಕಾರದ ಆಯುಕ್ತ ರಕ್ಷಿತ್ ಅವರನ್ನು ಭೇಟಿ ಮಾಡಿದ್ದೆವು. ಮುಂದಿನ ಬುಧವಾರದ ವೇಳೆಗೆ ಬಿಲ್ ಪಾವತಿಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದು ಮಹೇಶ್ ಹೇಳಿದರು.

ಶೃಂಗೇರಿ ಶಿವಗಂಗಾ ಮಠದ ಪುರುಷೋತ್ತಮ ಭಾರತೀ ಸ್ವಾಮೀಜಿ ನಿಧನ

ಬೆಂಗಳೂರು: ನೆಲಮಂಗಲ ತಾಲೂಕು ಡಾಬಸ್‌ಪೇಟೆ ಸಮೀಪದಲ್ಲಿರುವ ಶೃಂಗೇರಿ ಶಿವಗಂಗಾ ಮಠದ ಪುರುಷೋತ್ತಮ ಭಾರತೀ ಸ್ವಾಮೀಜಿ(73) ಅವರು ಶುಕ್ರವಾರ ನಿಧನರಾಗಿದ್ದಾರೆ.



ದೀಪಾವಳಿ ಹಬ್ಬದ ದಿನದಂದೇ ತೀವ್ರ ಅಸ್ವಸ್ಥರಾಗಿದ್ದ ಸ್ವಾಮೀಜಿ ಅವರಿಗೆ ನೆಲಮಂಗಲದಲ್ಲಿ ಚಿಕಿತ್ಸೆ ಕೊಡಿಸಲಾಗಿತ್ತು. ಅಲ್ಲಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಕರೆ ತಂದು ಚಿಕಿತ್ಸೆ ನೀಡಲಾಗಿತ್ತು ಅವರ ಆರೋಗ್ಯ ಸ್ಥಿತಿ ಸುಧಾರಿಸುತ್ತಿದ್ದರೂ ಬೆಳಗಿನ ಜಾವ ನಿಧನರಾದರು ಎಂದು ವಕೀಲ ಅಶೋಕ್ ಹಾರನಹಳ್ಳಿ ತಿಳಿಸಿದ್ದಾರೆ. ಶುಕ್ರವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ಶಿವಗಂಗಾ ಮಠದಲ್ಲಿ ನಡೆಯಲಿದೆ. ಶಿವಗಂಗಾ ಮಠದ 19ನೇ ಪೀಠಾಧಿಪತಿಗಳಾಗಿದ್ದ ಸ್ವಾಮೀಜಿ ಅವರ ಪೂರ್ವಾಶ್ರಮದ ಹೆಸರು ಕಮ್ಮಂಬಾಟಿ ನಾಗೇಶ್ವರ ಅವಧಾನಿಗಳು.

ಆಂಧ್ರ ಪ್ರದೇಶದ ಕೃಷ್ಣ ಜಿಲ್ಲೆಯ ಜೀಕೊಂಡೂರು ಮಂಡಲಂನ ವೆಲ್ಲಟೂರು ಗ್ರಾಮದಲ್ಲಿ ಕಮ್ಮಂಬಾಟಿ ಸೇತುಮಾಧವ ಅವಧಾನಿ ಮತ್ತು ಕಲ್ಯಾಣಿ ಬಾಲಾ ತ್ರಿಪುರಸುಂದರಮ್ಮ ದಂಪತಿ ದ್ವಿತೀಯ ಪುತ್ರರಾಗಿ 9ನೇ ಸೆಪ್ಟೆಂಬರ್ 1953 ಜನಿಸಿದರು.

ಕೆಎಸ್‌ಡಿಎಲ್ 2024–25ನೇ ಸಾಲಿನ ಲಾಭಾಂಶ ಭಾಗ 135 ಕೋಟಿ ಸಿಎಂಗೆ ಹಸ್ತಾಂತರ


ಬೆಂಗಳೂರು, ಅ.24(ಕೆಎಂಶಿ)– ಸರ್ಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆ (ಕೆಎಸ್‌ಡಿಎಲ್) 2024–25ನೇ ಸಾಲಿನ ಲಾಭಾಂಶದಲ್ಲಿ 135 ಕೋಟಿ ರೂ.ಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಂದಿಲ್ಲಿ ಹಸ್ತಾಂತರಿಸಿತು.

ಸಂಸ್ಥೆ ಪರವಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮತ್ತು ಕೆಎಸ್‌ಡಿಎಲ್ ಅಧ್ಯಕ್ಷ ಅಪ್ಪಾಜಿ ನಾಡಗೌಡ 135 ಕೋಟಿ ರೂ. ಮೊತ್ತದ ಚೆಕ್ ಅನ್ನು ಮುಖ್ಯಮಂತ್ರಿಗೆ ನೀಡಿದರು. ನಂತರ ಮಾತನಾಡಿದ ಸಚಿವ ಪಾಟೀಲ್, ಕೆಎಸ್‌ಡಿಎಲ್ ಕಳೆದ ಹಣಕಾಸು ವರ್ಷದಲ್ಲಿ 1,700 ಕೋಟಿ ರೂ. ವಹಿವಾಟು ನಡೆಸಿ, 451 ಕೋಟಿ ರೂ. ಲಾಭ ಕಂಡಿದೆ, ಈ ಪೈಕಿ ನಿಯಮದಂತೆ ಶೇ.30ರಷ್ಟು ಲಾಭಾಂಶವನ್ನು ಸರ್ಕಾರಕ್ಕೆ ನೀಡಲಾಗಿದೆ. ವಹಿವಾಟು, ಲಾಭ ಮತ್ತು ಲಾಭಾಂಶ ಮೂರರಲ್ಲೂ ಇದು ಸಾರ್ವಕಾಲಿಕ ದಾಖಲೆಯಾಗಿದೆ ಎಂದರು.

ಬಿಜೆಪಿ ಆಡಳಿತದಲ್ಲಿ ಸಂಸ್ಥೆಯು ವತಿಯಿಂದ ಸರ್ಕಾರಕ್ಕೆ 54 ಕೋಟಿ ರೂ. ಡಿವಿಡೆಂಡ್ (ಲಾಭಾಂಶ) ನೀಡಲಾಗಿತ್ತು, 2023–24ರಲ್ಲಿ 108 ಕೋಟಿ ರೂ. ಲಾಭಾಂಶ ಹಸ್ತಾಂತರಿಸಲಾಗಿತ್ತು. ಇದಕ್ಕೆ ಹೋಲಿಸಿದಲ್ಲಿ ಲಾಭಾಂಶದಲ್ಲಿ 27 ಕೋಟಿ ರೂ. ಹೆಚ್ಚಳವಾಗಿದೆ. ಮುಂಬರುವ ವರ್ಷಗಳಲ್ಲಿ ಲಾಭಾಂಶ ಮತ್ತಷ್ಟು ಹೆಚ್ಚಲಿದೆ ಎಂದರು.

ಬುದ್ಧ, ಅಂಬೇಡ್ಕರ್ ಭಾವಚಿತ್ರ ವಿರೂಪ; ಎಂಎಲ್‌ಸಿ ಶಿವಕುಮಾರ್ ಖಂಡನೆ

ಮೈಸೂರು, ಅ.24– ಚಾಮರಾಜ ನಗರ ತಾಲೂಕಿನ ಜ್ಯೋತಿಗೌಡನಪುರ ಗ್ರಾಮದಲ್ಲಿ ಬುದ್ಧನ ಮೂರ್ತಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರವನ್ನು ವಿರೂಪಗೊಳಿಸಿರುವುದಕ್ಕೆ ವಿಧಾನ ಪರಿಷತ್ ಸದಸ್ಯ ಶಿವಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಶಿವಕುಮಾರ್

ಸಮುದಾಯಗಳ ನಡುವೆ ದ್ವೇಷ ಹರಡಲು ಮಹನೀಯರ ಪ್ರತಿಮೆ ಹಾಗೂ ಪುತ್ಥಳಿಗಳು ವಸ್ತುವಾಗಬಾರದು. ಇಂತಹ ವಿಕೃತಿ ಮನಸ್ಸಿನ ದುಷ್ಟವ್ಯಕ್ತಿಗಳಿಂದ ಸಮಾಜದ ಸ್ವಾಸ್ಥ್ಯ ಮತ್ತು ಸಾಮರಸ್ಯ ಹಾಳಾಗುತ್ತಿದೆ. ಈ ಕೃತ್ಯ ಎಸಗಿದ ವಿಷಜಂತುಗಳನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದ್ದಾರೆ.

ಇಂತಹ ಅಹಿತಕರ ಘಟನೆ ತಡೆಗಟ್ಟಲು ರಾಜ್ಯಾದ್ಯಂತ ನಿರ್ಮಿಸಿರುವ ಹಲವು ಮಹನೀಯರ ಪುತ್ಥಳಿ, ಪ್ರತಿಮೆ ಎದುರು "ಸಿಸಿ ಕ್ಯಾಮೆರಾವನ್ನು" ಅಳವಡಿಸಿ ಜೀಯೋ ಟ್ಯಾಗಿಂಗ್ ವ್ಯವಸ್ಥೆ ಕಲ್ಪಿಸಿ, ಅದರ ಉಸ್ತುವಾರಿಯನ್ನು ಸ್ಥಳೀಯ ಪೊಲೀಸ್ ಠಾಣೆಗೆ ವಹಿಸುವುದು ಸೂಕ್ತ.

ಪ್ರತಿಮೆಯನ್ನು ಧ್ವಂಸ ಮಾಡುವುದರಿಂದ ಬಾಬಾ ಸಾಹೇಬರ ಶ್ರೇಷ್ಠ ವ್ಯಕ್ತಿತ್ವವನ್ನು ಮುಕ್ಕಾಗಿಸಲು ಈ ಜಗತ್ತಿನಲ್ಲಿ ಯಾರಿಂದಲೂ ಸಾಧ್ಯವಿಲ್ಲ. ಈ ಕೀಡಿಗೇಡಿತನದ ಆಲೋಚನೆಯು ಯಾರಿಗೂ ಒಳ್ಳೆಯದಲ್ಲ ಎಂದು ಖಂಡಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಇರುವ ಪಕ್ಷ, ಮೈಸೂರು ಅರಮನೆಯಲ್ಲ!

ಡಾ. ಯತೀಂದ್ರಗೆ ಶಾಸಕ ಶಿವಗಂಗಾ ಬಸವರಾಜ ಟಾಂಗ್

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಸಿಎಂ ಕುರ್ಚಿ ಕಿತ್ತಾಟ ಜೋರಾಗುತ್ತಿದೆ. ಉರಿಯುವ ಬೆಂಕಿಗೆ ತುಪ್ಪ ಸುರಿಯುವಂತೆ ಸಿಎಂ ಸಿದ್ದರಾಮಯ್ಯ ಪುತ್ರ ಡಾ. ಯತೀಂದ್ರ ನೀಡಿರುವ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ.

ಯತೀಂದ್ರ ಸಿದ್ದರಾಮಯ್ಯ ವಿರುದ್ಧ ಡಿಕೆಶಿ ಪರಮಾಪ್ತ, ಚನ್ನಗಿರಿ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜ ಪರೋಕ್ಷವಾಗ್ದಾಳಿ ನಡೆಸಿದ್ದಾರೆ. ಸಿಎಂ ಬದಲಾವಣೆ ವಿಚಾರದ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತೆ. ಉತ್ತರಾಧಿಕಾರಿ ಯಾರು ಎಂಬುದು ಹೈಕಮಾಂಡ್ ತೀರ್ಮಾನಿಸಲಿದೆ ಎಂದಿದ್ದಾರೆ. ಯತೀಂದ್ರ ಈ ತರ ಹೇಳಿಕೆ ನೀಡಿ ಪಕ್ಷಕ್ಕೆ ಮುಜುಗರ ಉಂಟು ಮಾಡಬಾರದು. ಈ ರೀತಿಯ ಬಾಲಿಶ ಹೇಳಿಕೆ ನೀಡಿದರೆ ಪಕ್ಷಕ್ಕೆ ಡ್ಯಾಮೇಜ್ ಆಗುತ್ತೆ ಅಂತ ಯತೀಂದ್ರ ವಿರುದ್ಧ ಶಿವಗಂಗಾ ಬಸವರಾಜು ಆಕ್ರೋಶ ವ್ಯಕ್ತಪಡಿಸಿದ್ದಾರೆ

2028ಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ. ಈ ನಿಟ್ಟಿನಲ್ಲಿ ಗಮನ ಹರಿಸಬೇಕು. ಇಂತವರ ಬಗ್ಗೆ ಹೈಕಮಾಂಡ್ ಗಮನ ಹರಿಸಬೇಕು. ಒಂದು ವೇಳೆ ಈ ರೀತಿಯಾಗಿ ನಾನು ಹೇಳಿಕೆ ಕೊಟ್ರೆ ನೋಟಿಸ್ ಕೊಡ್ತಾರೆ. ಆದರೆ ಮುಖ್ಯಮಂತ್ರಿಗಳ ಮಕ್ಕಳಾದ್ರೆ ಸುಮ್ಮನೆ ಇರೋದು ಸರಿಯಲ್ಲ.

ಈ ಬಗ್ಗೆ ಹೈಕಮಾಂಡ್ ಕ್ರಮ ಕೈಗೊಳ್ಳಲಿ ಎಂದು ಶಿವಗಂಗಾ ಬಸವರಾಜ್ ಆಗ್ರಹಿಸಿದ್ದಾರೆ. ಸತೀಶ್ ಜಾರಕಿಹೊಳಿ ಸಾಹೇಬರು 2032ಕ್ಕೆ ಸಿಎಂ ಕ್ಲೈಮ್ ಮಾಡುತ್ತೇನೆ ಅಂತ ಹೇಳಿದ್ದಾರೆ. ಆ ವೇಳೆ ನಾವು ಅವರಿಗೆ ಬೆಂಬಲ ನೀಡುತ್ತೇನೆ ಅಂತ ಶಿವಗಂಗಾ ಬಸವರಾಜು ತಿಳಿಸಿದ್ದಾರೆ.

ಕಾಂಗ್ರೆಸ್ ಹೈಕಮಾಂಡ್ ಇರುವ ಪಕ್ಷ, ಮೈಸೂರು ಅರಮನೆಯಲ್ಲ. ಮೈಸೂರು ರಾಜಮನೆತನದಲ್ಲಿ ವಂಶಪಾರಂಪರ್ಯ ಇರುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಆ ರೀತಿ ವ್ಯವಸ್ಥೆ ಇಲ್ಲ, ಹೈಕಮಾಂಡ್ ತೀರ್ಮಾನ ಮಾಡ್ತದೆ. ಹೈಕಮಾಂಡ್ ತೀರ್ಮಾನಕ್ಕೆ ನಾವು ಬದ್ಧರಾಗಿರಬೇಕು ಎಂದರು.

ಎಲ್ಲರೂ ನವೆಂಬರ್ ಕ್ರಾಂತಿ ಅಂಥಾ ಹೇಳ್ತಾರೆ, ನಾನು ಡಿಸೆಂಬರ್ ಎಂದಿದ್ದೇನೆ. ಡಿಸೆಂಬರ್ ನಂತರ ಆಗೇ ಆಗ್ತದೆ ಅದರ ಬಗ್ಗೆ ಮಾತನಾಡೋದು ಬೇಡ ಎಂದು ಡಿಸೆಂಬರ್ ವೇಳೆ ಡಿಕೆಶಿ ಸಿಎಂ ಆಗ್ತಾರೆ ಎಂದು ಪರೋಕ್ಷ ಹೇಳಿಕೆಯನ್ನು ಶಿವಗಂಗಾ ಬಸವರಾಜ ನೀಡಿದರು.

ಮೈಸೂರಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ ಧರೆಗುರುಳಿದ ಬೃಹತ್ ಮರಗಳು; ಎರಡು ಆಟೋರಿಕ್ಷಾ ಜಖಂ

● ಅದೃಷ್ಟವಶಾತ್ ತಪ್ಪಿದ ಅನಾಹುತ ● ಹಲವು ಗಂಟೆ ವಾಹನ ಸಂಚಾರಕ್ಕೆ ನಿರ್ಬಂಧ





ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಶುಕ್ರವಾರ ಗುಲ್ ಮೊಹರ್ ಮರ ಬಿದ್ದು ಆಟೋರಿಕ್ಷಾಗಳು ಜಖಂಗೊಂಡಿರುವುದು.

ಮೈಸೂರು,ಅ.24(ಎಂಟಿವೈ, ಎಸ್‌ಬಿಡಿ)– ಮೈಸೂರಿನ ಪ್ರತ್ಯೇಕ ಸ್ಥಳದಲ್ಲಿ ಶುಕ್ರವಾರ ಎರಡು ಬೃಹತ್ ಮರಗಳು ಬುಡಸಹಿತ ಉರುಳಿಬಿದ್ದಿವೆ ಒಂದೆಡೆ ಎರಡು ಆಟೋರಿಕ್ಷಾಗಳು ಜಖಂಗೊಂಡು ಚಾಲಕರು ಪ್ರಾಣಾಪಾಯದಿಂದ ಪಾರಾಗಿದ್ದು, ಮತ್ತೊಂದೆಡೆ ಅದೃಷ್ಟವಶಾತ್ ಭಾರೀ ಅವಘಡ ತಪ್ಪಿದೆ.

ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಸಮೀಪ ಕರ್ಜನ್ ಪಾರ್ಕ್ ಆವರಣದಲ್ಲಿದ್ದ ಗುಲ್‌ಮೊಹರ್ ಮರವೊಂದು ಇಂದು ಬೆಳಗ್ಗೆ 11.30ರ ಸುಮಾರಿನಲ್ಲಿ ಬುಡಮೇಲಾಗಿ ಉರುಳಿ ಬಿದ್ದಿದ್ದು, ಮಧ್ಯಾಹ್ನ 1.45ರ ಸುಮಾರಿನಲ್ಲಿ ವಾಣಿವಿಲಾಸ ವಾಟರ್ ವರ್ಕ್ಸ್ ಬಳಿ ಕೆಆರ್‌ಎಸ್ ರಸ್ತೆ ಬದಿಯಲ್ಲಿದ್ದ ಭಾರೀ ಎತ್ತರ ಹಾಗೂ ಗಾತ್ರದ ನೀಲಗಿರಿ ಮರ ಬುಡಸಹಿತ ನೆಲಕ್ಕುರುಳಿದೆ.



ವಾಣಿವಿಲಾಸ ವಾಟರ್‌ವರ್ಕ್ಸ್ ಬಳಿ ಕೆಆರ್‌ಎಸ್ ರಸ್ತೆಗೆ ಅಡ್ಡಲಾಗಿ ಬಿದ್ದಿರುವ ನೀಲಗಿರಿ ಮರ.

ಪಾರಾದ ಚಾಲಕರು: ಕೋಟೆ ಆಂಜನೇಯಸ್ವಾಮಿ ದೇವಾಲಯ ಸಮೀಪದ ಶ್ರೀರಾಮ ದೇವಾಲಯದ ಬಳಿ ಕರ್ಜನ್ ಪಾರ್ಕ್‌ನಲ್ಲಿದ್ದ ಬೃಹತ್ ಗುಲ್‌ಮೊಹರ್ ಮರ ಏಕಾಏಕಿ ಧರೆಗುರುಳಿ ಬಿದ್ದಿದೆ. ಇದೇ ವೇಳೆ ಮರದ ಕೆಳಗೆ ನಿಲ್ಲಿಸಿದ್ದ ಎರಡು ಆಟೋರಿಕ್ಷಾಗಳ ಮೇಲೆ ಮರ ಬಿದ್ದು, ಅವು ಜಖಂಗೊಂಡಿವೆ. ಆಟೋಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಚಾಲಕರಾದ ಎನ್.ಆರ್.ಮೊಹಲ್ಲಾದ ಆಸೀಫ್ ಹಾಗೂ ಸಾತಗಳ್ಳಿಯ ಸಲೀಂ, ಅದೃಷ್ಟವಶಾತ್ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮರ ಉರುಳಿ ಬೀಳುತ್ತಿದ್ದಂತೆ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ಇದ್ದ ಇತರ ಆಟೋ ಚಾಲಕರು ಹಾಗೂ ಸಾರ್ವಜನಿಕರು ತಕ್ಷಣ ದೌಡಾಯಿಸಿ, ಮರದ ಕೆಳಗೆ ಸಿಲುಕಿದ್ದ ಆಟೋ ಚಾಲಕರನ್ನು ರಕ್ಷಿಸಿ ಉಪಚರಿಸಿದ್ದಾರೆ. ಬಳಿಕ ದೇವರಾಜ ಕಾನೂನು–ಸುವ್ಯವಸ್ಥೆ ಮತ್ತು ಸಂಚಾರ ಠಾಣೆಯ ಪೊಲೀಸರು, ಮೈಸೂರು ಮಹಾನಗರ ಪಾಲಿಕೆಯ ತೋಟಗಾರಿಕೆ ವಿಭಾಗ ಹಾಗೂ ಅಭಯ ತಂಡದ ಸಿಬ್ಬಂದಿಯೊಂದಿಗೆ ಆಟೋ ಮೇಲೆ ಬಿದ್ದಿದ್ದ ಮರವನ್ನು ತೆರವುಗೊಳಿಸಿದರು.

ತಪ್ಪಿದ ಅನಾಹುತ: ಸದಾ ವಾಹನ ದಟ್ಟಣೆ ಇರುವ ಕೆಆರ್‌ಎಸ್ ರಸ್ತೆಗೆ ಅಡ್ಡಲಾಗಿ ಬೃಹತ್ ನೀಲಗಿರಿ ಮರ ಉರುಳಿಬಿದ್ದಿದ್ದು, ತುರ್ತು ಕ್ರಮದ ಪರಿಣಾಮ ಭಾರೀ ಅನಾಹುತ ತಪ್ಪಿದಂತಾಗಿದೆ. ವಾಣಿವಿಲಾಸ ವಾಟರ್ ವರ್ಕ್ಸ್ ಬಳಿ ಸಿಎಫ್‌ಟಿಆರ್‌ಐ ಕಡೆಗೆ ರಸ್ತೆ ಬದಿಯ ನೀಲಗಿರಿ ಮರವೊಂದರ ಬುಡ ಮೇಲೆದ್ದು, ಪಕ್ಕದ ಮರವನ್ನು ಒರಗಿದೆ. ಈ ಬಗ್ಗೆ ಮಾಹಿತಿ ತಿಳಿದ ವಲಯ ಕಚೇರಿ 4ರ ಆಯುಕ್ತ ಮಹೇಶ್ ಜಿಗಣಿ ಅವರು, ಪಾಲಿಕೆಯ ತೋಟಗಾರಿಕೆ ವಿಭಾಗದ ಅಧಿಕಾರಿಗಳಿಗೆ ತುರ್ತು ಕ್ರಮಕ್ಕೆ ಸೂಚಿಸಿದ್ದಾರೆ. ಆ ವೇಳೆ ಗೋಕುಲಂನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಲ್ಯಾಡರ್ ವೆಹಿಕಲ್ ಸಿಬ್ಬಂದಿಯೊಂದಿಗೆ ತೋಟಗಾರಿಕಾ ನಿರೀಕ್ಷಕ ವೈ.ಸಿ.ಮನೀತ್ ಕುಮಾರ್ ಕೆಲವೇ ನಿಮಿಷಗಳಲ್ಲಿ ಸ್ಥಳಕ್ಕೆ ಧಾವಿಸಿದ್ದಾರೆ. ಅಷ್ಟರಲ್ಲಿ ಎಇಇ ಪಿ.ಕೆ. ಮೋಹನ್‌ಕುಮಾರ್ ಹಾಗೂ ವಿವಿ ಪುರಂ ಸಂಚಾರ ಠಾಣೆ ಪೊಲೀಸರೂ ಬಂದಿದ್ದಾರೆ. ತಕ್ಷಣ ವಾಹನ ಸಂಚಾರವನ್ನು ನಿರ್ಬಂಧಿಸಿ, ನಿಗಾ ವಹಿಸಿದ್ದಾರೆ.

ಕೆಲ ಹೊತ್ತಿನಲ್ಲೇ ಮರಕ್ಕೆ ಒರಗಿದ್ದ ಮರ ನೆಲಕ್ಕುರುಳಿದೆ. ಈ ವೇಳೆ ವಿದ್ಯುತ್ ತಂತಿ ಮೇಲೆ ಬಿದ್ದಿದ್ದರಿಂದ ಎರಡು ಕಂಬಗಳು ಮುರಿದಿವೆ. ಬಳಿಕ ಪಾಲಿಕೆಯ ಲ್ಯಾಡರ್ ವಾಹನದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಮರವನ್ನು ತೆರವುಗೊಳಿಸಿದ್ದಾರೆ. ಘಟನೆಯಿಂದ ಒಂದು ಗಂಟೆ ಕಾಲ ರಸ್ತೆ ಸಂಚಾರ ಅಸ್ತವ್ಯಸ್ತವಾಗಿತ್ತಾದರೂ ಸಂಚಾರ ಪೊಲೀಸರು ಬದಲಿ ಮಾರ್ಗದಲ್ಲಿ ವಾಹನ ಸಂಚಾರ ನಿರ್ವಹಿಸಿದ್ದರಿಂದ ಹೆಚ್ಚು ತೊಂದರೆಯಾಗಲಿಲ್ಲ.

ನಿಟ್ಟುಸಿರು ಬಿಟ್ಟ ಜನ

ಈ ಘಟನೆಗಳು ಆತಂಕ ಸೃಷ್ಟಿಸಿದ್ದರೂ ಸದ್ಯ ಯಾವುದೇ ಪ್ರಾಣಾಪಾಯ ಆಗಲಿಲ್ಲ ಎಂಬ ಸಮಾಧಾನದಿಂದ ಜನ ನಿಟ್ಟುಸಿರು ಬಿಟ್ಟರು. ಹಳೆಯ ಗುಲ್‌ಮೊಹರ್ ಮರ ದುರ್ಬಲಗೊಂಡಿತ್ತು. ಸತತ ಮಳೆ ಹಿನ್ನೆಲೆಯಲ್ಲಿ ಬುಡ ಸಡಿಲಗೊಂಡು ಮರ ಉರುಳಿಬಿದ್ದಿದೆ. ಈ ಸ್ಥಳದಲ್ಲಿ ಪ್ರವಾಸಿಗರು, ಆಟೋ ಚಾಲಕರು, ವ್ಯಾಪಾರಿಗಳು ಸೇರಿದಂತೆ ಯಾವಾಗಲೂ ಜನ ಇರುತ್ತಾರೆ. ಇನ್ನು ದಸರಾ ವೇಳೆ ಮರ ಉರುಳಿದ್ದರೆ ಭಾರೀ ಸಾವು–ನೋವಾಗುವ ಸಾಧ್ಯತೆ ಇತ್ತು. ಇನ್ನು ಕೆಆರ್‌ಎಸ್ ರಸ್ತೆಯಲ್ಲೂ ಸದಾ ವಾಹನ ದಟ್ಟಣೆ ಇರುತ್ತದೆ. ಒಂದು ವೇಳೆ ತುರ್ತು ಕ್ರಮ ವಹಿಸದಿದ್ದರೆ ದೊಡ್ಡ ಅನಾಹುತವೇ ಸಂಭವಿಸುತ್ತಿತ್ತು.

ಸಚಿವ ಡಾ.ಹೆಚ್.ಸಿ.ಮಹದೇವಪ್ಪಗೆ ಅಪಮಾನ

ಅ.28 ಮೈಸೂರು ಎಸ್‌ಪಿ ಕಚೇರಿ ಬಳಿ ತಮಟೆ ಚಳುವಳಿ

ದಲಿತ ಮಹಾಸಭಾ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯಿಂದ ಹೋರಾಟ

ಮೈಸೂರು,ಅ.24(ಜಿಎ)–ಪ್ರತಿಭಟನೆಯಲ್ಲಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆಯುವ ಮೂಲಕ ಅಪಮಾನಿಸಿರುವ ಆರ್. ಭಾಸ್ಕರ್ ಪ್ರಸಾದ್ ಹಾಗೂ ಅರುಣ್‌ಕುಮಾರ್ ಅವರನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಅ.28 ರಂದು ಬೆಳಗ್ಗೆ 11ಗಂಟೆಗೆ ಎಸ್‌ಪಿ ಕಚೇರಿ ಬಳಿ ದಲಿತ ಮಹಾಸಭಾ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ತಮಟೆ ಚಳವಳಿ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೂಡಲೇ ಈ ಇಬ್ಬರನ್ನು ಜಿಲ್ಲೆಯಿಂದ ಗಡಿಪಾರು ಮಾಡಬೇಕು. ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಬೇಕೆಂದು ಒತ್ತಾಯಿಸಲಾಗುವುದು. ಒಳ ಮೀಸಲಾತಿ ವಿಷಯದಲ್ಲಿ ಅನ್ಯಾಯವಾಗಿದ್ದರೆ ಸರ್ಕಾರದ ಮುಂದೆ ಹಾಗೂ ನ್ಯಾಯಾಲಯದಲ್ಲಿ ಸಮಸ್ಯೆ ಬಗೆಹರಿಸಿಕೊಳ್ಳಬಹುದಾಗಿದೆ. ಆದರೆ ಇವರು ಬಿಜೆಪಿ ಕುತಂತ್ರಕ್ಕೆ ಒಳಗಾಗಿ ಹೆಚ್.ಸಿ.ಮಹದೇವಪ್ಪ ಹಾಗೂ ಕಾಂಗ್ರೆಸ್ ಪಕ್ಷವನ್ನು ಗುರಿಯಾಗಿರಿಸಿಕೊಂಡಿದ್ದಾರೆ ಎಂದರು.

ಪ್ರತಿಭಟನೆ ವೇಳೆ ಮಹದೇವಪ್ಪ ಅವರ ಭಾವಚಿತ್ರಕ್ಕೆ ಅಪಮಾನಿಸಲಾಗಿದೆ. ಇವರು ಮೈಸೂರು ಭಾಗದಲ್ಲಿ ವಾತಾವರಣ ಕಲುಷಿತಗೊಳಿಸುತ್ತಿದ್ದಾರೆ. ಜಾತಿ ಜಾತಿಗಳ ನಡುವೆ ದ್ವೇಷ ಬಿತ್ತುತ್ತಿದ್ದಾರೆ. ಭಾಸ್ಕರ್ ಪ್ರಸಾದ್ ಹಾಗೂ ಅರುಣ್‌ಕುಮಾರ್ ಅವರು ರಾಜಕೀಯ ಸ್ಥಾನಮಾನಕ್ಕಾಗಿ ಎರಡು ಜಾತಿಗಳ ನಡುವೆ ಸಂಘರ್ಷವುಂಟು ಮಾಡುತ್ತಿದ್ದಾರೆ. ಆದರೂ ಪೊಲೀಸರು ಇವರನ್ನು ಬಂಧಿಸದೇ ಕಾಲಹರಣ ಮಾಡುತ್ತಿದ್ದಾರೆಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಹಾಸಭಾ ಮುಖಂಡ ಎಸ್.ರಾಜೇಶ್, ಮಹೇಶ್ ಅಶೋಕಪುರಂ, ಯೋಗೇಶ್ ಉಪ್ಪಾರ್, ಸೈಯದ್ ಫಾರೂಕ್, ಲೋಕೇಶ್ ಮಾದಾಪುರ, ಗುರುದೇವ ರಾಮಪ್ಪ ಉಪಸ್ಥಿತರಿದ್ದರು.

ಸಿಲಿಂಡರ್ ಸೋರಿಕೆ; ಅಗ್ನಿಜ್ವಾಲೆಯಿಂದ ಸಯ್ಯಾಜಿರಾವ್ ರಸ್ತೆ ಹೋಟೆಲ್‌ನಲ್ಲಿ ಆತಂಕ

● ಅಗ್ನಿ ಶಾಮಕ ದಳದಿಂದ ಯಶಸ್ವಿ ಕಾರ್ಯಾಚರಣೆ ● ತಪ್ಪಿದ ಭಾರೀ ಅನಾಹುತ

ಮೈಸೂರು, ಅ.24(ವಿವಿಹೆಚ್)– ಖಾಸಗಿ ಹೋಟೆಲ್ ಒಂದರಲ್ಲಿ ಸಿಲಿಂಡರ್ ಸೋರಿಕೆಯಾಗಿ ಬೆಂಕಿ ಹೊತ್ತಿಕೊಂಡು, ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಶುಕ್ರವಾರ ಸಂಜೆ 6.50ರ ವೇಳೆಗೆ ನಗರದ ಸಯ್ಯಾಜಿ ರಾವ್ ರಸ್ತೆಯಲ್ಲಿರುವ 'ಬಿಗ್ ಗ್ರಿಲ್– ಫ್ಯಾಮಿಲಿ ರೆಸ್ಟೋರೆಂಟ್'ನಲ್ಲಿ ಸಿಲಿಂಡರ್ ಸೋರಿಕೆಯಿಂದಾಗಿ ಬೆಂಕಿ ಕಾಣಿಸಿಕೊಂಡಿತ್ತು. ಮಾಹಿತಿ ಆಧರಿಸಿ ತಕ್ಷಣ ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಹೋಟೆಲ್ ಮಾಲೀಕ ಇಮ್ರಾನ್, ಅಡುಗೆಗೆ ಹೊಸದಾಗಿ 4 ಸಿಲಿಂಡರ್‌ಗಳನ್ನು ಖರೀದಿಸಲಾಗಿತ್ತು. ಅವುಗಳ ರೆಗ್ಯೂಲೇಟರ್‌ಗೆ ಅಳವಡಿಸಿ ಸ್ಟೌವ್ ಆನ್ ಮಾಡಿದ ತಕ್ಷಣ ಬೆಂಕಿ ಕಾಣಿಸಿಕೊಂಡಿತು. ಒಂದರ ಹಿಂದೆ ಒಂದರಂತೆ ಎಲ್ಲಾ 4 ಸಿಲಿಂಡರ್‌ಗಳಲ್ಲಿ ಬೆಂಕಿ ಕಾಣಿಸಿಕೊಂಡ ಹಿನ್ನೆಲೆ ತಕ್ಷಣ ಅಗ್ನಿ ಶಾಮಕ ದಳಕ್ಕೆ ಕರೆ ಮಾಡಿ ಮಾಹಿತಿ ನೀಡಿದೆವು. ಮಾಹಿತಿ ಮೇರೆಗೆ ಬಂದ ಸಿಬ್ಬಂದಿ ಬೆಂಕಿ ನಂದಿಸಿ, ಸಿಲಿಂಡರ್‌ಗಳನ್ನು ವಾಪಸ್ ಕಳುಹಿಸಿಕೊಟ್ಟಿದ್ದಾರೆ. ಸಿಲಿಂಡರ್‌ನಲ್ಲಿನ ಸಮಸ್ಯೆಯಿಂದಾಗಿ ಈ ಅನಾಹುತ ಉಂಟಾಯಿತು. ಅದೃಷ್ಟವಶಾತ್ ಯಾವುದೇ ಸಾವು ನೋವು ಸಂಭವಿಸಿಲ್ಲ ಎಂದರು.

ಮೊದಲು ಅಂಗಡಿ ಹಾಗೂ ಇಲ್ಲಿನ ಸ್ಥಿತಿಗತಿಗಳತ್ತ ಗಮನ ನೀಡಲಾಗುತ್ತಿದೆ. ಬಳಿಕ ಸಿಲಿಂಡರ್ ಕಂಪನಿ ವಿರುದ್ಧ ದೂರು ನೀಡಲು ನಿರ್ಧರಿಸಲಾಗುವುದು ಎಂದು ಮಾಹಿತಿ ನೀಡಿದರು.

ಅಗ್ನಿಶಾಮಕ ಠಾಣೆಯ ಸಹಾಯಕ ಅಧಿಕಾರಿ ಡಿ.ಎಂ.ಗಿರೀಶ್ ಮಾತನಾಡಿ, 4 ಸಿಲಿಂಡರ್‌ಗಳು ಅಡುಗೆ ಕೋಣೆಯಲ್ಲಿ ಹೊತ್ತಿ ಉರಿಯುತ್ತಿದ್ದವು. ನಮ್ಮ ಸಿಬ್ಬಂದಿ ಕಾರ್ಯಕ್ಷಮತೆಯಿಂದ ಅವುಗಳನ್ನು ನಂದಿಸಲಾಗಿದೆ. ಅಡುಗೆ ಕೋಣೆಯಲ್ಲಿ ಯಾವುದೇ ಹಾನಿಯಾಗಿಲ್ಲ. ಈ ಸಿಲಿಂಡರ್‌ಗಳನ್ನು ಸ್ಥಳಾಂತರ ಮಾಡಲಾಗಿದೆ. ಗ್ರಾಹಕರು ಯಾವುದೇ ಆತಂಕ ಪಡಬೇಕಾಗಿಲ್ಲ ಎಂದು ವಿವರಿಸಿದರು.



'ಬಿಗ್ ಗ್ರಿಲ್– ಫ್ಯಾಮಿಲಿ ರೆಸ್ಟೋರೆಂಟ್'

ರಾಷ್ಟ್ರೀಯ ಉದ್ಯೋಗ ಮೇಳದಲ್ಲಿ ಉದ್ಯೋಗ ಪಡೆದ 86 ಮಂದಿಗೆ ನೇಮಕಾತಿ ಪತ್ರ ವಿತರಣೆ



ರಾಷ್ಟ್ರೀಯ ಉದ್ಯೋಗ ಮೇಳದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೇರಿದಂತೆ ವಿವಿಧ ಬ್ಯಾಂಕ್, ವಿವಿಧ ಇಲಾಖೆಗಳಲ್ಲಿ ಉದ್ಯೋಗ ಪಡೆದ 86 ಮಂದಿಗೆ ನೇಮಕಾತಿ ಪತ್ರವನ್ನು ವಿತರಿಸಲಾಯಿತು.

ಮೈಸೂರು,ಅ.24(ಜಿಎ)–ರಾಷ್ಟ್ರೀಯ ಉದ್ಯೋಗ ಮೇಳದಲ್ಲಿ ವಿವಿಧ ಇಲಾಖೆಗಳು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸೇರಿದಂತೆ ವಿವಿಧ ಬ್ಯಾಂಕ್‌ಗಳಲ್ಲಿ ಉದ್ಯೋಗ ಪಡೆದ 86 ಮಂದಿಗೆ ನೇಮಕಾತಿ ಪತ್ರವನ್ನು ವಿತರಿಸಲಾಯಿತು.

ದೇಶದ 40 ಸ್ಥಳಗಳಲ್ಲಿ ಶುಕ್ರವಾರ ಆಯೋಜಿಸಿದ್ದ 17ನೇ 'ರಾಷ್ಟ್ರೀಯ ಉದ್ಯೋಗ ಮೇಳ'ಕ್ಕೆ ಪ್ರಧಾನಿ ನರೇಂದ್ರ ಮೋದಿ ವರ್ಚ್ಯುವಲ್ ಮೂಲಕ ಚಾಲನೆ ನೀಡಿದರು. ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ, ಮೈಸೂರು ವಿಭಾಗದಲ್ಲಿ ನೇಮಕಗೊಂಡ ಅಭ್ಯರ್ಥಿಗಳಿಗೆ ಶಾಸಕ ಟಿ.ಎಸ್.ಶ್ರೀವತ್ಸ ನೇಮಕಾತಿ ಪತ್ರವನ್ನು ವಿತರಿಸಿ ಅಭಿನಂದಿಸಿದರು.

ಈ ವೇಳೆ ಅಂಚೆ ಇಲಾಖೆಯ ರಾಜ್ಯ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಕೆ.ಪ್ರಕಾಶ್ ಮಾತನಾಡಿ, ಯಾವುದೇ ಹುದ್ದೆಯಾದರೂ ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಉನ್ನತ ಹುದ್ದೆಗಳಿಗೆ ಏರಲು ಅಗತ್ಯ ಕೌಶಲಗಳನ್ನು ಸಿದ್ಧಿಸಿಕೊಳ್ಳಬೇಕು. ತಂಡವಾಗಿ ಕರ್ತವ್ಯ ನಿರ್ವಹಿಸಬೇಕು. ಸರ್ಕಾರಿ ಕೆಲಸವೆಂದರೆ ಅದು ದೇವರ ಕೆಲಸ ಎಂಬ ಉಕ್ತಿಯನ್ನು ಉದ್ಯೋಗ ಪಡೆದವರು ಕಾರ್ಯರೂಪಕ್ಕೆ ತರಬೇಕು. ಸಾರ್ವಜನಿಕರು ಸೇವೆಯನ್ನು ಬಯಸುತ್ತಾರೆ. ಅವರ ಕೆಲಸವನ್ನು ಮಾಡುವುದು ದೇವರ ಕೆಲಸವೇ ಸರಿ. ಅದರಿಂದ ಹುದ್ದೆಗೂ ಘನತೆ, ಗೌರವಗಳು ಸಿಗುತ್ತವೆ ಎಂದು ತಿಳಿಸಿದರು.

ಆಯಿಷ್ ನಿರ್ದೇಶಕಿ ಪ್ರೊ.ಎಂ.ಪುಷ್ಪಾವತಿ ಮಾತನಾಡಿ, ಜನರ ತೆರಿಗೆ ಹಣದಿಂದ ಸರ್ಕಾರಿ ಸಂಸ್ಥೆಗಳು ನಡೆಯುತ್ತಿವೆ ಎಂಬುದನ್ನು ಸದಾ ನೆನಪಿನಲ್ಲಿಡಬೇಕು. ಕಾನೂನು ನಿಯಮಗಳಿಗೆ ಅನುಗುಣವಾಗಿಯೇ ನಡೆದುಕೊಳ್ಳಬೇಕು. ಪ್ರಾಮಾಣಿಕತೆಯ ಸೇವಾ ಮನೋಭಾವ ಇದ್ದರೆ ಮಾನವೀಯ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ ಎಂದರು.

ಸರ್ಕಾರಿ ಕೆಲಸ ಪಡೆದವರು ಸಮಸ್ಯಾ ಪೆಟ್ಟಿಗೆ ಆಗದೇ, ಸಲಹಾ ಪೆಟ್ಟಿಗೆ ಆಗಬೇಕು. ಯಾವಾಗಲೂ ದೂರುತ್ತಾ ಕೂರದೇ ಜನರ ಕೆಲಸಗಳನ್ನು ಸುಗಮಗೊಳಿಸಲು ಅಗತ್ಯ ಜ್ಞಾನ, ಬುದ್ಧಿವಂತಿಕೆಯನ್ನು ಉಪಯೋಗಿಸಬೇಕು ಸಲಹೆ ನೀಡಿದರು.

ಕರ್ತವ್ಯ ನಿಷ್ಠೆಯಿಂದ ದುಡಿದರೆ ಪ್ರಶಂಸೆಯ ಸುರಿಮಳೆಯಾಗುತ್ತದೆ. ಸಹನೆ ಹಾಗೂ ತಾಳ್ಮೆಯಿಂದ ನಡೆದುಕೊಳ್ಳಬೇಕು. ದ್ವೇಷದ ವಾತಾವರಣ ನಿರ್ಮಿಸಲು ಬುದ್ಧಿವಂತಿಕೆ ಉಪಯೋಗಿಸದೇ ಹಿರಿಯರ ಅನುಭವ ಬಳಸಿಕೊಳ್ಳುವ, ಕಿರಿಯರನ್ನು ಉತ್ತೇಜಿಸುವ ಕೆಲಸವನ್ನು ಮಾಡಬೇಕು. ಆಗ ಮಾತ್ರವೇ ಇಲಾಖೆಯಷ್ಟೇ ಅಲ್ಲ, ದೇಶದ ಅಭಿವೃದ್ಧಿಗೂ ವೇಗ ಬರುತ್ತದೆ ಎಂದು ಅಭಿಪ್ರಾಯಪಟ್ಟರು.

ರೈಲ್ವೆ, ಆಯಿಷ್, ಎಸ್‌ಬಿಐ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಉದ್ಯೋಗ ಗಿಟ್ಟಿಸಿದ ರಾಜೀವ್ ಕುಮಾರ್, ಅನುಜ್ ಕುಮಾರ್, ಮಹಾವೀರ್ ಸಿಂಗ್, ವಿಪಿನ್ ಕುಮಾರ್, ಮನೀಷ್ ಸೇರಿದಂತೆ ಹಲವು ಮಂದಿಗೆ ಸಾಂಕೇತಿಕವಾಗಿ ನೌಕರಿ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ದಕ್ಷಿಣ ಕರ್ನಾಟಕ ವಿಭಾಗದ ಪೋಸ್ಟ್ ಮಾಸ್ಟರ್ ಜನರಲ್ ಚಂದ್ರಶೇಖರ್ ಕಾಕುಮನು, ನೈರುತ್ಯ ರೈಲ್ವೆ ಮೈಸೂರು ವಿಭಾಗೀಯ ಹೆಚ್ಚುವರಿ ಡಿಆರ್‌ಎಂ ಶಮ್ಮಾಸ್ ಹಮೀದ್ ಪಾಲ್ಗೊಂಡಿದ್ದರು.

ಶಿಕ್ಷಣ ಕ್ಷೇತ್ರಕ್ಕೆ ಭಾರತೀಯ ಸಂಸ್ಕೃತಿ ಪರಿಚಯಿಸುವಲ್ಲಿ ಮೈಸೂರು ಸಂಸ್ಥಾನ ಹಿಂದಿನಿಂದಲೂ ಶ್ರಮಿಸಿದೆ

ಸಂಸದ ಯದುವೀರ್ ಒಡೆಯರ್ ವಿವರಣೆ

ಮೈಸೂರು, ಅ.24(ಎಸ್‌ಪಿಎನ್)– ಶಿಕ್ಷಣ ಕ್ಷೇತ್ರಕ್ಕೆ ಭಾರತೀಯ ಪರಂಪರೆ, ಸಂಸ್ಕೃತಿ ಪರಿಚಯಿಸುವ ನಿಟ್ಟಿನಲ್ಲಿ ಮೈಸೂರು ಸಂಸ್ಥಾನ ಈ ಹಿಂದಿನಿಂದಲೂ ಶ್ರಮಿಸಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಮೈಸೂರು ಚಾಮರಾಜಪುರಂ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿನ ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಆವರಣದಲ್ಲಿ ಏರ್ಪಡಿಸಿದ್ದ ಮೈಸೂರು ಸಂಸ್ಥಾನದ ಶ್ರೀ ಹತ್ತನೇ ಚಾಮರಾಜ ಒಡೆಯರ್ ಅವರ ಪುತ್ಥಳಿ ಅನಾವರಣಗೊಳಿಸಿ ಅವರು ಮಾತನಾಡಿದರು.

ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಅನ್ನು 1957ರಲ್ಲಿ ಶ್ರೀ ಜಯಚಾಮರಾಜ ಒಡೆಯರ್ ಅವರು ಸ್ಥಾಪಿಸಿದರು. ಈ ಹಿಂದೆ ಹತ್ತನೇ ಚಾಮರಾಜ ಒಡೆಯರ್ ಆಳ್ವಿಕೆಯಲ್ಲಿ ಬಡವರಿಗೆ ಉಚಿತ ಶಿಕ್ಷಣ ನೀಡುವ ಉದ್ದೇಶದಿಂದ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆಗ ನೇರ ಅರಮನೆಯಿಂದಲೇ ಈ ಸಂಸ್ಥೆಯ ಉಸ್ತುವಾರಿ ವಹಿಸಲಾಗಿತ್ತು. ಕ್ರಮೇಣ ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಆಡಳಿತ ಬಂದ ಮೇಲೆ ಟ್ರಸ್ಟ್ ಮೂಲಕ ಶಿಕ್ಷಣ ನೀಡಲು ಮುಂದಾಗಿದೆ. ಈ ಸಂಸ್ಥೆಯಲ್ಲಿ ಓದಿದ ಅನೇಕರು ಇಂದು ಉನ್ನತ ಹುದ್ದೆಯಲ್ಲಿದ್ದಾರೆ ಎಂದರು.

ರಾಜ್ಯದಲ್ಲಿ ಅರಸು ಜನಾಂಗ ಅತೀ ಸಣ್ಣ ಸಂಖ್ಯೆಯಲ್ಲಿದೆ. ಆದರೂ ಭಾರತೀಯ ಇತಿಹಾಸದಲ್ಲಿ ತನ್ನದೆ ಕೊಡುಗೆ ನೀಡಿದೆ. ನಮ್ಮ ಪೂರ್ವಜರು ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. 2023ರಲ್ಲಿ ಜಯಚಾಮರಾಜೇಂದ್ರ ಎಕ್ಸಲೆನ್ಸ್ ಶಾಲೆ, ಹಾಗೂ ಆರ್ಕಿಟೆಕ್ ಇಂಜಿನಿಯರ್ ಸಂಸ್ಥೆ ಕೂಡ ಆರಂಭಿಸಲಾಗಿದೆ. ಈ ಸಂಸ್ಥೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ದೇಶದಲ್ಲೇ ಆರನೇ ಸ್ಥಾನ ಪಡೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಸಂಸ್ಥಾನ ಹತ್ತನೇ ಚಾಮರಾಜ ಒಡೆಯರ್ ಅವರ ಆಳ್ವಿಕೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಂಡಿತು. 1881ರಲ್ಲಿ ಮೈಸೂರು ಪ್ರತಿನಿಧಿಸಭೆಯನ್ನು ಸ್ಥಾಪಿಸಿದರು. ಭಾರತದ ರಾಜಪ್ರಭುತ್ವದ ಆಳ್ವಿಕೆಯಲ್ಲಿ ಆಧುನಿಕ ಪ್ರಜಾಪ್ರಭುತ್ವದ ಮೊದಲ ಶಾಸಕಾಂಗ ಸಂಸ್ಥೆಯಾಗಿತ್ತು. ಅಲ್ಲದೆ, 1893ರಲ್ಲಿ ಸ್ವಾಮಿ ವಿವೇಕಾನಂದರರ ಚಿಕಾಗೋದಲ್ಲಿ ನಡೆಯುತ್ತಿದ್ದ ಸರ್ವಧರ್ಮ ಸಮ್ಮೇಳನಕ್ಕೆ ತೆರಳಲು ಆರ್ಥಿಕ ಸಹಾಯ ಮಾಡಿದ್ದರು. ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ, ಶಿಕ್ಷಣ ಸಂಸ್ಥೆ ಸ್ಥಾಪಿಸಿದ್ದರು. ಈಗಾಗಲೇ ಈ ವಿಷಯ ಕುರಿತು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಡಾ.ಬಿ.ವಿ.ಸುಧಾಮಣಿ ಸ್ವವಿವರವಾಗಿ ವಿವರಿಸಿದ್ದು, ನಾನೇ ವಿವರಿಸುವ ಪ್ರಮೇಯವಿಲ್ಲ ಎಂದರು.



ಮೈಸೂರು ಸಂಸ್ಥಾನದ ಶ್ರೀ ಹತ್ತನೇ ಚಾಮರಾಜ ಒಡೆಯರ್ ಅವರ ಪುತ್ಥಳಿ ಅನಾವರಣಗೊಳಿಸಲಾಯಿತು. ಈ ವೇಳೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಒಡೆಯರ್ ಸೇರಿದಂತೆ ಇತರರಿದ್ದರು.

ಸನ್ಮಾನ: ಈ ವೇಳೆ ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನ ಉಪಾಧ್ಯಕ್ಷೆ ಡಾ.ಭಾರತೀ ಶ್ರೀಧರ್ ರಾಜೆ ಅರಸ್, ಕಾರ್ಯದರ್ಶಿ ಮಹೇಶ್ ಎನ್. ಅರಸ್, ಜಂಟಿ ಕಾರ್ಯದರ್ಶಿ ಸರ್ದಾರ್ ಶ್ರೀಕಂಠ ರಾಜೇ ಅರ್ಸ್, ಸಂಸದ ಯದುವೀರ್ ಅವರ ಪತ್ನಿ ತ್ರಿಷಿಕಾ ಕುಮಾರಿ ಒಡೆಯರ್, ಇಂಜಿನಿಯರ್ ಅಮರನಾಥ್ ರಾಜೇ ಅರ್ಸ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನ ಪೋಷಕರಾದ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ ಶನಿವಾರ 25 ಅಕ್ಟೋಬರ್ 2025

ಉದ್ಯಮಿ ಕೊಲೆಗೆ ಯತ್ನ: ಆರೋಪಿಗೆ ಹುಡುಕಾಟ

ಮಡಿಕೇರಿ, ಅ.24–ಉದ್ಯಮಿಯ ಕಾರಿಗೆ ಸಿನಿಮೀಯ ರೀತಿಯಲ್ಲಿ ಲಾರಿಯಿಂದ ಡಿಕ್ಕಿಹೊಡೆಸಿ ಕೊಲೆಗೆ ಯತ್ನಿಸಿದ ಘಟನೆಗೆ ಸಂಬಂಧಿಸಿದಂತೆ ಕೆರಗನಹಳ್ಳಿಯ ಕೆ.ಆರ್.ರಮೇಶ್ ಮತ್ತು ಕೊಡ್ಲಿಪೇಟೆಯ ದಿವಾಕರ್ ಬಂಧನಕ್ಕೆ ಹುಡುಕಾಟ ನಡೆಸುತ್ತಿದ್ದಾರೆ.

ಉದ್ಯಮಿ ಹಾಗೂ ಕೊಡ್ಲಿಪೇಟೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಜೆ.ಕೆ.ತೇಜಕುಮಾರ್ ನೀಡಿದ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಲಾಗಿದ್ದು, ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ. ಘಟನೆ ನಡೆದ ಬಳಿಕ ತಲೆಮರೆಸಿಕೊಂಡಿರುವ ಲಾರಿ ಚಾಲಕ ಆರೋಪಿ ಕೆ.ಆರ್.ರಮೇಶ್ ಮತ್ತು ಸಹಕರಿಸಿದ ದಿವಾಕರ್ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ಮಾಹಿತಿ ನೀಡಿವೆ. ಕೃತ್ಯಕ್ಕೆ ಬಳಸಿದ ಲಾರಿ (ಕೆಎ.06, ಸಿ–7851), ಉದ್ಯಮಿ ತೇಜಕುಮಾರ್ ಅವರ ಕಾರು (ಕೆಎ.02, ಎಂಎನ್–5010) ಮತ್ತು ಲಾರಿ ಏರಿದ ಪರಿಣಾಮ ಜಖಂ ಆಗಿರುವ ನೀರುಗುಂದದ ಕರುಣಾಕರ್ ಎಂಬವರಿಗೆ ಸೇರಿದ ಬೈಕನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಕೊಡ್ಲಿಪೇಟೆಯ ಹ್ಯಾಂಡ್ ಪೋಸ್ಟ್‌ನಲ್ಲಿರುವ ಎಸ್.ಆರ್.ಪೆಟ್ರೋಲ್ ಬಂಕ್ ಮಾಲೀಕ, ಕೊಡ್ಲಿಪೇಟೆ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಜೆ.ಕೆ. ತೇಜಕುಮಾರ್ ಅ.21ರ ರಾತ್ರಿ ತಮ್ಮ ಕಾರಿನಲ್ಲಿ ದೊಡ್ಡಕುಂದ ಗ್ರಾಮದ ಕಿರಿಕೊಡ್ಲಿ ರಸ್ತೆಯಲ್ಲಿರುವ ಮನೆಗೆ ತೆರಳುತ್ತಿದ್ದ ಸಂದರ್ಭ ಕೆರಗನಹಳ್ಳಿ ಗ್ರಾಮದ ಕೆ.ಆರ್.ರಮೇಶ್ ಮಾಲೀಕತ್ವದ ಲಾರಿಯಿಂದ ಕಾರಿಗೆ ಡಿಕ್ಕಿ ಹೊಡೆದು ಕೊಲೆಗೆ ಪ್ರಯತ್ನಿಸಲಾಗಿತ್ತು ಇದೇ ರಸ್ತೆಯಲ್ಲಿ ಬರುತ್ತಿದ್ದ ಬೈಕ್ ಕೂಡ ಲಾರಿ ಅಡಿಗೆ ಸಿಲುಕಿ ಸಂಪೂರ್ಣ ಜಖಂ ಆಗಿದ್ದರೆ, ಬೈಕ್ ಸವಾರರು ಅಪಾಯದಿಂದ ಪಾರಾಗಿದ್ದರು.

ಸಿಎನ್‌ಸಿಯಿಂದ ಕೊಡವರ ಹಕ್ಕೊತ್ತಾಯಕ್ಕಾಗಿ

ನ.1, ನವದೆಹಲಿ ಚಲೋ

ಮಡಿಕೇರಿ, ಅ.24–ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸುವ ಉದ್ದೇಶದಿಂದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯಿಂದ ನ.1ರಂದು ನವದೆಹಲಿ ಚಲೋ ಹಮ್ಮಿಕೊಳ್ಳಲಾಗಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರಕಟಿಸಿದ್ದಾರೆ.



ಎನ್.ಯು.ನಾಚಪ್ಪ

ಸಂವಿಧಾನದ 6ನೇ ಶೆಡ್ಯೂಲ್ ಅಡಿಯಲ್ಲಿ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯ ಮೂಲಕ ಸ್ವ–ನಿರ್ಣಯ ಮತ್ತು ಸ್ವ–ಆಡಳಿತದ ಹಕ್ಕೊತ್ತಾಯಗಳ ಪರ ಹೋರಾಟ ನಡೆಸುತ್ತಿರುವ ಸಿಎನ್‌ಸಿ ಸಂಘಟನೆ ನ.1ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ಶಾಂತಿಯುತ ಸತ್ಯಾಗ್ರಹವನ್ನು ನಡೆಸಲಿದೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ

ನಮ್ಮ ವಿಶಿಷ್ಟ ಗುರುತು, ಜಾನಪದ ಸಂಸ್ಕೃತಿ ಮತ್ತು ಸಾಂಪ್ರದಾಯಿಕ ಕಾನೂನು ವ್ಯವಸ್ಥೆಗಳನ್ನು ಉದ್ದೇಶಪೂರ್ವಕವಾಗಿ ಅಳಿಸಿ ಹಾಕಲಾಗಿದೆ. ಬಹುಸಂಖ್ಯಾತ ಸಮುದಾಯಗಳ ಅನುಕೂಲಕ್ಕಾಗಿ ಮತ್ತು ಪ್ರಯೋಜನಕ್ಕಾಗಿ ಕೊಡವರನ್ನು ರಾಜ್ಯ ಬಲದಿಂದ ಏಕರೂಪಗೊಳಿಸಲಾಗಿದೆ. ವ್ಯವಸ್ಥಿತವಾಗಿ ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯಾಗಿದೆ. ಸರಕಾರಿ ವ್ಯವಸ್ಥೆ ಆಕ್ರಮಣಕಾರಿ ಶಕ್ತಿಯಂತೆ ವರ್ತಿಸುತ್ತಿದೆ. ಕೊಡವರನ್ನು ಅಧೀನ ಪ್ರಜೆಗಳಾಗಿ ಮತ್ತು ಕೊಡವಲ್ಯಾಂಡ್ ಅನ್ನು ಸಂಪನ್ಮೂಲ ಉತ್ಪಾದಿಸುವ ಆಂತರಿಕ ವಸಾಹತು–ಆಕ್ರಮಿತ ಪ್ರದೇಶವಾಗಿ ಪರಿಗಣಿಸುತ್ತಿದೆ. ಪ್ರತಿಯೊಂದು ವಿಚಾರದಲ್ಲೂ ಕೊಡವರನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿದ್ದಾರೆ.

ರಾಷ್ಟ್ರದ ಎದುರು ನಮ್ಮ ನೋವು ಮತ್ತು ಸಂಕಷ್ಟವನ್ನು ಎತ್ತಿ ತೋರಿಸಲು ಹಾಗೂ ಜಾಗತಿಕ ಧರ್ಮ ಪ್ರಜ್ಞೆಯನ್ನು ಜಾಗೃತಿಗೊಳಿಸಲು ರಾಷ್ಟ್ರ ರಾಜಧಾನಿಯಲ್ಲಿ ಶಾಂತಿಯುತವಾಗಿ ಸತ್ಯಾಗ್ರಹ ನಡೆಸಿ ವಿವಿಧ ಹಕ್ಕೊತ್ತಾಯಗಳನ್ನು ಮಂಡಿಸಲಿದ್ದೇವೆ ಎಂದು ನಾಚಪ್ಪ ತಿಳಿಸಿದ್ದಾರೆ.

ಅರೆಭಾಷೆ ಅಕಾಡೆಮಿಯಿಂದ ನಾಳೆ ಬಡ್ಡಡ್ಕದಲ್ಲಿ ಅರೆಭಾಷೆ ಗ್ರಾಮೋತ್ಸವ

ಮಡಿಕೇರಿ, ಅ.24–ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯು ಅ.26 ರಂದು ಶ್ರೀ ರಾಮಕೃಷ್ಣ ಅನುದಾನಿತ ಹಿರಿಯ ಪ್ರಾಥಮಿಕ ಶಾಲಾ ವಠಾರ ಬಡ್ಡಡ್ಕ, ಆಲೆಟ್ಟಿ ಮತ್ತು ಕಲ್ಲಪ್ಪಳ್ಳಿ ವ್ಯಾಪ್ತಿಯಲ್ಲಿ 'ಅರೆಭಾಷೆ ಗ್ರಾಮೋತ್ಸವ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಪೂರ್ವಾಹ್ನ ಗಂಟೆ 9.30ಕ್ಕೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿಯವರ ಅಧ್ಯಕ್ಷತೆಯಲ್ಲಿ ಸುಳ್ಯದ ಗೌಡರ ಯುವ ಸೇವಾ ಸಂಘದ ನಿರ್ದೇಶಕ ಪುರುಷೋತ್ತಮ ಕೋಲ್ಚಾರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಆಲೆಟ್ಟಿ ಗ್ರಾಮ ಪಂಚಾಯತ್ ಸದಸ್ಯರಾದ ಭಾಗೀರಥಿ ಪತ್ತುಕುಂಜ, ಶಶಿಕಲಾ ದೋಣಿಮೂಲೆ, ಶಾಂತಪ್ಪ ಬಡ್ಡಡ್ಕ, ಕಲ್ಲಪ್ಪಳ್ಳಿ ಗ್ರಾಪಂ ಸದಸ್ಯರಾದ ರಾಧಾಕೃಷ್ಣ ಆಲುಗುಂಜ ಉಪಸ್ಥಿತರಿರುತ್ತಾರೆ.

ಗ್ರಾಮೋತ್ಸವದ ಅಂಗವಾಗಿ ವಿವಿಧ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳು ನಡೆಯಲಿದ್ದು ಸಾಂಪ್ರದಾಯಿಕ ರೀತಿಯ ಬುಟ್ಟಿ ಹೆಣೆಯುವಿಕೆ, ಗೆರಸೆ ಹೆಣೆಯುವಿಕೆ, ತೆಂಗಿನ ಗರಿಯ ತಟ್ಟಿ ಹೆಣೆಯುವಿಕೆ, ಕಂಗಿನ ಹಾಳೆಯಲ್ಲಿ ಕುಳಿತು ಎಳೆಯುವುದು, ಕುಟ್ಟಿದೊಣ್ಣೆ ಆಟ, ಕುಂಟಾ ಬಿಲ್ಲೆ ಮೊದಲಾದ ಪ್ರಾತ್ಯಕ್ಷಿಕೆ ಸಾಂಪ್ರದಾಯಿಕ ವಸ್ತುಗಳ ಪ್ರದರ್ಶನವು ನಡೆಯಲಿದೆ. ಉತ್ಸವದ ಅಂಗವಾಗಿ ಅರೆಭಾಷೆ ಚಲನಚಿತ್ರಗಳಾದ ಸುದೀಪ್ ಏನೆಲ್ ನಿರ್ದೇಶನದ 'ಕೇಸ್ ಪುಸ್ಕ' ಹಾಗೂ ಸಂತೋಷ್ ಮಾಡ ನಿರ್ದೇಶನದ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತ ಚಲನಚಿತ್ರ ಮೂಗಜ್ಜನ ಕೋಳಿ ಚಿತ್ರಗಳ ಪ್ರದರ್ಶನ ನಡೆಯಲಿದೆ.

ಮಧ್ಯಾಹ್ನ 2.30 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ ಅಧ್ಯಕ್ಷತೆ ವಹಿಸುವರು. ಸುಳ್ಯದ ಗೌಡರ ಯುವಸೇವಾ ಸಂಘದ ಪೂರ್ವಾಧ್ಯಕ್ಷ ದಿನೇಶ್ ಮಡಪ್ಪಾಡಿ ಉದ್ಘಾಟಿಸುವರು. ನೆಹರೂ ಮೆಮೋರಿಯಲ್ ಕಾಲೇಜಿನ ಪ್ರಾಧ್ಯಾಪಕ ಸಂಜೀವ ಕುದ್ಪಾಜೆ ಉಪನ್ಯಾಸ ನೀಡುವರು. ಅತಿಥಿಗಳಾಗಿ ಆಲೆಟ್ಟಿ ಗ್ರಾಪಂ ಅಧ್ಯಕ್ಷೆ ವೀಣಾವಸಂತ್, ಆಲೆಟ್ಟಿ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಜಯಪ್ರಕಾಶ್ ಕುಂಚಡ್ಕ, ಪರಪ್ಪ ಬ್ಲಾಕ್ ಪಂಚಾಯತ್ ಅಧ್ಯಕ್ಷ ಅರುಣ್ ರಂಗತ್ತುಮಲೆ, ಜಿಪ ಮಾಜಿ ಸದಸ್ಯ ಜಿ. ದೇವಪ್ಪ ನಾಯ್ಕ್, ಸಾಹಿತಿ ಹಾಗೂ ಸಂಶೋಧಕ ಡಾ.ವಿದ್ಯಾಧರ ಬಡ್ಡಡ್ಕ, ಶ್ರೀ ರಾಮಕೃಷ್ಣ ವಿದ್ಯಾಸಂಘ ಬಡ್ಡಡ್ಕ ಅಧ್ಯಕ್ಷ ಡಾ। ಸಾಯಿಗೀತ ಜ್ಞಾನೇಶ್, ಸತ್ಯಕುಮಾರ್ ಭಾಗವಹಿಸಲಿದ್ದಾರೆ.

ರಸ್ತೆ ಬದಿ ಕಸ ಹಾಕುವವರ ಪತ್ತೆಗಾಗಿ ಸಿ.ಸಿ.ಕ್ಯಾಮರಾ ಅಳವಡಿಕೆ




ವಿ.ಪೇಟೆಯಲ್ಲಿ ಪುರಸಭೆ ಅಧ್ಯಕ್ಷೆ ದೇಚಮ್ಮ ಕಾಳಪ್ಪ ಸಮ್ಮುಖದಲ್ಲಿ ಸಿ.ಸಿ.ಕ್ಯಾಮರ ಅಳವಡಿಕೆ

ವಿರಾಜಪೇಟೆ, ಅ.24–ಪಟ್ಟಣದ ಹಲವೆಡೆ ಕೆಲ ಜನರು ರಸ್ತೆಬದಿ ಕುಡ ಕುಡಲ್ಲಿ ಕಸಹಾಕುವುದು ಕಂಡು ಬಂದ ಹಿನ್ನೆಲೆಯಲ್ಲಿ ಪುರಸಭೆ ವತಿಯಿಂದ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಮೊದಲು ಹೂವಿನ ಕುಂಡ ಇರಿಸಲಾಗಿದ್ದು ಈಗ ಕಸ ಹಾಕುವರನ್ನು ಗುರುತುಮಾಡಿ ದಂಡ ವಿಧಿಸುವುದಕ್ಕಾಗಿ ಪ್ರಮುಖ ಐದು ಸ್ಥಳಗಳಲ್ಲಿ ಸಿ.ಸಿ.ಕ್ಯಾಮರಾ ಅಳವಡಿಸಲಾಗಿದೆ ಎಂದು ಪುರಸಭೆ ಅಧ್ಯಕ್ಷರಾದ ದೇಚಮ್ಮ ಕಾಳಪ್ಪ ಹೇಳಿದರು.

ಮುಖ್ಯ ರಸ್ತೆಗಳಲ್ಲಿ ಸಿ.ಸಿ ಕ್ಯಾಮರಾ ಅಳವಡಿಸುವ ಸಂದರ್ಭ ಮಾತನಾಡಿದ ಅವರು ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ಕಸ ಸಂಗ್ರಹಿಸಲು ಎರಡು ವಾಹನಗಳಿದ್ದು ಎಲ್ಲಾ ವಾರ್ಡ್‌ಗಳಲ್ಲಿ ಸಿಬ್ಬಂದಿ ವಾಹನಗಳಿಂದ ಕಸ ಸಂಗ್ರಹ ಮಾಡುತ್ತಿದ್ದರೂ ಖಾಸಗಿ ವಾಹನದಲ್ಲಿ ಕೆಲವರು ಕ್ಯಾರಿ ಬ್ಯಾಗ್ ಹಾಗೂ ಗೋಣಿಚೀಲ ಗಳಿಂದ ರಸ್ತೆ ಬದಿ ಕಸ ಸುರಿದು ಹೋಗುತ್ತಿರುವುದರಿಂದ ಮೊದಲು ಕಸದ ತೊಟ್ಟಿಗಳನ್ನು ಇಡುತ್ತಿದ್ದ ಜಾಗವನ್ನು ಸ್ವಚ್ಛಗೊಳಿಸಿ ಹೂ ಕುಂಡ ಇರಿಸಲಾಗಿತ್ತು. ಆದರೂ ಕಸದ ಹಾವಳಿ ಹೆಚ್ಚುತ್ತಿರುವ ಕಾರಣ ನಗರದ ಪಟ್ಟಣ ಸಹಕಾರ ಬ್ಯಾಕ್ ಬಳಿ, ದೊಡ್ಡಟ್ಟಿ ಚೌಕಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಳಿ, ಮಟನ್ ಮಾರ್ಕೆಟ್, ವಿಜಯ ನಗರ ಮುಖ್ಯರಸ್ತೆ, ಗಾಂಧಿನಗರದಲ್ಲಿ ಸಿ.ಸಿ ಕ್ಯಾಮರಾ ಅಳವಡಿಸಲಾಗಿದ್ದು ಇದರಿಂದ ಕಸ ಬಿಸಾಕುವ ವ್ಯಕ್ತಿಗಳನ್ನು ಪತ್ತೆಹಚ್ಚಿ ದಂಡ ವಿಧಿಸಲಾಗುವುದು ಎಂದರು.

ಬಿ.ಕೆ.ಶಿವಪ್ಪ ಪೂಜಾರಿ ನಿಧನ



ನಾಪೋಕ್ಲು, ಅ.24–ಕೆದಮುಳ್ಳೂರು ಗ್ರಾಮದ ನಿವಾಸಿ ಬಿ.ಕೆ ಶಿವಪ್ಪ ಪೂಜಾರಿ (93) ಗುರುವಾರ ನಿಧನರಾದರು.

ಮೃತರ ಅಂತ್ಯಕ್ರಿಯೆ ಶುಕ್ರವಾರ ವಿರಾಜಪೇಟೆಯ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಮೃತರು ಪುತ್ರ, ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಬಂಧು ಬಾಂಧವರನ್ನು ಅಗಲಿದ್ದಾರೆ.

ಕರ್ನಾಟಕ ಸಂಘದಿಂದ ನ.3ಕ್ಕೆ ತಾಲೂಕು ಮಟ್ಟದ ಸ್ಪರ್ಧೆ

ವಿರಾಜಪೇಟೆ: ಕನ್ನಡ ರಾಜ್ಯೋತ್ಸವದ ಅಂಗವಾಗಿ ಕರ್ನಾಟಕ ಸಂಘದ ವತಿಯಿಂದ ನ,3 ರಂದು ವಿವಿಧ ತಾಲೂಕು ಮಟ್ಟದ ಸ್ಪರ್ಧಾ ಕಾರ್ಯಕ್ರಮ ಮತ್ತು ಉದ್ಘಾಟನಾ ಸಮಾರಂಭವನ್ನು ಆಯೋಜಿಸಿರುವುದಾಗಿ ಸಂಘದ ಅಧ್ಯಕ್ಷ ಮಾಳೇಟಿರ ಬೆಲ್ಲುಬೋಪಯ್ಯ ತಿಳಿಸಿದ್ದಾರೆ. ನ.3ರ ಬೆಳಿಗ್ಗೆ 10 ಗಂಟೆಗೆ ಮಹಿಳಾ ಸಮಾಜ ಸಭಾಂಗಣದಲ್ಲಿ ಪುರಸಭೆ ಅಧ್ಯಕ್ಷೆ ಮನಿಯಪಂಡ ದೇಚಮ್ಮ ಕಾಳಪ್ಪ ಉದ್ಘಾಟಿಸಲಿದ್ದಾರೆ. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಮಾಳೇಟಿರ ಬೋಪಯ್ಯ ವಹಿಸಲಿದ್ದಾರೆ.

ಶ್ರದ್ಧಾ ಭಕ್ತಿಯಿಂದ ನಡೆದ ವಿನಾಯಕ ದೇಗುಲದ ವಾರ್ಷಿಕೋತ್ಸವ

ಮಡಿಕೇರಿ, ಅ.24–ನಗರದ ಶ್ರೀ ವಿಜಯ ವಿನಾಯಕ ದೇಗುಲದ 27ನೇ ವಾರ್ಷಿಕೋತ್ಸವ ಶುಕ್ರವಾರದಂದು ಭಕ್ತಾದಿಗಳ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ಪ್ರಧಾನ ಅರ್ಚಕರಾದ ಶ್ರೀಕೃಷ್ಣ ಉಪಾಧ್ಯಾಯ, ಕಾರಂತ್ ಹಾಗೂ ಅರ್ಚಕ ವೃಂದದಿಂದ ವಾರ್ಷಿಕೋತ್ಸವದ ಪ್ರಯುಕ್ತ ಬೆಳಗ್ಗಿನಿಂದಲೇ ವಿವಿಧ ಪೂಜಾ ಕೈಂಕರ್ಯಗಳು ಶ್ರದ್ಧಾಭಕ್ತಿಗಳಿಂದ ನಡೆಯಿತು. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ನೆರವೇರಿತು. ವಾರ್ಷಿಕೋತ್ಸವ ಪ್ರಯುಕ್ತ ಭಕ್ತಾದಿಗಳಿಗೆ ದೇವಾಲಯದ ವತಿಯಿಂದ ನಡೆದ ಅನ್ನಸಂತರ್ಪಣಾ ಕಾರ್ಯ ನೆರವೇರಿತು. ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಪೂಜಾ ಕಾರ್ಯದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.



ಶ್ರೀ ವಿಜಯ ವಿನಾಯಕ ದೇಗುಲದ 27ನೇ ವಾರ್ಷಿಕೋತ್ಸವ ಶ್ರದ್ಧಾಭಕ್ತಿಗಳಿಂದ ನಡೆಯಿತು.

ಆಸ್ತಿ ರಕ್ಷಣೆಯಲ್ಲಿ ಗೃಹ ರಕ್ಷಕರ ಪಾತ್ರ ಪ್ರಮುಖ



ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಬಿ.ಪಿ.ದಿನೇಶ್ ಕುಮಾರ್ ಗೃಹರಕ್ಷಕ ದಳದ ನೂತನ ಕಚೇರಿಯನ್ನು ಉದ್ಘಾಟಿಸಿದರು.

ಕುಶಾಲನಗರ, ಅ.24–ಪೊಲೀಸ್ ಸಿಬ್ಬಂದಿಗಳೊಂದಿಗೆ ಗೃಹರಕ್ಷಕರು ಸಾರ್ವಜನಿಕರ ಆಸ್ತಿ, ಪಾಸ್ತಿಗಳ ರಕ್ಷಣೆ, ಸಂಚಾರ ನಿಯಂತ್ರಣದ ಸಂದರ್ಭಗಳಲ್ಲಿ ಜನರಿಗೆ ಸೂಕ್ತ ರಕ್ಷಣೆ ಒದಗಿಸುತ್ತಿದ್ದಾರೆ ಎಂದು ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಬಿ.ಪಿ.ದಿನೇಶ್ ಕುಮಾರ್ ಹೇಳಿದರು.

ಇಲ್ಲಿನ ಪೊಲೀಸ್ ಠಾಣೆಯ ಬಳಿ ಜಿಲ್ಲೆ ಗೃಹರಕ್ಷಕ ದಳದ ನೂತನ ಕಚೇರಿಯನ್ನು ಶುಕ್ರವಾರ ಉದ್ಘಾಟಿಸಿ, ಗೃಹರಕ್ಷಕ ದಳದ ಸಿಬ್ಬಂದಿಗಳು ಬಹಳ ಶಿಸ್ತು, ಸಂಯಮದಿಂದ ಕರ್ತವ್ಯ ನಿರ್ವಹಿಸುತ್ತಿರುವುದು ಸಂತೋಷದ ವಿಷಯ. ಬಹಳ ವರ್ಷಗಳಿಂದ ಗೃಹರಕ್ಷಕ ದಳದ ಸಿಬ್ಬಂದಿಗಳಿಗೆ ಕಚೇರಿ ಅವಶ್ಯಕತೆ ಇತ್ತು. ಇದೀಗ ಪೊಲೀಸ್ ಠಾಣೆಯ ಪಕ್ಕದಲ್ಲಿಯೇ ಇರುವ ಇಲಾಖೆಯ ಕಟ್ಟಡದಲ್ಲಿ ಕಚೇರಿ ಆರಂಭಿಸಲು ಅವಕಾಶ ಸಿಕ್ಕಿರುವುದು ತುಂಬ ಅನುಕೂಲವಾಗಿದೆ ಎಂದರು.

ಸೋಮವಾರಪೇಟೆ ವಿಭಾಗದ ಪೊಲೀಸ್ ಉಪ ಅಧೀಕ್ಷಕ ಚಂದ್ರಶೇಖರ್, ಪೊಲೀಸ್ ವೃತ್ತ ನಿರೀಕ್ಷಕ ಬಿ.ಎಸ್.ದಿನೇಶ್ ಕುಮಾರ್, ಟೌನ್ ಪೊಲೀಸ್ ಠಾಣೆಯ ಉಪ ನಿರೀಕ್ಷಕ ಗಣೇಶ್, ಗ್ರಾಮಾಂತರ ಪೊಲೀಸ್ ಠಾಣೆ ಉಪ ನಿರೀಕ್ಷಕ ಎನ್.ರಾಮಚಂದ್ರ, ಗೃಹರಕ್ಷಕ ದಳದ ಡಿ.ಅಕ್ಷಯ್ ಕುಮಾರ್ ಹಾಗೂ ಪೊಲೀಸ್ ಸಿಬ್ಬಂದಿ ಮತ್ತು ಗೃಹರಕ್ಷಕ ದಳದ ಸಿಬ್ಬಂದಿ ಭಾಗವಹಿಸಿದ್ದರು.

ಜ್ಯೋತಿಗೌಡನಪುರದಲ್ಲಿ ಬುದ್ಧನ ವಿಗ್ರಹ ಭಗ್ನ ; ಅಂಬೇಡ್ಕರ್ ಫ್ಲೆಕ್ಸ್ ವಿರೂಪ

ಗ್ರಾಮದಲ್ಲಿ ಬಿಗುವಿನ ವಾತಾವರಣ; ಪೊಲೀಸರ ಬಿಗಿ ಬಂದೋಬಸ್ತ್

ಚಾಮರಾಜನಗರ, ಅ.24–ಅಂಬೇಡ್ಕರ್ ಅವರ ಭಾವಚಿತ್ರವಿರುವ ಫ್ಲೆಕ್ಸ್ ಹರಿದು ಹಾಕಿ ಬುದ್ಧನ ವಿಗ್ರಹವನ್ನು ಒಡೆದು ಭಗ್ನ ಗೊಳಿಸಿರುವ ಘಟನೆ ತಾಲೂಕಿನ ಜ್ಯೋತಿ ಗೌಡನಪುರ ಗ್ರಾಮದಲ್ಲಿ ಗುರುವಾರ ಮಧ್ಯರಾತ್ರಿ ನಡೆದಿದೆ.

ಜ್ಯೋತಿಗೌಡನಪುರ ಗ್ರಾಮದ ಪರಿಶಿಷ್ಟ ಜನಾಂಗದ ಹಳೇ ಬಡಾವಣೆಯಲ್ಲಿ ಹಾಕಿರುವ ಅಂಬೇಡ್ಕರ್ ಬೋರ್ಡ್ ಹಾಗೂ ಹೊಸ ಬಡಾವಣೆ ಬಳಿ ಹಾಕಿರುವ ಅಂಬೇಡ್ಕರ್ ಭಾವಚಿತ್ರ ಇರುವ ಬೃಹತ್ ಫ್ಲೆಕ್ಸ್ ಅನ್ನು ಕಿಡಿಗೇಡಿಗಳು ಹರಿದು ಹಾಕಿದ್ದಾರೆ. ಅಲ್ಲದೆ ಹೊಸ ಬಡಾವಣೆಯಲ್ಲಿರುವ ಬುದ್ಧನ ಗುಡಿಯೊಳಗಿದ್ದ ಬುದ್ಧನ ವಿಗ್ರಹವನ್ನು ಹೊರ ತಂದು ಒಡೆದು ಹಾಕಿ ಬಿಸಾಕಿ ಹೋಗಿದ್ದು, ಶುಕ್ರವಾರ ಬೆಳಿಗ್ಗೆ ಘಟನೆ ಬೆಳಕಿಗೆ ಬಂದಿದೆ.

ಬುದ್ಧನ ವಿಗ್ರಹ ವಿರೂಪಗೊಳಿಸಿರುವ ಹಾಗೂ ಅಂಬೇಡ್ಕರ್ ಚಿತ್ರವಿರುವ ಫ್ಲೆಕ್ಸ್ ಹರಿದುಹಾಕಿರುವ ಸುದ್ದಿ ಬೆಳಗಾಗುತ್ತಲೇ ಕಾಳ್ಗಿಚ್ಚಿನಂತೆ ಹರಡುತ್ತಿದ್ದಂತೆ ಮಹಿಳೆಯರು, ಮಕ್ಕಳು, ಯುವಕರೆನ್ನದೆ ನೂರಾರು ಸಂಖ್ಯೆಯಲ್ಲಿ ಗ್ರಾಮಸ್ಥರು ಗ್ರಾಮ ಪಂಚಾಯಿತಿ ಕಚೇರಿ ಮುಂಭಾಗ ಸಮಾವೇಶಗೊಂಡು ಪ್ರತಿಭಟನೆ ನಡೆಸಿ ಇದಕ್ಕೆ ಕಾರಣರಾದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ, ಅವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಎಂದು ಆಗ್ರಹಿಸಿದರು.



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಜ್ಯೋತಿಗೌಡನಪುರಕ್ಕೆ ಭೇಟಿ ನೀಡಿ ಗ್ರಾಮಸ್ಥರ ಮನವಿಯನ್ನು ಆಲಿಸಿದರು

ಗ್ರಾಮಕ್ಕೆ ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ತಾಪಂ. ಮಾಜಿ ಅಧ್ಯಕ್ಷ ಆರ್.ಮಹದೇವ, ನಲ್ಲೂರು ಮಹದೇವಸ್ವಾಮಿ, ಆರ್.ಪಿ.ನಂಜುಂಡಸ್ವಾಮಿ, ಬಿಎಸ್ಪಿ ಜಿಲ್ಲಾ ಉಸ್ತುವಾರಿ ರಾಮಸಮುದ್ರ ಪುಟ್ಟಸ್ವಾಮಿ, ರಾಜ್ಯ ಸಮಿತಿ ಸದಸ್ಯ ಬ್ಯಾಡಮೂಡ್ಲು ಬಸವಣ್ಣ ಹಾಗೂ ಇತರರು ತೆರಳಿ ಗ್ರಾಮಸ್ಥರ ಜೊತೆ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಎಸ್‌ಪಿ ಭೇಟಿ : ವಿಷಯ ತಿಳಿದೊಡನೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಸ್ನೇಹರಾಜ್, ನಗರದ ಪೂರ್ವ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ನವೀನ್ ಹಾಗೂ ಸಿಬ್ಬಂದಿ ಜ್ಯೋತಿಗೌಡನಪುರ ಗ್ರಾಮಕ್ಕೆ ಭೇಟಿ ನೀಡಿ ಅಂಬೇಡ್ಕರ್ ಭಾವಚಿತ್ರವಿರುವ ಫ್ಲೆಕ್ಸ್ ವಿರೂಪ ಗೊಳಿಸಿರುವುದನ್ನು ಪರಿಶೀಲಿಸಿ, ಘಟನೆ ಸಂಬಂಧ ಈಗಾಗಲೇ ದೂರು ದಾಖಲಿಸಿಕೊಳ್ಳಲಾಗಿದ್ದು, ಕೃತ್ಯವೆಸಗಿರುವವರ ಪತ್ತೆಗಾಗಿ ಈಗಾಗಲೇ ತನಿಖೆ ಆರಂಭಿಸಲಾಗಿದೆ. ಎಲ್ಲಾ ಆಯಾಮಗಳಿಂದ ತನಿಖೆ ನಡೆಸಿ, ಶೀಘ್ರವೇ ಕಿಡಿ ಗೇಡಿಗಳನ್ನು ಬಂಧಿಸಲಾಗುವುದು ಎಂದು ಎಸ್‌ಪಿ ಡಾ.ಬಿ.ಟಿ. ಕವಿತಾ ಪ್ರತಿಭಟನಾಕಾರರಿಗೆ ಭರವಸೆ ನೀಡಿದರು.

ಅಲ್ಲದೇ ಶ್ವಾನದಳ, ಬೆರಳಚ್ಚು ತಜ್ಞರು ತೆರಳಿ ಪರಿಶೀಲನೆ ನಡೆಸಿದ್ದಾರೆ. ಶ್ವಾನದಳವು ಬುದ್ಧನ ಗುಡಿಯಿಂದ ನೇರವಾಗಿ ಹಳೇ ಬಡಾವಣೆಯಲ್ಲಿರುವ ಚಾವಡಿ ಬಳಿ ತೆರಳಿ ನಿಂತಿದ್ದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಚಾವಡಿಗೆ ಬೆರಳಚ್ಚು ತಜ್ಞರು ತೆರಳಿ ಸ್ಯಾಂಪಲ್‌ಗಳನ್ನು, ಸಂಗ್ರಹಿಸಿದರು.



ವಿರೂಪಗೊಂಡಿರುವ ಬುದ್ಧನ ಪುತ್ಥಳಿ

ಜ್ಯೋತಿಗೌಡನಪುರದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಘಟನೆ ಗುರುವಾರ ಮಧ್ಯರಾತ್ರಿ ನಡೆದಿದೆ ಎನ್ನಲಾಗಿದ್ದು ಈಗಾಗಲೇ ಪೊಲೀಸರು ಅಕ್ಕಪಕ್ಕದಲ್ಲಿರುವ ಸಿಸಿ ಕ್ಯಾಮರಾಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ. ಅಲ್ಲದೇ ಸಿಡಿಆರ್ ಹಾಗೂ ಟವರ್ ಡಂಪ್ ತೆಗೆದು ಕಿಡಿಗೇಡಿಗಳ ಬಂಧನಕ್ಕೆ ಪೊಲೀಸರು ಮುಂದಾಗಿದ್ದಾರೆ.

ಆರೋಪಿಗಳ ವಿರುದ್ಧ ದೇಶದ್ರೋಹ ಪ್ರಕರಣ ದಾಖಲಿಸಲು ಒತ್ತಾಯ


ಚಾಮರಾಜನಗರ: ಡಾ. ಬಿ.ಆರ್.ಅಂಬೇಡ್ಕರ್ ಭಾವಚಿತ್ರ ಹಾಗೂ ಭಗವಾನ್ ಬುದ್ಧರ ಪುತ್ಥಳಿಯನ್ನು ಭಗ್ನಗೊಳಿಸಿ ವಿಕೃತಿ ಮೆರೆದ ಘಟನೆ ನಡೆದಿರುವ ತಾಲೂಕಿನ ಜ್ಯೋತಿಗೌಡನಪುರಕ್ಕೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಹರ್ಷವರ್ಧನ್ ಹಾಗೂ ಬಿಜೆಪಿ ಮುಖಂಡರು ಭೇಟಿ ನೀಡಿದ್ದರು.

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿ, ಜ್ಯೋತಿಗೌಡನಪುರದಲ್ಲಿ ಯಾರೋ ಕಿಡಿಗೇಡಿಗಳು ಅಂಬೇಡ್ಕರ್ ಭಾವಚಿತ್ರ ಹರಿದು, ಬುದ್ಧನ ಪುತ್ಥಳಿ ವಿಘ್ನಗೊಳಿಸಿರುವುದು ಅತ್ಯಂತ ಖಂಡನೀಯ.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ವರುಣಾ ವಿಧಾನಸಭಾ ಕ್ಷೇತ್ರದ ವಾಜಮಂಗಲದಲ್ಲಿ ಹಾಗೂ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಸಿಂಧುವಳ್ಳಿಯಲ್ಲಿ ಇಂತಹ ಘಟನೆ ನಡೆದಿದ್ದು, ಇದೀಗ ಜ್ಯೋತಿಗೌಡನಪುರದಲ್ಲಿ ಆಗಿದೆ ಎಂದು ಆರೋಪಿಸಿದರು.

ಮಾಜಿ ಶಾಸಕ ಹರ್ಷವರ್ಧನ್ ಮಾತನಾಡಿ, ಜ್ಯೋತಿಗೌಡನಪುರದಲ್ಲಿ ಪ್ರತಿಷ್ಠಾಪಿಸಿದ್ದ ಬುದ್ಧನ ವಿಗ್ರಹಗಳನ್ನು ಭಗ್ನ ಗೊಳಿಸಿ ವಿವಿಧೆಡೆ ಅಳವಡಿಸಿದ್ದ ಅಂಬೇಡ್ಕರ್ ಫ್ಲೆಕ್ಸ್ ಹಾಗೂ ಫೋಟೋಗಳನ್ನು ಹರಿದು ಹಾಕಲಾಗಿರುವ ದುಷ್ಕರ್ಮಿಗಳ ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿರಾದ, ವೇಣುಗೋಪಾಲ, ಚಿಗುರು ಬಂಗಾರು, ಕೆ.ನಾಗರಾಜು, ಶಶಿ ಇತರರು ಹಾಜರಿದ್ದರು.



ಜ್ಯೋತಿಗೌಡನಪುರಕ್ಕೆ ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕ ಹರ್ಷವರ್ಧನ್ ಹಾಗೂ ಬಿಜೆಪಿ ಮುಖಂಡರು ಭೇಟಿ ನೀಡಿದ್ದರು.

ನಾಮಫಲಕ ತೆರವು; ಅಧಿಕಾರಿಗಳ ಹೇಳಿಕೆ ವಿರೋಧಿಸಿ ಪಾದಯಾತ್ರೆ

ಚಾಮರಾಜನಗರ, ಅ.24–ಬದನಗುಪ್ಪೆ ಗ್ರಾಮದಲ್ಲಿ ಅಳವಡಿಸಿದ್ದ ಅಂಬೇಡ್ಕರ್ ನಾಮಫಲಕ ತೆರವುಗೊಳಿಸುವ ಬಗ್ಗೆ ಅಧಿಕಾರಿಗಳು ನೀಡಿರುವ ಹೇಳಿಕೆ ವಿರೋಧಿಸಿ ಬದನಗುಪ್ಪೆ ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ಬೃಹತ್ ಪಾದಯಾತ್ರೆ ನಡೆಸಿದರು.

ತಾಲೂಕಿನ ಬದನಗುಪ್ಪೆ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ಭವನದ ಮುಂಭಾಗದಿಂದ ಸುಮಾರು 15ಕಿ.ಮೀ ದೂರದ ಚಾ. ನಗರಕ್ಕೆ ಪಾದಯಾತ್ರೆ ಮೂಲಕ ಮೆರವಣಿಗೆ ಹೊರಟ ದಲಿತ ಸಂಘಟನೆಗಳ ಮುಖಂಡರು ಮೈಸೂರು, ಚಾಮರಾಜನಗರ ಮುಖ್ಯ ರಸ್ತೆಯಲ್ಲಿ ಸಾಗಿ ಸಂತೇಮರಹಳ್ಳಿ ವೃತ್ತ, ಡೀವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು.



ಅಂಬೇಡ್ಕರ್ ನಾಮಫಲಕ ತೆರವುಗೊಳಿಸುವ ಬಗ್ಗೆ ಅಧಿಕಾರಿಗಳ ಹೇಳಿಕೆ ವಿರೋಧಿಸಿ ಬದನಗುಪ್ಪೆ ಗ್ರಾಮಸ್ಥರು ಪಾದಯಾತ್ರೆ ನಡೆಸಿದರು.

ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಧರಣಿ ನಡೆಸಿ, ಜಿಲ್ಲಾಡಳಿತ, ಕೊಳ್ಳೇಗಾಲ ಉಪವಿಭಾಗಾಧಿಕಾರಿ, ಚಾಮರಾಜನಗರ ಡಿವೈಎಸ್‌ಪಿ ಹಾಗೂ ಬದನಗುಪ್ಪೆ ಗ್ರಾಮ ಪಂಚಾಯಿತಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಅವರಿಗೆ ಪ್ರತಿಭಟನಾನಿರತ ಮುಖಂಡರು ಮನವಿ ಸಲ್ಲಿಸಿದರು.

ಬದನಗುಪ್ಪೆ ಗ್ರಾಮದಲ್ಲಿ ಅಳವಡಿಸಿರುವ ಅಂಬೇಡ್ಕರ್ ನಾಮಫಲಕ ವಿಚಾರವಾಗಿ ಹಲವಾರು ವರ್ಷಗಳಿಂದ ಎರಡು ಕೋಮಿನ ನಡುವೆ ಗಲಾಟೆಗಳು ನಡೆಯುತ್ತಿವೆ. ಅದರಲ್ಲೂ ಇತ್ತೀಚೆಗೆ ಕೊಳ್ಳೇಗಾಲ ಉಪವಿಭಾಗಾಧಿಕಾರಿ ಅಧ್ಯಕ್ಷತೆಯಲ್ಲಿ ಗ್ರಾಮದಲ್ಲಿ ನಡೆದ ಶಾಂತಿ ಸಭೆಯಲ್ಲೂ ಉಪವಿಭಾಗಾಧಿಕಾರಿ ಹಾಗೂ ಡಿವೈಎಸ್‌ಪಿ ಅವರು ಬೋರ್ಡ್ ತೆರವುಗೊಳಿಸಲು ಸೂಚನೆ ನೀಡುವುದಾಗಿ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ ಎಂದರು.

ತಾಲೂಕಿನ ಬದನಗುಪ್ಪೆ ಗ್ರಾಮಸ್ಥರು ಹಮ್ಮಿಕೊಂಡಿದ್ದ ಪಾದಯಾತ್ರೆಗೆ ಸುತ್ತಮುತ್ತಲಿನ ವಿವಿಧ ಗ್ರಾಮಗಳ ಜನರು ಸಾಥ್ ನೀಡಿದರು. ಬಸ್, ಲಾರಿ ಹಾಗೂ ಇನ್ನಿತರೆ ವಾಹನಗಳಿಂದ ನೂರಾರು ಸಂಖ್ಯೆಯಲ್ಲಿ ನೀಲಿ ಶಾಲು, ನೀಲಿ ಧ್ವಜಗಳನ್ನು ಹಿಡಿದು ದ್ವಿಚಕ್ರ ವಾಹನಗಳಲ್ಲಿ ಸಾಗುತ್ತಿದ್ದ ಯುವಕರು ಘೋಷಣೆಗಳನ್ನು ಕೂಗಿದರು.

ಪಾದಯಾತ್ರೆಯಲ್ಲಿ ಅಂಬೇಡ್ಕರ್ ಸೇವಾ ಸಮಿತಿ ಅಧ್ಯಕ್ಷ ಸಂದೇಶ್, ಬದನಗುಪ್ಪೆ ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮದ ಯಜಮಾನರು, ಮುಖಂಡರು, ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಯುವಕರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

ಅ.27, ಪರಿಶೀಲನಾ ಸಭೆ

ಚಾಮರಾಜನಗರ: ಜಿಲ್ಲಾಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯ ಸಭೆಯನ್ನು ಸಂಸದ ಸುನೀಲ್ ಬೋಸ್ ಅಧ್ಯಕ್ಷತೆಯಲ್ಲಿ ಅ.27ರ ಮಧ್ಯಾಹ್ನ 12ಕ್ಕೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಿಗದಿಪಡಿಸಲಾಗಿದೆ.

ರಾಷ್ಟ್ರೀಯ ಹಬ್ಬಗಳಿಗೆ ಗೈರು ಹಾಜರಾಗುವ ಅಧಿಕಾರಿ ಸಿಬ್ಬಂದಿ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ : ಎಚ್ಚರಿಕೆ

ಯಳಂದೂರು: ರಾಷ್ಟ್ರೀಯ ಹಬ್ಬಗಳಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಡ್ಡಾಯವಾಗಿ ಭಾಗವಹಿಸಬೇಕು. ಗೈರು ಹಾಜರಾಗುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಬೇಕಾಗುತ್ತದೆ ಎಂದು ತಹಸೀಲ್ದಾರ್ ನಯನ ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಇತ್ತೀಚೆಗೆ ನಡೆದ ಕೆಲವು ರಾಷ್ಟ್ರೀಯ ಹಬ್ಬಗಳಲ್ಲಿ ಹಲವಾರು ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಭಾಗವಹಿಸಿಲ್ಲ ಎಂದು ಸಂಘ–ಸಂಸ್ಥೆಗಳ ಪ್ರತಿನಿಧಿಗಳು ದೂರಿದ್ದಾರೆ, ಇದನ್ನು ನಾನು ಸಹಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು

ತಾಲೂಕು ಕಸಾಪ ಅಧ್ಯಕ್ಷ ಯರಿಯೂರು ನಾಗೇಂದ್ರ ಮಾತನಾಡಿ, ತಾಲೂಕಿನಲ್ಲಿ ಹಿಂದಿನಿಂದಲೂ ಕನ್ನಡ ರಾಜ್ಯೋತ್ಸವವನ್ನು ಅದ್ಧೂರಿಯಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಆದರೆ ಕೋವಿಡ್ ನಂತರದ ದಿನಗಳಲ್ಲಿ ಮೆರವಣಿಗೆಯನ್ನು ನಿಲ್ಲಿಸಲಾಗಿತ್ತು. ಈ ಬಾರಿ ನಾಡಗೀತೆಗೆ 100 ವರ್ಷಗಳು ತುಂಬಿರುವ ವಿಶೇಷವಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು, ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು, ಸಂಘ–ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರೆಲ್ಲಾ ಸೇರಿ ನಾಡಗೀತೆಯನ್ನು ಹಾಡುವ ಮೂಲಕ ನಾಡಗೀತೆಯ ಮಹತ್ವವನ್ನು ಸಾರಬೇಕಿದೆ. ಎಂದು ಹೇಳಿದರು. ರಕ್ಷಣಾ ವೇದಿಕೆ ಜಿಲ್ಲಾ ಉಪಾಧ್ಯಕ್ಷ ವೈ.ಕೆ.ಮೋಳೆ ನಾಗರಾಜು ಮಾತನಾಡಿದರು.

ಸಭೆಯಲ್ಲಿ ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜೆ.ಶ್ರೀನಿವಾಸ್, ಸಹಾಯಕ ಕೃಷಿ ನಿರ್ದೇಶಕ ಅಮೃತೇಶ್ವರ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಜಿ.ಎಸ್.ರಾಜು, ಪಪಂ ಮುಖ್ಯಾಧಿಕಾರಿ ಮಹೇಶ್ ಕುಮಾರ್, ಚೆಸ್ಕಾಂ ಎಇಇ ಲಿಂಗರಾಜು, ತಾಲೂಕು ಆರೋಗ್ಯಾಧಿಕಾರಿ ಡಾ॥ ತನುಜಾ, ಎಎಸ್ಐ ಅನ್ಸರ್ ಬೇಗ್, ತಾ.ಪಂ. ಅಧೀಕ್ಷಕ ಸಚಿನ್, ಶಿಕ್ಷಣ ಇಲಾಖೆಯ ಶಾಂತರಾಜು, ರಾಜಸ್ವ ನಿರೀಕ್ಷಕ ಯದುಗಿರಿ, ನಾರಾಯಣಸ್ವಾಮಿ, ಬಿಸಿಎಂ ಇಲಾಖೆಯ ಕುಮಾರ್, ಪ್ರಾಂಶುಪಾಲರಾದ ವಿಜಯ್, ಚಂದ್ರಶೇಖರ್, ಗ್ರಾಮ ಸಹಾಯಕ ಚಂಗಚಹಳ್ಳಿ ಮಹದೇವಸ್ವಾಮಿ ಇತರರು ಹಾಜರಿದ್ದರು.

ಮೈಸೂರು ಮಿತ್ರ
ಶನಿವಾರ 25 ಅಕ್ಟೋಬರ್ 2025

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

MUDA Site for Sale
ಲಲಿತಾದ್ರಿಪುರ ಪಕ್ಕದ BVL PREMIO (Gated Community) ಬಡಾವಣೆಯಲ್ಲಿ 40x60 ಸೈಟ್.
Mob: 9886048471

TV ಕೆಟ್ಟಿದೆಯೇ ?
LED, LCD TV ಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. ನಮ್ಮಲ್ಲಿ Seconds LED TV ಗಳು ದೊರೆಯುತ್ತವೆ.
Teju Electronics, ಅಗ್ರಹಾರ
Mob: 9342114069

ನಿರ್ಮಲಧಾರ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

S.K. CONSTRUCTION
ನಿಮ್ಮ ಕನಸಿನ ಮನೆ ಕಟ್ಟಬೇಕೆ ಚಿಂತೆ ಬೇಡ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕೈಗೆಟುಕುವ ಬೆಲೆಯಲ್ಲಿ – Plan-3.D. Elevation ಮತ್ತು Loan ಸಹಿತ ಮಾಡಿ ಮನೆ ಕಟ್ಟಿಕೊಡುತ್ತೇವೆ
Ph: 9620528490

MUDA Site for SALE
ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಪಕ್ಕ ನ್ಯಾಯಾಂಗ ಬಡಾವಣೆಯಲ್ಲಿ 37x40 North Face ಸೈಟ್
Mob: 9886048471

House for Lease
30x50, Duplex 3 BHK, near University Layout. Rs. 26 Lakhs.
Mob: 98862 81713

ಶ್ರೀ ಗೌರಿಶಂಕರ ಟ್ರಾವೆಲ್ಸ್
12-12-2025 (7 ದಿನ): ದೆಹಲಿ, ಆಗ್ರಾ, ಮಥುರಾ, ಅಯೋಧ್ಯ, ಕಾಶಿ, ಪ್ರಯಾಗ್‌ರಾಜ್, ಗಯಾ. 17-1-2026 (4 ದಿನ): ಭೀಮಾಶಂಕರ, ಶಿರಡಿ, ನಾಶಿಕ್, ಎಲ್ಲೋರ, ಘೃಷ್ಣೇಶ್ವರ, ತ್ರಯಂಬಕೇಶ್ವರ. (ವಿಮಾನ, AC ಬಸ್, ಊಟ, ರೂಂ)
Mob: 9448499538

SITE FOR SALE
30x40 and 40x60 New RT Nagar.
Mob: 98862 81713

SITES FOR SALE
30x40, 40x60 Vishwa Prajna Layout Dhanvith Properties
Mob: 97400 88990

SITE FOR SALE
30x40 West Face Brahmanandasagar Phase 2, Opp. St. Joseph Central School, Ilwala.
Mob: 9972399939
DIRECT OWNER

Sri Murugan Pharma @ Vijayanagar 3rd Stage
REQUIRED STAFFS
Freshers and Experienced
Attractive Salary
Call: 99802 53762
Email: srimuruganpharmacy mysuru@gmail.com

EAST FACE MUDA APPROVED
40x60 SITE FOR SALE NITYANANDASAGARA HUILALU, MYSORE
Mob: 8217851695

RAI ESTATES
RERA APPROVED · B-KHATA · MUDA APPROVED
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor, New Sayyaji Rao Road, Bamboo Bazar, Mysuru - 570 001

FOR SALE
Rajamudi Rice (Unpolished) Rs. 72 Per KG. Vijayanagar 4th Stage.
Mob: 9972399939

WANTED
Accountant
Tata Ace Driver
94480 67939
97395 69260

House For Sale
30x40 West Face North Door
Police Layout
Near Hamsa Cafe, Sathagalli Depo
9573198827
9121672667

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲಿ ನೀಡಲಾಗುತ್ತದೆ. (ಟೆಲಿಕಾಲರ್ ಬೇಕಾಗಿದ್ದಾರೆ)
ಒಂದು ಗ್ರಾಂ. ಚಿನ್ನಕ್ಕೆ 12,000 (24 CT.)
Mob: 9108146123

SITE FOR SALE
30x40 NORTH Site for sale in SUNCITY HOME IN ELWALA, MYSORE
READY TO BUILT WITH BORE.
Mob: 8217851695

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

Ready for Construction
East face 30x40 MUDA Approved site for sale in Paramanandasagara Phase-1, Huilalu, Elwala, Mysore.
Mob: 8217851695

ಬೇಕಾಗಿದ್ದಾರೆ
ಪ್ರಿಂಟಿಂಗ್ ಪ್ರೆಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ:
ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು–570 001
ದೂರವಾಣಿ: 9902639593

SITE FOR SALE
30x40, Opp. Park, MUDA allotted (200 meters Ring Road, Vijayanagar 4th Stage.
Mob: 9148316776

SITE FOR SALE
50x80 (W/F) Site No. 5272, 80 ft. Main Road, commercial, Vijayanagar 4th Stage, 2nd Phase.
Direct owners sitting.
Mob: 9845772961

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9535175624

FOR SALE
1. 20x30 Properties @ Kuvempunagar, RK Nagar
2. 40x50 Corner Property Near Iskcon, Jayanagar
3. 20x30 Nw Duplex@ Utthanahalli & Sites @ Dattagalli
4. 40x62 New House Near Hari Vidyalaya, Bogadi

Sites 20x30, 30x40 Starting@ 22L
Apartments @ Ramkrishna Ngr
Commercial Properties Available
PRAKRUTHI PROPERTIES
95386 90359, 90359 90359

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064

ಮನೆ ಕಟ್ಟಿಸುವವರ ಗಮನಕ್ಕೆ
ನಿಮ್ಮ ಕನಸಿನ ಮನೆಯನ್ನು Rs. 1850/- ಚದುರಡಿಗೆ ಉತ್ತಮ ಗುಣಮಟ್ಟವುಳ್ಳ ಸಾಮಗ್ರಿಗಳನ್ನು ಉಪಯೋಗಿಸಿ ಕಟ್ಟಿಕೊಡಲಾಗುವುದು. ಮುಂಗಡ ಹಣ ಪಾವತಿಸುವಂತಿಲ್ಲ.
ಸಂಪರ್ಕಿಸಿ: S.R. CONSTRUCTIONS, Dewan's Road, Mysore.
ಸಾಲದ ಸೌಲಭ್ಯ ಒದಗಿಸಿಕೊಡಲಾಗುವುದು.
Mob: 63642 81689

WANTED TEACHERS
HINDI & KANNADA TRAINED Graduate Teachers. Capable of handling Higher Primary & High School.
JNANA GANGOTRI CONVENT
RAJENDRA NAGARA, MYSORE 7
Whatsapp 9113980741
WALK IN WITH ORIGINALS

SITE FOR SALE
SUNCITY HOMES LAYOUT near Yelwala, Nagawala village Hunsur main road. Upcoming NH just 2 kl mts, dimension 40×60 West Facing & 30×40 North Facing 2 Sites Available.
9738590901, 9483101670

SITES WANTED
@ Dadadahalli, Mandakalli, Kadakola TVS Factory Road & Mys-surroundings.
QUICK REGN.
Mob: 95388-39926

ತಕ್ಷಣ ಬೇಕಾಗಿದೆ
ಮೈಸೂರು ನಗರದ High School / PU College - ನಲ್ಲಿ 3 ರಿಂದ 5 ವರ್ಷಗಳ ಅವಧಿಗೆ ಬಾಡಿಗೆಗೆ ಸ್ಥಳಾವಕಾಶ ಬೇಕಾಗಿದೆ.
ಸಂಪರ್ಕಿಸಿ
7019012485

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

House for Rent / Lease
2 BHK ground floor, near Kuberanandasagara Layout, Triveni Layout, Yelwala, Mysore.
8105158874, 8310758678
BROKERS EXCUSE

WANTED
SITE ENGINEERS
Qualification: BE or Diploma in Civil. Site locations: Kodlipete, Somwarpet, Virajpet, Maddur, Mandya, K.M. Doddi, Srirangapatna, Nagamangala, Mysore. Whasapp your CV:
9916266181

N.S. LINGARAJU
Water Proofing Work
Terrace, Wall Crack, Water Tank etc.
Call: 9844609788

HOUSE FOR RENT
2 BHK semi-furnished East facing house with solar, wardrobe, pooja room with 24/7 water facility available for rent No. 90, 2nd Cross, Jayanagar, Mysore.
9916695760, 9945623573

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 8197383645

Solar Water Heaters


SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಮುದ್ರಣ ಪ್ರೆಸ್‌ಗೆ ಗ್ರಾಫಿಕ್ ವಿನ್ಯಾಸಕಾರರು ಬೇಕಾಗಿದ್ದಾರೆ. "ಕೋರಲ್ ಡ್ರಾ ಮತ್ತು ಫೋಟೋಶಾಪ್ ಪರಿಣತಿ ಹೊಂದಿರುವವರಿಗೆ ಆದ್ಯತೆ." ಆಕರ್ಷಕ ಸಂಬಳವಿರುತ್ತದೆ.
ಸಂಪರ್ಕಿಸಿ: 9964742255

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7975101020

FOR RENT
BAR AND RESTAURANT PETROL BUNK AVAILABLE FOR RENT at H.D. Kote, Mysore- Manadavadi Highway
CONTACT: 9901460603

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

FOR RENT/OFFICE SPACE AVAILABLE
First floor, Ramavilas Road backside
600 sqft as per vastu
9449408409, 9449994029

COMMERCIAL SPACE FOR RENT
1800 sq.ft., 1st Floor (suitable for office, bank, finance, companies, jewellery shops, readymade garments showroom, beauty parlour, Gym at Bharathinagara (K.M. Doddi), Mandya Main Road, Maddur Taluk, Mandya District. *Contact:*
Mob: 9880112059

Teacher's Layout
Site for sale No. 97, 30x40, West Face, Vivekananda Block, papers intact (incl. Title Deed & E-Khatha). Price 1 Cr. Only interested parties may contact:
Owner: 93793 33337

FOR RENT
1) 2 BHK G/F, Vetrified tiles/ modular kitchen. (2) 2 BHK First Floor, Open terrace / staircase inside. Cars / Bikes parking space. Suitable for Office cum Residence/ Guest House/ Quarters. Hinkal (Vijayanagar 3rd Stage).
9481426957, 9886044520

BRAND NEW HOUSE FOR SALE
30x40, 3 BHK for sale, East facing, Dattagalli, Mysore.
Price: 1.60 Cr., Negotiable.
Mob: 8147706492

Jnanajyothi Vidyalaya (HPS), Beerihundi.
Wanted Teachers
Mathematics. Computer teachers (D.Ed., B.Sc., M.Sc., B.Ed. or any Degree) are wanted immediately. Contact:
9845390377, 8197057626

ಸೈಟು ಮಾರಾಟಕ್ಕಿದೆ
20x30
ಉತ್ತರ ದಿಕ್ಕಿನ, ಖಾಲಿ ನಿವೇಶನ ಯೂನಿವರ್ಸಿಟಿ ಬಡಾವಣೆ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಹತ್ತಿರ, ಮೈಸೂರು, ಕರೆ ಮಾಡಿ
9739703467, 9686895205

ಪ್ರಾವಿಷನ್ ಸ್ಟೋರ್ ಮಾರಾಟಕ್ಕಿದೆ
ಸ್ಥಳ : ರಾಮಕೃಷ್ಣನಗರ ಇ & ಎಫ್ ಬ್ಲಾಕ್
ಸಂಪರ್ಕಿಸಿ:
8177868150

House for Lease or Rent
20x30 SF, 1st Floor, LIG-1, No. 33, Near CFTRI Layout, Bogadhi 2nd Stage.
LEASE: 8,00,000
RENT: 8,000
Mob: 9880047018

Urgent Requirement
SBP School, Belagola Srirangapatna Taluk, Mandya
TEACHERS WANTED
1st to 10th Std.
7259547922, 9731257604

ಕೆಲಸ ಖಾಲಿ ಇದೆ
ಮೈಸೂರಿನಲ್ಲಿರುವ ಮಹಿಳೆಯರಿಗೆ ಪುರುಷರಿಗೆ ಮತ್ತು ವಿದ್ಯಾರ್ಥಿಗಳಿಗೆ ಆಫೀಸ್ ಕೆಲಸಗಳಿಗೆ ನೇರವಾಗಿ ಆಯ್ಕೆ 7ನೇ, 10ನೇ, ಪಿಯುಸಿ, ಡಿಗ್ರಿ ಪಾಸ್/ಫೇಲ್ ಆದಂತಹವರಿಗೆ.
ಸಂಬಳ: 20,000 ರಿಂದ 45,000.
8095133188

ಉದ್ಯೋಗವಕಾಶ
ಆಫೀಸ್ ಕೆಲಸಕ್ಕೆ ಕಂಪನಿ ಕೆಲಸಕ್ಕೆ ಯುವಕ / ಯುವತಿಯರು ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಇಲ್ಲ) ವಸತಿ ಊಟ ಇರುತ್ತದೆ
ಸಂಬಳ: 20,000– 47,000
9916744622

ಬೇಕಾಗಿದ್ದಾರೆ
ಮನೆಯಲ್ಲಿ ಅಡುಗೆ ಕೆಲಸ ಮಾಡಲು ಮತ್ತು ಮನೆ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ
ಸ್ಥಳ: ವಿಜಯನಗರ, 3ನೇ ಹಂತ, ಮೈಸೂರು
7411451987

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ : 18000 (8 hrs, 26 Days)
ಊಟ, ತಿಂಡಿ, ರೂಮ್ ಸೌಲಭ್ಯವಿರುತ್ತದೆ.
9620777819, 9620667819

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ, ಕೆ.ಜಿ.ಕೊಪ್ಪಲು ಏರಿಯಾಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮೇಲ್ಪಟ್ಟು,
ವಯೋಮಿತಿ : 50 ವರ್ಷದೊಳಗೆ
ಸಂಬಳ : 22000 (26 Days) ESI, PF, ಊಟ, ತಿಂಡಿ ಸೌಲಭ್ಯವಿರುತ್ತದೆ.
9880727819, 9620667819

ಬೇಕಾಗಿದ್ದಾರೆ
ಮೈಸೂರು ಗುಡ್ ವಿಲ್ ಫೌಂಡೇಶನ್ ಸೇವಾ ಸಂಸ್ಥೆಯೊಂದರಲ್ಲಿ ಪುರುಷ ಅಭ್ಯರ್ಥಿ Warden ಕೆಲಸಕ್ಕೆ ಮತ್ತು Office ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: (ಎನ್ ಪಿ ಎಸ್ ಸ್ಕೂಲ್ ಹಿಂಭಾಗ), ವಿಜಯನಗರ ಮೈಸೂರು
7795708156
7619212836

ಮನೆ ಭೋಗ್ಯಕ್ಕೆ ಇದೆ
20X30 ಅಳತೆಯ 2 BHK, ಸೋಲಾರ್, 24 ಗಂಟೆ ನೀರಿನ ಎಲ್ಲಾ ಸೌಲಭ್ಯಗಳುಳ್ಳ, ಮೊದಲನೇ ಅಂತಸ್ತಿನ ಮನೆ ಇದೆ.
#74, 3ನೇ ಹಂತ, ಗೋಕುಲಂ, ಮೈಸೂರು
8951666811

ಹೊಸ ಮನೆ ಮಾರಾಟಕ್ಕಿದೆ
ಇಲವಾಲ ಸೇಂಟ್ ಜೋಸೆಫ್ ಸ್ಕೂಲ್ ಹತ್ತಿರ 20X30 ಅಳತೆಯ 3 BHK ಡ್ಯೂಪ್ಲೆಕ್ಸ್ ಫುಲ್ ಪರ್ನಿಷ್ ಓನ್ ಬೋರ್ ವೆಲ್ MUDA APPROVED ಮನೆ ಮಾರಾಟಕ್ಕಿದೆ. ಬೆಲೆ 69 ಲಕ್ಷ
ನಂಜುಂಡಸ್ವಾಮಿ H.S ಮಾಜಿ ಸೈನಿಕರು
9483862050
8660625801

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಬನ್ನಿಮಂಟಪದಲ್ಲಿರುವ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ 12 ಗಂಟೆ ಕೆಲಸ. ಸಂಬಳ: 13,000
ವಿದ್ಯಾಭ್ಯಾಸ– ಅವಶ್ಯಕತೆ ಇಲ್ಲ
9606075588

ತಕ್ಷಣ ಬೇಕಾಗಿದ್ದಾರೆ
EXPERIENCED PHARMA AIDE
(ಔಷಧಿಗಳ ಬಗ್ಗೆ ಅನುಭವವುಳ್ಳ) ಸಹಾಯಕರು for medical shop
Lacation : Bogadi
9880587586

ಜಮೀನು ಮಾರಾಟಕ್ಕಿದೆ
ಮೈಸೂರು ತಾಲೂಕು ಜಯಪುರ ಹೋಬಳಿ, ಮಾವಿನಹಳ್ಳಿ ಗ್ರಾಮದಲ್ಲಿ 3 ಎಕರೆ 7 ಗುಂಟೆ ಹಾಗೂ ಗೋಪಾಲಪುರ ಗ್ರಾಮದಲ್ಲಿ 25 ಗುಂಟೆ ಮತ್ತು ತಳೂರು ಮುಖ್ಯ ರಸ್ತೆಯಲ್ಲಿ 1 ಎಕರೆ 4 ಗುಂಟೆ ಜಮೀನು ಹಾರೋಹಳ್ಳಿ ಹೈವೆ ರಸ್ತೆಯಲ್ಲಿ 3 ಎಕರೆ ಅನ್ಯಕ್ರಾಂತವಾಗಿದೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
9945661696

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್ ಹೌಸ್‌ಕೀಪಿಂಗ್ ಮತ್ತು ಹೆಲ್ಪರ್ಸ್‌ಗಳು ಮತ್ತು ಬ್ಯಾಕ್ ಆಫೀಸ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್ಸ್, ಸಂಪರ್ಕಿಸಿ
9035367083, 6361548626

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ, ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ, ಸಪ್ತ ಮಾತೃಕ ಲೇಔಟ್, ಪೋಲೀಸ್ ಲೇಔಟ್, ಜೆ.ಎಸ್.ಎಸ್. ಲೇಔಟ್
9844436672

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಬಲ್ಲ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ
ARTHOR SERVICES (P) LTD
119, 2nd Floor, Panchamanthra Road, Opp. Park.
Kuvempu nagar, Mysore 570023
ಅನಿಲ್ : 7026996123
ಶೇಖರ್: 9945911118

ಸದ್ಗುರು ಮ್ಯಾರೇಜಸ್
1. ಒಕ್ಕಲಿಗ MBBS. MD ವಧುಗೆ .
2. ವೀರಶೈವ ಲಿಂಗಾಯಿತ MBBS.MDವಧುಗೆ
3. ಬ್ರಾಹ್ಮಣ B.com ವಧುಗೆ
4. ತಮಿಳು M.sc ವಧುಗೆ
5. ನಾಯಕ BE Mtech ವಧುಗೆ
6. ಕುರುಬ BE Mtech ವಧುಗೆ

ಸೂಕ್ತ ವರಗಳು ಬೇಕು
9448229184
7899625268

ಸದ್ಗುರು ರಿಯಲ್ ಎಸ್ಟೇಟ್
ಸೈಟು, ಮನೆ, ಜಮೀನು, ಅಪಾರ್ಟ್‌ಮೆಂಟ್ಸ್ ಮಾರುವವರು ಕೊಳ್ಳುವವರು ನೇರ ಸಂಪರ್ಕಿಸಿ
6361740552
9449408551

ನಲ್ಲಿ ಮತ್ತು ಸ್ಯಾನಿಟರಿ ಕೆಲಸ
ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ ಹಾಗೂ ಸಿವಿಲ್ ಆಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ
9035012579
9164573142

ಜಮೀನು ಮಾರಾಟಕ್ಕಿದೆ
ಮೈಸೂರು ತಾಲೂಕು ಜಯಪುರ ಹೋಬಳಿ, ಮದ್ದೂರು ಗ್ರಾಮದಲ್ಲಿ 25 ಗುಂಟೆ, ಕಲ್ಲಹಳ್ಳಿ ಗ್ರಾಮದಲ್ಲಿ 35 ಗುಂಟೆ ಹಂಪಾಪುರ ಮುಖ್ಯ ರಸ್ತೆಯಲ್ಲಿ 18 ಗುಂಟೆ ಹಾಗೂ 10 ಗುಂಟೆ ಹಂಪಾಪುರ ಕಂಚಮಳ್ಳಿ ಮುಖ್ಯ ರಸ್ತೆಯಲ್ಲಿ 1 ಎಕ್ರರೆ 30 ಗುಂಟೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ
9945661696

ಕೃಷಿ ಜಮೀನು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು ಜಯಪುರ ಹೋಬಳಿ ಮಂಡೆನಹಳ್ಳಿಯಲ್ಲಿ ಮೈಸೂರಿನಿಂದ 24 K.M. ಹೈವೇಯಿಂದ 300 ಮೀಟರ್‌ನಲ್ಲಿ, 1 ಎಕರೆ 30 ಗುಂಟೆ, ಗೇಟ್, ಬೇಲಿ ಹಾಕಿರುವ ಕೃಷಿ ಜಮೀನು ಮಾರಾಟಕ್ಕಿದೆ. ಬೇಕಾದವರು ಸಂಪರ್ಕಿಸಿ : ಭೈರೇಗೌಡ
9379633981

ವಾಣಿಜ್ಯ ಉದ್ದೇಶಕ್ಕಾಗಿ ಜಾಗ ಬಾಡಿಗೆಗೆ ಇದೆ
ಚಾಮರಾಜನಗರ ತಾಲ್ಲೂಕು, ಹರದನಹಳ್ಳಿ ಇಂದ ಅರಕಲವಾಡಿ ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಂತಿರುವ ಅಮಚವಾಡಿ ಗ್ರಾಮದ ಹತ್ತಿರ ಇರುವ ಸುತ್ತಲೂ Fencing & Gate, ಅಳವಡಿಸಿರುವ ಸುರಕ್ಷತೆಯುಳ್ಳ ಎರಡು ಎಕರೆ ಖಾಲಿ ಜಾಗದ ಜಮೀನಿನ ಪೈಕಿ ತಮಗೆ ಅವಶ್ಯಕತೆಗೆ ಅನುಗುಣವಾಗಿ ವಾಣಿಜ್ಯ ಉದ್ದೇಶಕ್ಕಾಗಿ ಬಾಡಿಗೆಗೆ ದೊರೆಯುತ್ತದೆ. ಆಸಕ್ತರು ಸಂಪರ್ಕಿಸಿ: ನೇರ ಮಾಲೀಕರು
9019746369

ತಕ್ಷಣ ಬೇಕಾಗಿದ್ದಾರೆ
ಪುರುಷ ಅಭ್ಯರ್ಥಿಗಳು ಮೈಸೂರಿನ (ಮೇಟಗಳ್ಳಿ) ಪ್ರತಿಷ್ಠಿತ ಕಂಪೆನಿಗಳಲ್ಲಿ (J.K. Tyre ಫ್ಯಾಕ್ಟರಿ) ಕೆಲಸ ಮಾಡಲು ಸಹಾಯಕರು ಬೇಕಾಗಿದ್ದಾರೆ.
ವಯೋಮಿತಿ : 18 ರಿಂದ 45 ವರ್ಷ
ವಿದ್ಯಾಭ್ಯಾಸ : 5th, 7th, 8th, 9th, SSLC, PUC, ITI Any Trade
ಸೌಲಭ್ಯ : ESI, PF, Canteen ಸೌಲಭ್ಯವಿರುತ್ತದೆ. ತಕ್ಷಣ ಸಂಪರ್ಕಿಸಿ:
6362491336, 9353430078

SITE/HOUSE FOR SALE
1. 16X38, 608 Sq ft (House) Krishnamurthy Puram, 72 Lakhs
2. 20x32, 640 Sqft (Site) Srinagara, Hunsur Road, 16 Lakhs Contact :
Vijay Properties
9986004007, 8722337733

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ನಂ.ಗೂಡಲ್ಲಿ ಜನರ ಸಮಸ್ಯೆಗೆ ಸ್ಪಂದಿಸಲು ಕ್ಯೂಆರ್ ಕೋಡ್

ದೇಶದಲ್ಲಿಯೇ ತಂತ್ರಜ್ಞಾನ ಅಳವಡಿಸಿಕೊಂಡ ಮೊದಲ ನಗರಸಭೆ

● ಎಲ್ಲಾ ವಾರ್ಡ್‌ಗಳಲ್ಲಿ ಕ್ಯೂಆರ್ ಕೋಡ್ ಅಳವಡಿಕೆ ● ಜನರು ಇದರ ಮೂಲಕ ಸಂಪರ್ಕಿಸಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು

ನಂಜನಗೂಡು, ಅ.24– ನಗರಸಭೆ ವ್ಯಾಪ್ತಿಯ ಜನರ ಸಮಸ್ಯೆಗಳನ್ನು, ತಂತ್ರಜ್ಞಾನವನ್ನು ಬಳಸಿಕೊಂಡು ತ್ವರಿತವಾಗಿ ಬಗೆಹರಿಸಿ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಲು ದೇಶದಲ್ಲೇ ಮೊದಲ ಬಾರಿಗೆ ಎಲ್ಲಾ ವಾರ್ಡ್‌ಗಳಲ್ಲಿ ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಅಳವಡಿಸಿಕೊಂಡ ಮೊದಲ ನಗರಸಭೆ ನಂಜನಗೂಡು ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದ್ದಾರೆ.

ನಗರಸಭೆಯ ಆವರಣದಲ್ಲಿ ವಾರ್ಡ್‌ಗಳಲ್ಲಿ ಅಳವಡಿಸಲಾಗುವ ಕ್ಯೂಆರ್ ಕೋಡ್ ಬೋರ್ಡ್‌ಗಳ ಉದ್ಘಾಟನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ನಗರಸಭೆಯ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಜನರ ಸಮಸ್ಯೆಯನ್ನು ಆಲಿಸುವ ಸಂದರ್ಭದಲ್ಲಿ ನಗರಸಭೆಯ ಅಧಿಕಾರಿಗಳು ಜನರ ಸಮಸ್ಯೆಗಳನ್ನು ಪರಿಗಣಿಸಿ ತ್ವರಿತವಾಗಿ ಕೆಲಸ ಮಾಡುತ್ತಿಲ್ಲ, ಎಂಬುದಾಗಿ ದೂರು ಕೇಳಿ ಬರುತ್ತಿತ್ತು ಆದ್ದರಿಂದ ಸಾರ್ವಜನಿಕರ ಮೂಲಭೂತ ಸೌಲಭ್ಯ, ಸೇವೆಗಳಿಗೆ ಸಂಬಂಧಪಟ್ಟ ಸಮಸ್ಯೆ, ದೂರುಗಳ ನಿರ್ವಹಣೆಗೆ ನೇರವಾಗಿ ಅಧಿಕಾರಿಗಳನ್ನು ಸಂಪರ್ಕಿಸಲು ಅನೂಕೂಲವಾಗುವಂತೆ ಅಶೋಕ ವಿಶ್ವವಿದ್ಯಾಲಯ ಮತ್ತು ಐಸಾಕ್ ಸೆಂಟರ್ ಫಾರ್ ಪಬ್ಲಿಕ್ ಪಾಲಿಸಿ ಸಹಯೋಗದೊಂದಿಗೆ ಸಿವಿಕ್ ಪೋರ್ಟಲ್ ಡಿಜಿಟಲ್ ಸೇವೆಗೆ ಚಾಲನೆ ನೀಡಲಾಗಿದೆ ಎಂದರು.

ಮಹಾನಗರ ಪಾಲಿಕೆಗಳಲ್ಲಿ ಜನರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ನೀಡಲು ಈ ಸೇವೆ ಚಾಲ್ತಿಯಲ್ಲಿದೆ, ದೇಶದಲ್ಲೇ ನಂಜನಗೂಡು ನಗರಸಭೆ ಈ ತಂತ್ರಾಂಶ ಬಳಸಿಕೊಂಡು ಜನರ ಸೇವೆಗೆ ಅಳವಡಿಸಿಕೊಂಡ ಮೊದಲ ನಗರಸಭೆಯಾಗಿದೆ. ಅಶೋಕ ವಿಶ್ವವಿದ್ಯಾಲಯ ಮತ್ತು ಐಸಾಕ್ ಸೆಂಟರ್‌ನ ಐಶ್ವರ್ಯ ಸುನಾದ್ ತಂಡ ಉಚಿತವಾಗಿ ನಗರಸಭೆಗೆ ತಂತ್ರಜ್ಞಾನವನ್ನು ಅಳವಡಿಸಿದ್ದು, ನಗರದ ನಾಗರೀಕರಿಗೆ ಸೇವೆ ಒದಗಿಸಲು ಸಹಾಯ ಮಾಡಿದ್ದಾರೆ. ನಗರದ 31 ವಾರ್ಡ್‌ಗಳಲ್ಲಿ ಪ್ರತಿ ವಾರ್ಡಿನ 3 ಕಡೆ ಕ್ಯೂ ಆರ್ ಕೋಡ್ ಅಳವಡಿಸಲಾಗುವುದು, ಜನಸಾಮಾನ್ಯರು ತಮ್ಮ ವಾರ್ಡಿನ ಹಾಗೂ ನಗರಸಭೆಗೆ ಸಂಬಂಧಿಸಿದ ಸಮಸ್ಯೆಗಳನ್ನು ನೇರವಾಗಿ ಕ್ಯೂ ಆರ್ ಕೋಡ್ ಬಳಸುವ ಮೂಲಕ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ. ಅಧಿಕಾರಿಗಳು ಸ್ಪಂದಿಸದಿದ್ದರೆ ಈ ಸೌಲಭ್ಯದ ಮೂಲಕ ದೂರು ದಾಖಲಿಸಬಹುದಾಗಿದೆ. ಯೋಜನೆ ಯಶಸ್ವಿಯಾಗಿ ಜನಸಾಮಾನ್ಯರ ಸಮಸ್ಯೆ ಪರಿಹಾರದಲ್ಲಿ ರಾಜ್ಯದಲ್ಲಿ ಮೊದಲ ಬಾರಿಗೆ ಐತಿಹಾಸಿಕ ಹೆಜ್ಜೆಯಾಗಲಿದ್ದು ನಂಜನಗೂಡು ಇತಿಹಾಸ ಪುಟವನ್ನು ಸೇರಲಿದೆ ಎಂದು ತಿಳಿಸಿದರು.

ನಗರಸಭಾ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿದ ನಂತರ ಶಾಸಕ ದರ್ಶನ್ ಧ್ರುವನಾರಾಯಣ್ ರವರ ಸಹಕಾರದಿಂದ ನಮ್ಮ ಅವಧಿಯಲ್ಲಿ ಸುಮಾರು 65 ಕೋಟಿಗಿಂತಲೂ ಹೆಚ್ಚಿನ ಅಭಿವೃದ್ಧಿ ಕಾರ್ಯವನ್ನು ನಡೆಸಲಾಗಿದೆ, ಅಲ್ಲದೆ ನಮ್ಮ ಅಧಿಕಾರ ಅವಧಿ ನಂಬರ್ 1ರಿಂದ ಮುಕ್ತಾಯಗೊಳ್ಳಲಿದ್ದು ನಾಗರಿಕರ ಸಮಸ್ಯೆ ಬಗೆಹರಿಸಲು ಕ್ಯೂಆರ್ ಕೋಡ್ ವ್ಯವಸ್ಥೆ ಸಹಕಾರಿಯಾಗಲಿದೆ. ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳಲು ಸಾರ್ವಜನಿಕರು ಕಚೇರಿಗೆ ಅಲೆಯಬೇಕಿಲ್ಲ ಬದಲಾಗಿ ಈ ವ್ಯವಸ್ಥೆಯಿಂದ ಕುಳಿತಲ್ಲೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ನಗರಸಭಾ ಉಪಾಧ್ಯಕ್ಷೆ ರಿಯಾನಾ ಬಾನು, ಸದಸ್ಯರಾದ ಎಚ್.ಎಸ್. ಮಹದೇವಸ್ವಾಮಿ, ಗಂಗಾಧರ್, ಮಹೇಶ್ ಅತ್ತಿಖಾನೆ, ಎಸ್.ಪಿ.ಮಹೇಶ್, ಶ್ವೇತಲಕ್ಷ್ಮಿ, ಎನ್‌ಎಸ್ ಯೋಗೀಶ್, ಮಹದೇವಮ್ಮ ಬಾಲ ಚಂದ್ರ, ನಾಗಮಣಿ, ಪ್ರದೀಪ್, ಮಹದೇವ ಪ್ರಸಾದ್, ಕೆ.ಎಂ.ಬಸವರಾಜು, ರಮೇಶ್, ಖಾಲಿದ್ ಅಹಮದ್, ಸಿದ್ದಿಕ್, ಮುಖಂಡರಾದ ಕರಳಾಪುರ ನಾಗರಾಜು, ಪುಷ್ಪಲತಾ ಕಮಲೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಕಾಂಗ್ರೆಸ್ ಜಿಲ್ಲಾ ಕಾರ್ಯದರ್ಶಿ ಪ್ರದೀಪ್ ಕುಮಾರ್, ನಗರಸಭಾ ಆಯುಕ್ತ ವಿಜಯ್, ಎಇಇ ಮಹೇಶ್, ಸಮಂತ್, ಪರಿಸರ ವಿಭಾಗ ಅಭಿಯಂತರರಾದ ಮೈತ್ರಾವತಿ, ಸಿವಿಕ್ ಯೋಜನೆಯ ಸಂಶೋಧನಾ ಮುಖ್ಯಸ್ಥೆ ಐಶ್ವರ್ಯ ಸುನಾದ್, ಸೇರಿದಂತೆ ಹಲವಾರು ಪ್ರಮುಖರು ಉಪಸ್ಥಿತರಿದ್ದರು.



ಜನರ ಸಮಸ್ಯೆಗೆ ಸ್ಪಂದಿಸುವ ಕ್ಯೂಆರ್ ಕೋಡ್ ವ್ಯವಸ್ಥೆಯನ್ನು ಶಾಸಕ ದರ್ಶನ್ ಧ್ರುವನಾರಾಯಣ ಉದ್ಘಾಟಿಸಿದರು.

ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ ಒಂದೂವರೆ ಕೋಟಿ ರೂ. ಅನುದಾನ



ಉಪ್ಪಾರ ಸಮುದಾಯದವರಿಂದ ಮನವಿ ಸ್ವೀಕರಿಸುತ್ತಿರುವ ಎಂಎಲ್‌ಸಿ ಡಾ.ಯತೀಂದ್ರ.

ತಿ.ನರಸೀಪುರ, ಅ.24– ತಾಲೂಕಿನಲ್ಲಿ ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ ಒಂದೂವರೆ ಕೋಟಿ ರೂ ಅನುದಾನ ನೀಡುವುದಾಗಿ ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ನಂಜನಗೂಡು ಮುಖ್ಯ ರಸ್ತೆಯಲ್ಲಿರುವ ಉಪ್ಪಾರ ಸಮುದಾಯ ಭವನ ನಿರ್ಮಿಸಲುದ್ದೇಶಿಸಿರುವ ಜಾಗಕ್ಕೆ ಭೇಟಿ ನೀಡಿ, ಪರಿಶೀಲಿಸಿದ ನಂತರ ಈ ಭರವಸೆ ನೀಡಿದ್ದು, ಉಪ್ಪಾರ ಸಮಾಜದ ಬಂಧುಗಳಲ್ಲಿ ಸಂತಸವನ್ನುಂಟು ಮಾಡಿದೆ ಹಲವಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಉಪ್ಪಾರ ಸಮುದಾಯ ಭವನ ನಿರ್ಮಿಸಲು ಶಾಸಕರ ನಿಧಿ ಹಾಗೂ ಸರ್ಕಾರ ವತಿಯಿಂದ ಹಣ ಬಿಡುಗಡೆ ಮಾಡಿಸಿ ಕೊಡುವೆ ಎಂದ ಅವರು, ಉಪ್ಪಾರ ಸಮಾಜದ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರಲಿ ಅಥವಾ ವಿಪಕ್ಷವಾಗಿದ್ದಾಗಲೂ ನಿರಂತರವಾಗಿ ಅಭಿವೃದ್ಧಿಗೆ ಅನುದಾನ ತರುವ ಮೂಲಕ ಸಿಎಂ ಸಿದ್ದರಾಮಯ್ಯ ಶಾಸಕರಾಗಿ ಪ್ರತಿನಿಧಿಸುವ ವರುಣ ವಿಧಾನ ಸಭಾ ಕ್ಷೇತ್ರವನ್ನು ರಾಜ್ಯದಲ್ಲಿಯೇ ಮಾದರಿ ಕ್ಷೇತ್ರವಾಗಿ ಅಭಿವೃದ್ಧಿಪಡಿಸಿದ್ದೇವೆ. ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನದ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆ ಎಂದರು.

ಶ್ರೀ ಭಗೀರಥ ಉಪ್ಪಾರ ಜನ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಸಿದ್ದಪ್ಪ ಸ್ವಾಮಿ, ಗೌರವಾಧ್ಯಕ್ಷ ರಾಮಶೆಟ್ಟಿ, ಭಗೀರಥ ಉಪ್ಪಾರ ಮಹಾಸಭಾ ಅಧ್ಯಕ್ಷ ಮಾದೇವ ಶೆಟ್ಟಿ, ಉಪ್ಪಾರ ಮಹಾಸಭಾ ಜಿಲ್ಲಾಧ್ಯಕ್ಷ ಯೋಗೇಶ್, ಎಪಿಎಂಸಿ ಮಾಜಿ ಸದಸ್ಯ ಎಂಬಿ ಪುಟ್ಟಸ್ವಾಮಿ, ಆರ್ ಮಾದೇಶ್, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ರಾಜೇಂದ್ರ, ಚಿನ್ನಸ್ವಾಮಿ, ಶ್ರೀನಿವಾಸ್ ಮೂರ್ತಿ ಮಾಜಿ ಗ್ರಾಮ ಪಂಚಾಯತಿ ಸದಸ್ಯ ಮರಿಸ್ವಾಮಿ,ನಿರ್ದೇಶಕರಾದ ಮಾದೇವ,ಆರ್. ಮಾದೇಶ್, ಕೊತ್ತೆಗಾಲ ಮಾದೇಶ ಹಾಜರಿದ್ದರು.

ಪೋಲಿಯೊ ಲಸಿಕೆ ಹಾಕಿಸಿ, ಜೀವ ಉಳಿಸಿ

ಜಾಥಾದೊಂದಿಗೆ ಪೋಲಿಯೋ ದಿನ ಆಚರಣೆ

ಹುಣಸೂರು, ಅ.24– ವಿಶ್ವದೆಲ್ಲೆಡೆ ಪೋಲಿಯೋ ನಿರ್ಮೂಲನೆಯಲ್ಲಿ ಅಂತರಾಷ್ಟ್ರೀಯ ರೋಟರಿ ಸಂಸ್ಥೆಯ ಪಾತ್ರ ದೊಡ್ಡದಿದೆ ಎಂದು ರೋಟರಿ ಪೋಲಿಯೊ ಚೇರ್ಮನ್ ಡಾ. ಸರೋಜಿನಿ ವಿಕ್ರಂ ತಿಳಿಸಿದರು.

ಶುಕ್ರವಾರ ಬೆಳಿಗ್ಗೆ ಹುಣಸೂರು ರೋಟರಿ ಕ್ಲಬ್ ಮತ್ತು ರೋಟರಿ ಶಾಲಾ ಮಕ್ಕಳೊಂದಿಗೆ ನಗರಸಭೆ ರಸ್ತೆ, ಸೇತುವೆ ರಸ್ತೆ, ಸಂವಿಧಾನ ವೃತ್ತದಿಂದ ಸಿಲ್ವರ್ ಜೂಬಿಲಿ ರಸ್ತೆ ಮೂಲಕ ತೆರಳಿ. ಪೋಲಿಯೊ ಲಸಿಕೆ ಹಾಕಿಸಿ, ಮಕ್ಕಳ ಜೀವ ಉಳಿಸಿ ಎಂಬ ಸ್ಲೋಗನ್ ಹೇಳುವ ಮೂಲಕ ಪೋಲಿಯೊ ದಿನವನ್ನು ಜಾಥಾದೊಂದಿಗೆ ಅರಿವು ಮೂಡಿಸಲಾಯಿತು.

ಈ ವೇಳೆ ಮಾತನಾಡಿದ ಅವರು, ವಿಶ್ವ ಆರೋಗ್ಯ ಇಲಾಖೆಯೊಂದಿಗೆ 2014 ರವರೆಗೂ ಅವಿರತವಾಗಿ ಶ್ರಮಿಸಿದ ಕಾರಣ ಇಂದು ಪೋಲಿಯೊ ಜೀರೋ ಪರ್ಸೆಂಟ್ ಆಗಿದ್ದು ಅ.24 ರ ದಿನವನ್ನು ಪೋಲಿಯೊ ವಿಶ್ವದಿನವಾಗಿ ಆಚರಿಸಿ ಅಂತಹ ಮಾರಕ ರೋಗ ಬರದಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಹುಣಸೂರು ರೋಟರಿ ಅಧ್ಯಕ್ಷ ಹೆಚ್.ಆರ್.ಕೃಷ್ಣಕುಮಾರ್ ಮಾತನಾಡಿ, ಅಂತರಾಷ್ಟ್ರೀಯ ರೋಟರಿ ಸಂಸ್ಥೆ ಹೆಸರಿಗಾಗಿ ಕೆಲಸ ಮಾಡುತ್ತಿಲ್ಲ, ವಿಶ್ವದ ಸ್ವಚ್ಛತೆ, ಪರಿಸರ, ಅಕ್ಷರ ಮತ್ತು ಆರೋಗ್ಯ ಸೇವೆಗಾಗಿ ಮುಡುಪಾಗಿರುವ ರೋಟರಿ ಸಂಸ್ಥೆಯು ಪೋಲಿಯೊ ಒಂದಕ್ಕೆ 2.90. ಲಕ್ಷ ಕೋಟಿ ಹಣವನ್ನು ವಿನಿಯೋಗಿಸುವ ಮುಖೇನಾ ನಿಸ್ವಾರ್ಥ ಸೇವೆಯಲ್ಲಿ ಮುಂಚೂಣಿಯಲ್ಲಿದೆ ಎಂದರು.

ರೋಟರಿ ಕ್ಲಬ್ ಬರಿ ಸೇವೆ ಮಾತ್ರವಲ್ಲ, ಸ್ನೇಹದಲ್ಲೂ ಮುಂದಿದ್ದು, ಪ್ರತಿ ತಾಲೂಕು, ಜಿಲ್ಲೆ ರಾಜ್ಯ, ದೇಶಗಳಲ್ಲಿ ಲಕ್ಷಾಂತರ ಸದಸ್ಯರು ಸರಕಾರದಡಿಯಲ್ಲಿರುವ ಶಾಲೆ, ಅಂಗನವಾಡಿ, ಅಭಿವೃದ್ಧಿಗೆ ಒತ್ತು ನೀಡಿ. ಅಳಿಲು ಸೇವೆಯನ್ನು ಮಾಡುತ್ತಾ ಸಮಾಜಮುಖಿ ಕಾರ್ಯದಲ್ಲಿ ತೊಡಗುವ ನಿಟ್ಟಿನಲ್ಲಿ ಎಲ್ಲಡೆ ಸಹಕಾರಿಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ಶ್ಯಾಮಣ್ಣ ಧರ್ಮಾಪುರ, ಪೋಲಿಯೊ ಚೇರ್ಮನ್ ಡಾ. ಸರೋಜಿನಿ ವಿಕ್ರಂ, ರೊ.ರಾಜಶೇಖರ್, ಹಾಗೂ ಶಾಲಾ ಮುಖ್ಯ ಶಿಕ್ಷಕಿ ದೀಪ, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕ ಹರೀಶ್, ಪಿ.ಟಿ. ಟೀಚರ್ ಪ್ರಸನ್ನ ಮತ್ತು ಎಲ್ಲ ಸಿಬ್ಬಂದಿವರ್ಗ, ಶಾಲಾ ಮಕ್ಕಳು ಇದ್ದರು.



ಹುಣಸೂರಿನಲ್ಲಿ ಪೋಲಿಯೋ ದಿನವನ್ನು ಜಾಥಾ ಮೂಲಕ ಆಚರಿಸಲಾಯಿತು.

ಧಾರಾಕಾರ ಮಳೆಗೆ ಹುಣಸೂರಲ್ಲಿ ಆರು ಮನೆಗಳಿಗೆ ಹಾನಿ

ಹುಣಸೂರು.ಅ.24. ಕಳೆದ ನಾಲ್ಕು ದಿನಗಳಿಂದ ಸುರಿಯುತ್ತಿರುವ ಮಳೆಗೆ ತಾಲೂಕಿನ ಆರು ಮನೆಗಳ ಗೋಡೆ ಬಿದ್ದು ಸಾಕಷ್ಟು ಹಾನಿಯಾಗಿದೆ ಎಂದು ತಹಸೀಲ್ದಾರ್ ಜೆ.ಮಂಜುನಾಥ್ ತಿಳಿಸಿದ್ದಾರೆ.

ತಾಲೂಕಿನ ಕಸಬಾ ಹೋಬಳಿಯ ನಿಲುವಾಗಿಲು ಗ್ರಾಮದ ರಘುರವರ ಪತ್ನಿ ರತ್ನ ಅವರ ಮನೆಗೆ ಸಂಪೂರ್ಣ ಹಾನಿಯಾಗಿದೆ. ಅಲ್ಲದೆ ಕಿರಿಜಾಜಿ ಗ್ರಾಮದ ರೇವಣ್ಣರ ಪುತ್ರ ಪ್ರವೀಣ, ರಾಮಪಟ್ಟಣದ ಚಿಕ್ಕಸಿದ್ದೇಗೌಡರ ಪುತ್ರ ತಿಮ್ಮೇಗೌಡ, ಗಾವಡಗೆರೆ ಹೋಬಳಿಯ ಅಗ್ರಹಾರದ ಅಮೃತರ ಮನೆ, ಹೊನ್ನೇನಹಳ್ಳಿಯ ರಾಮೇಗೌಡರ ಪುತ್ರ, ಕಾಂತರಾಜ್‌ರ ಮನೆ ಹಾಗೂ ಕಟ್ಟೆಮಳಲವಾಡಿಯ ಶಿವಲಿಂಗಯ್ಯರ ಪತ್ನಿ ಲಕ್ಷ್ಮಮ್ಮರ ಮನೆ ಬಿದ್ದು ಹೋಗಿದೆ.

ಹನಗೋಡು ಹೋಬಳಿಯ ಯಮಗುಂಬದ ರಾಜಯ್ಯ, ಹೊಸೂರು ಗೇಟ್‌ನ ಕಮಲಮ್ಮರ ಮನೆ ಭಾಗಶಃ ಹಾನಿಯಾಗಿದೆ. ಹಾನಿಗೀಡಾದ ಪ್ರದೇಶಗಳಿಗೆ ಆರ್.ಐ.ಗಳಾದ ನಂದೀಶ್, ಆರ್.ಶ್ರೀಧರ್, ಹೇಮಂತ್‌ಕುಮಾರ್ ಗ್ರಾಮ ಆಡಳಿತಾಧಿಕಾರಿಗಳಾದ ಸುಮಂತ್, ಶಿವಕುಮಾರ್, ಶ್ರೀವತ್ಸ, ಚೈತ್ರ ಭೇಟಿ ನೀಡಿತ್ತು ಮಹಜರ್ ನಡೆಸಿದರು. ಹಾನಿಗೀಡಾದ ಮನೆಗಳಿಗೆ ಸರಕಾರದ ನಿಯಮಾವಳಿ ಪ್ರಕಾರ ಪರಿಹಾರ ನೀಡಲಾಗುವುದೆಂದು ತಹಸೀಲ್ದಾರ್ ಜೆ.ಮಂಜುನಾಥ್ ತಿಳಿಸಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ನಂಜನಗೂಡು, ಅ.24– ನಂಜನಗೂಡು ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಅ.26 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ನಂಜನಗೂಡಿನ ಕೈಗಾರಿಕಾ ಪ್ರದೇಶ, ಚಾಮಲಾಪುರದ ಹುಂಡಿ, ಕಲ್ಲಹಳ್ಳಿ ಕೈಗಾರಿಕಾ ಪ್ರದೇಶ, ಕೊರೆಹುಂಡಿ, ಬಗೇರಿಯಾ ಲೇಔಟ್, ದೇಬೂರು, ಮತ್ತು ಟೀಚರ್ಸ್ ಲೇಔಟ್‌ನ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಾಯವಾಗಲಿದೆ ಎಂದು ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಟ್ಯಾಂತರ ರೂ. ಭತ್ತದ ಹಣ ಕೊಡದೆ ಸತಾಯಿಸುತ್ತಿರುವ ಆರೋಪ

ರೈಸ್ ಮಿಲ್ ಮುಂದೆ ರೈತರು ದಲ್ಲಾಳಿಗಳ ಪ್ರತಿಭಟನೆ

ತಿ.ನರಸೀಪುರ, ಅ.24– ಮೂರು ವರ್ಷಗಳ ಹಿಂದೆ ಭತ್ತದ ದಲ್ಲಾಳಿಗಳಿಂದ ಕೋಟ್ಯಾಂತರ ರೂಪಾಯಿಗಳ ಭತ್ತ ಪಡೆದು ಹಣ ನೀಡದೇ ರೈಸ್ ಮಿಲ್ ಮಾಲೀಕರು ಸತಾಯಿಸುತ್ತಿದ್ದಾರೆ ಎಂದು ಆರೋಪಿಸಿ ರೈತರು ರೈಸ್ ಮಿಲ್ ಮುಂದೆ ಪ್ರತಿಭಟನೆ ನಡೆಸಿದರು.

ತಾಲೂಕಿನ ಗರ್ಗೇಶ್ವರಿ ಗ್ರಾಮದಲ್ಲಿರುವ ಎಂ.ಎನ್.ಆಗ್ರೋ ಇಂಡಸ್ಟ್ರೀಸ್ ರೈಸ್ ಮಿಲ್ ಮಾಲೀಕರಾದ ನಯೀಮುಲ್ಲಾ ಎಂಬುವರು ತಾಲೂಕಿನ ವಿವಿಧ ಗ್ರಾಮಗಳ ಭತ್ತದ ದಲ್ಲಾಳಿಗಳಿಂದ ಕೋಟ್ಯಾಂತರ ರೂ.ಗಳ ಭತ್ತ ಪಡೆದು ಮೂರು ವರ್ಷ ಕಳೆದರೂ ಹಣ ನೀಡದೆ ವಂಚಿಸುತ್ತಿದ್ದಾರೆ ಎಂದು ಆರೋಪಿಸಿದ ರೈತರು ಶುಕ್ರವಾರ ರೈಸ್ ಮಿಲ್ ಮುಂದೆ ದಲ್ಲಾಳಿಗಳೊಂದಿಗೆ ಜಮಾಯಿಸಿ ರೈಸ್ ಮಿಲ್ ಮಾಲೀಕರ ಕಾರು ತಡೆದು ಆಕ್ರೋಶ ವ್ಯಕ್ತಪಡಿಸಿದರು. ದಲ್ಲಾಳಿ ಹರೀಶ್ 30 ಲಕ್ಷ, ರಾಚೇಗೌಡ 18 ಲಕ್ಷ ಹಾಗೂ ಮೋಳೆಹುಂಡಿ ಜವರಿಯವರು 20 ಲಕ್ಷ ರೂ.ಗಳ ಭತ್ತ ಪಡೆದು ಎಂಎನ್ ಇಂಡಸ್ಟ್ರೀಸ್‌ಗೆ ಮಾರಾಟ ಮಾಡಿದ್ದರು. ಇದಲ್ಲದೇ ಇತರೆ ರೈತರಿಂದ ಕೋಟ್ಯಾಂತರ ರೂ. ಬೆಲೆ ಬಾಳುವ ಭತ್ತವನ್ನು ಮಿಲ್‌ಗೆ ಮಾರಾಟ ಮಾಡಲಾಗಿತ್ತು ಆದರೆ ಮಿಲ್ ಮಾಲೀಕರು ಭತ್ತ ಮಾರಿದ ಹಣವನ್ನು ಮುಂದಿನ ದಿನಗಳಲ್ಲಿ ಕೊಡುವ ಭರವಸೆ ನೀಡಿ ವರ್ಷಾನುಗಟ್ಟಲೆ ಸತಾಯಿಸುತ್ತಾ ಬಂದಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ದಲ್ಲಾಳಿ ಮೇಲೆ ಕಾರು ಹತ್ತಿಸಲು ಯತ್ನ..! : ಭತ್ತ ಸರಬರಾಜು ಮಾಡಿದ ಹಣ ಕೊಡುವಂತೆ ಮಿಲ್ ಮಾಲೀಕ ನಯೀಮುಲ್ಲಾ ಅವರನ್ನು ದಲ್ಲಾಳಿ ಹರೀಶ್ ಒತ್ತಾಯಿಸಿದ ವೇಳೆ ರೈಸ್‌ಮಿಲ್ ಮಾಲೀಕ ಅವರ ಮೇಲೆ ಕಾರು ಹತ್ತಿಸುವ ಪ್ರಯತ್ನ ಮಾಡಿದ್ದಾನೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕಾರು ಹತ್ತಿಸುವ ಪ್ರಯತ್ನ ಮಾಡಿದ್ದಲ್ಲದೇ ಮಿಲ್ ಮಾಲೀಕರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಹರೀಶ್‌ನ ಮೇಲೆ ಕೇಸು ದಾಖಲು ಮಾಡುವ ಮೂಲಕ ಬೆದರಿಕೆ ಒಡ್ಡುವ ಕೆಲಸಕ್ಕೆ ಮುಂದಾಗಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿಸಿದರು. ಕಳೆದ ವಾರ ಸಹ ಪ್ರತಿಭಟನೆ ಮಾಡಿ ಪೊಲೀಸರಿಗೆ ದೂರು ನೀಡಿದ್ದೇವೆಯಾದರೂ ಯಾವುದೇ ಕ್ರಮವಾಗಿಲ್ಲ ಎಂದು ಬೇಸರ ವ್ಯಕ್ತ ಪಡಿಸಿದರು.

ಕಾರು ಅಡ್ಡಗಟ್ಟಿ ಪ್ರತಿಭಟನೆ..! : ಎಂಎನ್ ಆಗ್ರೋ ಇಂಡಸ್ಟ್ರೀಸ್ ಮುಖ್ಯ ದ್ವಾರದ ಬಳಿ ಜಮಾಯಿಸಿದ್ದ ಪ್ರತಿಭಟನಾ ನಿರತರು ಕಾರಿನಲ್ಲಿ ಮಿಲ್‌ಗೆ ಬಂದ ನಯೀಮುಲ್ಲಾರನ್ನು ಕಂಡು ಕೋಪೋದ್ರಿತರಾಗಿ ಕಾರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ಕೂಡಲೇ ರೈತರ ಹಣ ಕೊಡಿಸುವಂತೆ ಒತ್ತಾಯಿಸಿದರು. ಸಮಸ್ಯೆ ಬಗೆಹರಿಯದ ಹೊರತಾಗಿ ಕಾರು ಮಿಲ್ ಒಳಗೆ ಹೋಗಲು ಬಿಡುವುದಿಲ್ಲ ಎಂದು ಪಟ್ಟುಹಿಡಿದರು. ಆದರೆ ನಯೀಮುಲ್ಲಾ ಕಡೆಯ ಕೆಲವರು ಸ್ಥಳಕ್ಕೆ ಬಂದು ಅವರ ಪರವಾಗಿ ಮಾತನಾಡಲಾರಂಭಿಸಿದರು. ಈ ವೇಳೆ ಕೂಗಾಟ ತಳ್ಳಾಟ ಉಂಟಾಯಿತು. ಎರಡೂ ಕಡೆಯವರ ನಡುವೆ ಪರಸ್ಪರ ಮಾತಿನ ಚಕಮಕಿ ನಡೆಯಿತು. ಇನ್ನೇನು ಪರಿಸ್ಥಿತಿ ವಿಕೋಪಕ್ಕೆ ತಿರುಗುವ ಲಕ್ಷಣ ಕಾಣಿಸಿಕೊಂಡ ಸಮಯಕ್ಕೆ ನಯೀಮುಲ್ಲಾ ಕಾರು ಸ್ಟಾರ್ಟ್ ಮಾಡಿಕೊಂಡು ಮಿಲ್‌ನೊಳಗೆ ಹೋದರು. ನಂತರ ಮಿಲ್ಲಿನ ಗೇಟ್ ಬಂದ್ ಮಾಡಲಾಯಿತು. ಕೆಲ ಸಮಯ ಪ್ರತಿಭಟನಾ ನಿರತರು ಮಿಲ್ ಮುಂಭಾಗ ಪ್ರತಿಭಟನೆ ನಡೆಸಿ ನಂತರ ತಿ.ನರಸೀಪುರ ಪಟ್ಟಣದಲ್ಲಿ ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಅವರಿಗೆ ರೈತರಿಗೆ ಆಗಿರುವ ಅನ್ಯಾಯದ ಬಗ್ಗೆ ದೂರು ನೀಡಲು ತೆರಳಿದರು.



ರೈತರು, ದಲ್ಲಾಳಿಗಳು ರೈಸ್ ಮಿಲ್ ಮುಂದೆ ಪ್ರತಿಭಟನೆ ನಡೆಸಿದರು.

ದಲ್ಲಾಳಿಗಳಿಗೆ ಯಾವುದೇ ಹಣ ಕೊಡಬೇಕಿಲ್ಲ...!

ದಲ್ಲಾಳಿಗಳಿಂದ ಭತ್ತ ಖರೀದಿ ಮಾಡಿದ್ದು ನಿಜ,ಖರೀದಿ ಮಾಡಿದ ಭತ್ತಕ್ಕೆ ಹಣ ನೀಡಿದ್ದೇನೆ. ರೈತರಿಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಎಂಎನ್ ಆಗ್ರೋ ಇಂಡಸ್ಟ್ರೀಸ್ ಮಾಲೀಕ ನಯೀಮುಲ್ಲಾ ಹೇಳಿದರು.

ದಲ್ಲಾಳಿಗಳಿಂದ ಪಡೆದ ಭತ್ತಕ್ಕೆ ಹಣವನ್ನು ಚೆಕ್ ಮೂಲಕ ನೀಡಿದ್ದೇನೆ. ಅದರಲ್ಲಿ ಎರಡು ಚೆಕ್ ಬೌನ್ಸ್ ಆಗಿದೆ. ಅದರ ಬಗ್ಗೆ ಕೇಸ್ ಆಗಿದೆ. ನನ್ನ ಮೇಲೆ ನಿರಾಧಾರ ಆರೋಪ ಮಾಡಲಾಗುತ್ತಿದೆ. ನಾನು ಯಾರಿಗಾದರೂ ಹಣ ಕೊಡಬೇಕೆಂದಿದ್ದರೆ ಅದಕ್ಕೆ ದಾಖಲಾತಿ ಒದಗಿಸಲಿ ಇಲ್ಲವೇ ಕಾನೂನು ಮೊರೆ ಹೋಗಲಿ ಅದು ಬಿಟ್ಟು ಗುಂಪು ಕಟ್ಟಿಕೊಂಡು ಮಿಲ್ ಮುಂದೆ ಗಲಾಟೆ ಮಾಡುವುದು ಸರಿಯಲ್ಲ ಎಂದರು. ಪ್ರತಿಭಟನೆಯಲ್ಲಿ ಭತ್ತದ ದಲ್ಲಾಳಿ ಟಿ.ಎಸ್.ಹರೀಶ್, ಶಿವಕುಮಾರ್, ರಾಚೇಗೌಡ, ಮೋಳೇಹುಂಡಿ ಜವರಿ ರೈತ ಮುಖಂಡರಾದ ಎಂ.ಸೀಹಳ್ಳಿ ಗುರುಮಲ್ಲಪ್ಪ,ನಗರ್ಲೆ ಕೂಸಪ್ಪ, ರವಿಕುಮಾರ್, ಅನಿಲ್ ಕುಮಾರ್, ಸುನೀಲ್ ಕುಮಾರ್, ಸತೀಶ್, ಮೋಹನ್ ಕುಮಾರ್, ಪ್ರತಾಪ್, ಶ್ರೀಧರ್, ಬಿ.ಕೃಷ್ಣಕುಮಾರ್, ರಾಮೇಗೌಡ, ರಾಮಣ್ಣ, ನಂದೀಶ್, ಸಹದೇವ ಭಾಗವಹಿಸಿದ್ದರು.

‘ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ’

ಜಾನಪದ ಕಲೆ ಉಳಿವು-ಬೆಳೆಯಲು ಸರ್ಕಾರದ ನೆರವು ಅವಶ್ಯ : ಮಾಜಿ ಸಚಿವ ಕೋಟೆ ಎಂ. ಶಿವಣ್ಣ ಅಭಿಮತ



ಮಾನಸ ಗಂಗೋತ್ರಿಯ ಲಲಿತಕಲಾ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಾನಪದ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಜಿಲ್ಲಾ ಜಾನಪದ ಪ್ರಪಂಚ ಹಾಗೂ ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಲಾಯಿತು.

ಮೈಸೂರು,ಅ.24(ಎಂಟಿವೈ)– ಜಾನಪದ ಕಲೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದರೊಂದಿಗೆ, ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮನವಿ ಮಾಡಿದ್ದಾರೆ.

ಮಾನಸ ಗಂಗೋತ್ರಿಯ ಲಲಿತಕಲಾ ಕಾಲೇಜಿನ ಸಭಾಂಗಣದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಆಯೋಜಿಸಿದ್ದ ಜಿಲ್ಲಾ ಜಾನಪದ ಪ್ರಪಂಚ ಹಾಗೂ ಯುವ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಜಾನಪದ ಕಲೆಗೆ ತನ್ನದೇ ಇತಿಹಾಸವಿದೆ. ಅಲ್ಲದೆ, ಜಾನಪದಕ್ಕೆ ಹೆಚ್ಚಿನ ಮಹತ್ವವೂ ಇದೆ. ಜಾನಪದ ಕಲೆ, ಸಂಗೀತ ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಜಾನಪದ ಗೀತೆಗಳನ್ನು ಆಲಿಸುವುದರಿಂದ ಮನಸ್ಸು ಶಾಂತವಾಗುತ್ತದೆ. ಬಿಪಿ, ಶುಗರ್‌ನಂತಹ ಆರೋಗ್ಯ ಸಮಸ್ಯೆ ನಿವಾರಣೆಯಾಗುತ್ತದೆ. ಹಾಗಾಗಿ ಜಾನಪದ ಕಲೆ ನಶಿಸಿ ಹೋಗದಂತೆ ಎಚ್ಚರ ವಹಿಸಬೇಕಾಗಿದೆ. ಜಾನಪದ ಕಲೆ ಉಳಿಸಿ, ಬೆಳೆಸಲು ಸರ್ಕಾರ ಹೆಚ್ಚಿನ ನೆರವು ನೀಡಬೇಕು ಎಂದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಕ್ಯಾತನಹಳ್ಳಿ ಪ್ರಕಾಶ್ ಸರ್ಕಾರದ ಯಾವುದೇ ಅನುದಾನ ಪಡೆಯದೇ, ಕೆಲ ದಾನಿಗಳೊಂದಿಗೆ ಸೇರಿ ಕಳೆದ ಒಂಭತ್ತು ವರ್ಷಗಳಿಂದಲೂ ಜಿಲ್ಲೆಯ ಜಾನಪದ ಕಲಾವಿದರನ್ನು ಗುರುತಿಸಿ, ಗೌರವಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಮುಂದಿನ ವರ್ಷಗಳಲ್ಲಿ ತಾವು ಕೂಡ ಕೈಜೋಡಿಸುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ ವಿ.ಬೈರಿ ಮಾತನಾಡಿ, ಹಿರಿಯ ಜಾನಪದ ಕಲಾವಿದರು ಇದುವರೆಗೂ ಜಾನಪದ ಕಲೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದಾರೆ. ಆದರೆ, ಯುವ ಕಲಾವಿದರು ಆನ್‌ಲೈನ್ ಹಾಗೂ ಡಿಜಿಟಲ್ ಮಾಧ್ಯಮವನ್ನು ಸಮರ್ಪಕವಾಗಿ ಬಳಸಿಕೊಂಡು ಜಾನಪದ ಕಲೆಯ ಬಗ್ಗೆ ವ್ಯಾಪಕ ಪ್ರಚಾರ ಮಾಡಬೇಕು ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಬೆಸೂರು ಮೋಹನ್ ಪಾಳೇಗಾರ್ ಅವರ ಕಾಡು ಕಣಿವೆಯ ಜಾನಪದ ಕಥೆಗಳು, ಕಾನನ ಜಾನಪದ ಕಥೆಗಳು ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ವಿವಿಧ ಪ್ರಕಾರಗಳ ಜಾನಪದ ಕಲೆ ಪ್ರದರ್ಶಿಸಿದರು. ವಿವಿಧ ತಾಲೂಕು ಘಟಕಗಳ ಅಧ್ಯಕ್ಷರು ಕ್ಯಾತನಹಳ್ಳಿ ಪ್ರಕಾಶ್ ಹಾಗೂ ಡಾ.ಕಾವೇರಿ ಪ್ರಕಾಶ್ ಅವರನ್ನು ಸನ್ಮಾನಿಸಿದರು.

ಪ್ರಶಸ್ತಿ ಪುರಸ್ಕೃತರು: ಜಿಲ್ಲಾ ಜಾನಪದ ಪ್ರಪಂಚ ಪ್ರಶಸ್ತಿ– ಕುಂಬಾರಕೊಪ್ಪಲು ತಂಬೂರಿ ನಂಜೇಗೌಡ, ತತ್ವಪದ ಹಾಡುಗಾರ ಶಿರಮಳ್ಳಿ ನಾಗೇಗೌಡ, ತಂಬೂರಿ ಕಲಾವಿದ ಕಂಪ್ಲಾಪುರ ಮಹದೇವಯ್ಯ, ದೇವರ ಮಕ್ಕಳ ಕುಣಿತದ ಪಿರಿಯಾಪಟ್ಟಣ ತಾಲೂಕಿನ ಸಣ್ಣತಮ್ಮೇಗೌಡ, ಜಾನಪದ ಸಂಘಟಕ ಹೊನ್ನೇನಹಳ್ಳಿಯ ರಾಜಯ್ಯ, ಕೋಲಾಟ ಕಲಾವಿದೆಯರಾದ ಹೂಟಗಳ್ಳಿ ಎಂ.ಪಿ. ಗೀತಾ, ಮೈಸೂರಿನ ಟಿ.ಎನ್.ರಾಜೇಶ್ವರಿ, ಜಾನಪದ ಹಾಡುಗಾರ್ತಿಯರಾದ ಮೈಸೂರಿನ ಪುಷ್ಪಲತಾ ನಾರಾಯಣ, ಹೆಚ್.ಕೆ. ಕೋಮಲ, ಹುಣಸೂರು ತಾಲೂಕಿನ ಅರ್ಚನಾ, ವೀರಗಾಸೆಯ ಕಿರಾಳು ಮಹೇಶ್, ಸೋಬಾನೆ ಹಾಡುಗಾರರಾದ ಮಾದಗಳ್ಳಿಯ ಜಯಮ್ಮ, ಕಮಲಮ್ಮ, ಹೂಟಗಳ್ಳಿಯ ಎಂ.ಎಸ್. ಮಂಜುಳಮ್ಮ, ಕಂಸಾಳೆ ಕಲಾವಿದ ಸೂರಹಳ್ಳಿಯ ಹೊಣಕರ ನಾಯಕ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ಕಜಾಪ ವಿಭಾಗೀಯ ಕಾರ್ಯದರ್ಶಿ ಡಾ.ಕಾವೇರಿ ಪ್ರಕಾಶ್, ಚಾಮರಾಜ ಕ್ಷೇತ್ರ ಅಧ್ಯಕ್ಷೆ ರಾಣಿಪ್ರಭಾ, ಲಲಿತಕಲಾ ಕಾಲೇಜು ಪ್ರಾಂಶುಪಾಲರಾದ ಪ್ರೊ.ಅನಿಟ ವಿಮ್ಲ ಬ್ರ್ಯಾಗ್ಸ್ ಪಾಲ್ಗೊಂಡಿದ್ದರು. ಹೆಚ್.ಡಿ. ಕೋಟೆ ತಾ. ಕುರುಬರ ಸಂಘದ ಮುಖಂಡ ಆನಂದ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ.ಗಂಗಾಧರ್, ಕಜಾಪ ಜಿಲ್ಲಾ ಖಜಾಂಚಿ ಡಾ.ವಿನೋದಾ, ಜಂಟಿ ಕಾರ್ಯದರ್ಶಿ ಜಿ. ರವಿಶಂಕರ್, ಎ.ಎಲ್. ಸುರೇಶ್ ಚಂದ್ರ, ದೊರೆಸ್ವಾಮಿ, ಪಲ್ಲವಿ, ಕವಿತಾ, ಬಸವರಾಜು, ರಶ್ಮಿ ಕೃಷ್ಣ ಇದ್ದರು. ವೇದರಾಜ್, ಕೆ.ಆರ್. ನಗರದ ರಿಜ್ವಾನ್ ನಿರೂಪಿಸಿದರು. ಶ್ರೀಧರ್ ಪ್ರಾರ್ಥಿಸಿದರು.

ಸುತ್ತೂರು ಜಾತ್ರಾ ಮಹೋತ್ಸವದ ಪೂಜೆ, ಸೇವಾ ಕೈಂಕರ್ಯಗಳು

ಮೈಸೂರು, ಅ. 24– ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜನವರಿ 15 ರಿಂದ 20 ರವರೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ನೆರವೇರಲಿದೆ. ಈ ಸಂದರ್ಭದಲ್ಲಿ ಸೇವಾರ್ಥದಾರರಿಂದ ಕರ್ತೃಗದ್ದುಗೆ, ಮಹದೇಶ್ವರ ಸನ್ನಿಧಿ, ವೀರಭದ್ರೇಶ್ವರ ದೇವಸ್ಥಾನ ಮೊದಲಾದ ಕಡೆಗಳಲ್ಲಿ ವಿಶೇಷ ಪೂಜೆಗಳು ನೆರವೇರುತ್ತವೆ.

ಸೇವಾ ಕೈಂಕರ್ಯಗಳನ್ನು ಸಲ್ಲಿಸಲು ಅಪೇಕ್ಷಿಸುವ ಭಕ್ತಾದಿಗಳು ಹೆಚ್ಚಿನ ಮಾಹಿತಿಗೆ ಸುತ್ತೂರು ಶ್ರೀ ಕ್ಷೇತ್ರ ಅಥವಾ ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಜಾತ್ರಾ ಮಹೋತ್ಸವ ಕಚೇರಿಯಲ್ಲಿ ಸಂಬಂಧಪಟ್ಟವರನ್ನು ನೇರವಾಗಿ ಅಥವಾ ಸುತ್ತೂರು ಕಚೇರಿ–08221 232223, 232033, ಮಾಹಿತಿ ಕೇಂದ್ರ–8896964242, ಎಂ. ನಾಗೇಂದ್ರ–9448609062, ಜಾತ್ರಾ ಕಚೇರಿ–9902867622, ಜೆಎಸ್‌ಎಸ್ ಮಹಾವಿದ್ಯಾಪೀಠ ಕಚೇರಿ ದೂ. 0821–2548212–122 ದೂರವಾಣಿಗಳಲ್ಲಿ ಸಂಪರ್ಕಿಸಿ ವಿವರ ಪಡೆಯಬಹುದು.

ಉಚಿತ ಆರೋಗ್ಯ ತಪಾಸಣೆ

ಮೈಸೂರು, ಅ.24(ಜಿಎ)–ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ, ವಿಶ್ರಾಂತ ಉದ್ಯೋಗಿಗಳ ಸಂಘಗಳ ಸಂಯುಕ್ತಾಶ್ರಯದಲ್ಲಿ ಅ.26 ರಂದು ಬೆಳಗ್ಗೆ 10.30 ರಿಂದ ಮಧ್ಯಾಹ್ನ 2 ರವರೆಗೆ ನಗರದ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಅಧ್ಯಕ್ಷ ಬಿ.ಆರ್.ಉಮಾಕಾಂತ್ ಈ ವಿಷಯ ತಿಳಿಸಿ, ಶಿಬಿರದಲ್ಲಿ ಕ್ಲಿಯರ್ ಮೆಡಿ ಆಸ್ಪತ್ರೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ತಂಡಗಳು ಮಧುಮೇಹ, ಇಸಿಜಿ, ನೇತ್ರ ಪರೀಕ್ಷೆ ನಡೆಸಿಕೊಡಲಿವೆ. ಸಾರ್ವಜನಿಕರು ಸಹಾ ಪ್ರಯೋಜನ ಪಡೆಯಬಹುದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಶ್ರೀಕಂಠನ್, ಸಿ. ಚಿಕ್ಕಲಿಂಗಸ್ವಾಮಿ, ಕೆ.ಎಂ.ಪುಟ್ಟು, ಕಾಳೇಗೌಡ, ಕ್ಲಿಯರ್ ಮೆಡಿ ಆಸ್ಪತ್ರೆಯ ಕಿರಣ, ಅನ್ನಪೂರ್ಣ ಆಸ್ಪತ್ರೆಯ ಕಾರ್ತಿಕ್ ಉಪಸ್ಥಿತರಿದ್ದರು.

ಅಭಿನಂದನೆ



ಮೈಸೂರು ನಗರದ ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಕೃಷ್ಣ ಅವರನ್ನು ಉತ್ತರ ವಲಯದ ಬಿಇಓ ರೇವಣ್ಣ, ಮಾಲಂಗಿ ಸುರೇಶ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವಿಭಾಗೀಯ ಉಪಾಧ್ಯಕ್ಷ ಎಂ.ಕೆ.ಗಣೇಶ್, ಡಿಡಿಪಿಐ ಕಚೇರಿಯ ಬಿ.ಎಂ.ಪರಮೇಶ್, ಶಿಕ್ಷಕರಾದ ಕೆಂಪೇಗೌಡ, ಲಿಂಗರಾಜು, ಶಿವಲಿಂಗರಾಜು, ಚಂದ್ರು, ರಂಗರಾಜು ಅಭಿನಂದಿಸಿದರು.

ಮೈಸೂರಿನ ಗರಡಿಗೇರಿ ಶ್ರೀಮಹದೇಶ್ವರ ದೇವಸ್ಥಾನದಲ್ಲಿ ಅ.27ರಿಂದ

ಮಹಾಕುಂಭಾಭಿಷೇಕ, ಹಾಲರವಿ ಉತ್ಸವ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶ್ರೀ ಮಲೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ,ಮಹಾ ಕುಂಭಾಭಿಷೇಕ, ಹಾಲರವಿ ಉತ್ಸವದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು, ಅ.24(ಜಿಎ)–ಮೈಸೂರಿನ ಗರಡಿಕೇರಿಯಲ್ಲಿರುವ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾ ಕುಂಭಾಭಿಷೇಕ ಹಾಗೂ 11ನೇ ವರ್ಷದ ಹಾಲರವಿ ಉತ್ಸವ ಹಾಗೂ ವಿವಿಧ ಕಾರ್ಯಕ್ರಮ ಅ.27ರಿಂದ ನ.11ರವರೆಗೆ ನಡೆಯಲಿದೆ ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಸುರೇಶ್ ಬಾಬು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.27ರಂದು ಬೆಳಗ್ಗೆ 6 ಗಂಟೆಗೆ ಗಂಗಾ ಪೂಜೆಯೊಂದಿಗೆ ಕಳಸ ತಂದು ಪ್ರತಿಷ್ಠಾಪಿಸಲಾಗುತ್ತದೆ. ನಂತರ ಶ್ರೀ ಗಣಪತಿ ಪೂಜೆ, ಶ್ರೀ ಶನೇಶ್ವರಸ್ವಾಮಿ ಪೂಜೆ, 7.30ಕ್ಕೆ ಮಹಾರುದ್ರಾಭಿಷೇಕ ನೆರವೇರಲಿದೆ. 8.30ಕ್ಕೆ ಗರಡಿಗೇರಿ ವೀರಾಂಜನೇಯಸ್ವಾಮಿ ದೇವಸ್ಥಾನದಿಂದ 11ನೇ ವರ್ಷದ ಹಾಲರವಿ ಕಳಶ ದೇವಸ್ಥಾನಕ್ಕೆ ತರಲಾಗುತ್ತದೆ. 10 ಗಂಟೆಯಿಂದ ಸುವರ್ಣ ಕೊಳಗಕ್ಕೆ ವಿಶೇಷ ಅಭಿಷೇಕ, ಶ್ರೀ ಮಲೆಮಹದೇಶ್ವರ ಸ್ವಾಮಿ ಮಹಾ ಹೋಮ ನಡೆಯಲಿದ್ದು, ಸಂಜೆ 6.30ಕ್ಕೆ ದೇವಸ್ಥಾನದ ಆವರಣದಲ್ಲಿ ದೀಪೋತ್ಸವ ನಡೆಯಲಿದೆ. ಅ.27ರಿಂದ 30ರವರೆಗೆ ಪ್ರತಿದಿನ ಸಂಜೆ 7 ಗಂಟೆಗೆ ಭಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

ಅ.31ರಂದು ಬೆಳಗ್ಗೆ 10ಗಂಟೆಗೆ ವಿವಿಧ ಆಸ್ಪತ್ರೆಗಳ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣಾ ಮತ್ತು ಔಷಧಿ ವಿತರಣಾ ಶಿಬಿರ ಆಯೋಜಿಸಿದ್ದು, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಶಿವಕುಮಾರ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಲ್. ನಾಗೇಂದ್ರ, ಡಿಹೆಚ್‌ಓ ಕುಮಾರಸ್ವಾಮಿ, ಡಾ.ಮದನ್ ಲಾಲ್, ಡಾ.ಜಯಕುಮಾರ್ ಮತ್ತಿತರರು ಆಗಮಿಸಲಿದ್ದಾರೆ ಎಂದು ಅವರು, ಅಂದು ಮಧ್ಯಾಹ್ನ 12 ಗಂಟೆಗೆ ಮಹಾ ಅನ್ನಸಂತರ್ಪಣೆ ಏರ್ಪಡಿಸಿದ್ದು, ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಆದಿಚುಂಚನಗಿರಿ ಶಾಖಾ ಮಠದ ಸೋಮನಾಥ ಸ್ವಾಮೀಜಿ, ಕಾಗಿನೆಲೆ ಗುರು ಪೀಠದ ಪೀಠಾಧ್ಯಕ್ಷರಾದ ಶ್ರೀ ಶಿವಾನಂದಪುರಿ ಮಹಾಸ್ವಾಮಿ, ಸಾಲೂರು ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ತಿಳಿಸಿದರು.

ನ.3ರಂದು ಬೆಳಗ್ಗೆ 10 ಗಂಟೆಗೆ ಶ್ರೀಮಲೆ ಮಹಾದೇಶ್ವರಸ್ವಾಮಿ ಮಹಾಉತ್ಸವ ನಡೆಯಲಿದ್ದು, ಮೆರವಣಿಗೆಯೂ ವಿವಿಧ ಕಲಾ ತಂಡಗಳ ಜೊತೆ ರಾಜಬೀದಿಯಲ್ಲಿ ಸಾಗಲಿದೆ. ನ.10ರಂದು ಬೆಳಗ್ಗೆ 10 ಗಂಟೆಗೆ ಮತ್ತು ನ.17ರಂದು ಸಂಜೆ 7ಗಂಟೆಗೆ ಹುಲಿವಾಹನ ಮತ್ತು ಸುವರ್ಣ ಕೊಳಗ ಮೆರವಣಿಗೆ ವೊಹಲ್ಲಾದಲ್ಲಿ ನಡೆಯಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಹದೇಶ್ವರ ಸ್ವಾಮಿ ಟ್ರಸ್ಟ್ ಅಧ್ಯಕ್ಷ ಗುಡ್ಡಪ್ಪ ರವಿಕುಮಾರ್, ರಾಚಯ್ಯ, ರಾಜೇಂದ್ರ ಕುಮಾರ್, ಜಿ. ಪ್ರಕಾಶ್, ಎಂ.ಎಸ್. ಮಹದೇವು ಉಪಸ್ಥಿತರಿದ್ದರು.

ನಾಳೆ ಭಾರತೀಯ ಅಂಚೆ ಮೈಸೂರು ಮ್ಯಾರಥಾನ್



ಮೈಸೂರು,ಅ.24– ಭಾರತೀಯ ಅಂಚೆ ಇಲಾಖೆ ವತಿಯಿಂದ ಅ.26 ರಂದು ಬೆಳಗ್ಗೆ 7 ಗಂಟೆಗೆ ಭಾರತೀಯ ಅಂಚೆ ಮೈಸೂರು ಮ್ಯಾರಥಾನ್ ಕಾರ್ಯಕ್ರಮವನ್ನು ಪೋಸ್ಟಲ್ ಟ್ರೈನಿಂಗ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ವೈಜ್ಞಾನಿಕ ಬೆಳೆನಷ್ಟ ಪರಿಹಾರವೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ರೈತರ ಪ್ರತಿಭಟನೆ

ಬೇಕು ಬೇಕಾದಂತೆ ಸಂಬಳ ಹೆಚ್ಚಿಸಿಕೊಳ್ಳುವ ಎಂಎಲ್‌ಎ, ಎಂಪಿಗಳಿಗೆ ರೈತರ ಬೇಡಿಕೆಗಳ ಅರಿವಿಲ್ಲ; ಆಕ್ರೋಶ



ಬೆಳೆ ಪರಿಹಾರ ಮೊತ್ತ ಹೆಚ್ಚಳ ಮಾಡುವಂತೆ ಆಗ್ರಹಿಸಿ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಅ.24(ಎಂಟಿವೈ)– ಬೆಳೆ ನಷ್ಟದ ಎನ್‌ಡಿಆರ್‌ಎಫ್ ಪರಿಹಾರ ಮಾನದಂಡವನ್ನು ತಿದ್ದುಪಡಿ ಮಾಡಿ ಬೆಳೆ ನಷ್ಟ ಪರಿಹಾರವನ್ನು ವೈಜ್ಞಾನಿಕವಾಗಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.


ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿ, ವರ್ಷದಿಂದ ವರ್ಷಕ್ಕೆ ಜನಪ್ರತಿನಿಧಿಗಳು ತಮ್ಮ ವೇತನ ಮೊತ್ತವನ್ನು ಹೆಚ್ಚಳ ಮಾಡಿಕೊಳ್ಳುತ್ತಾರೆ. ಆದರೆ, ಕಳೆದ ಎಂಟು ವರ್ಷದಿಂದ ಬೆಳೆ ನಷ್ಟ ಪರಿಹಾರ ಮೊತ್ತ ಹೆಚ್ಚಳ ಮಾಡದೇ ರೈತರನ್ನು ಸರ್ಕಾರ ವಂಚಿಸುತಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಇದೇ ವೇಳೆ ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿ, ಸರ್ಕಾರಿ ನೌಕರರು, ಶಾಸಕರು, ಸಂಸದರು, ಸಚಿವರು ಪ್ರತಿವರ್ಷ ಸಂಬಳ ಹೆಚ್ಚಳ ಮಾಡಿಕೊಳ್ಳುತ್ತಾರೆ. ಆದರೆ ರೈತರ ಬೆಳೆ ನಷ್ಟ ಪರಿಹಾರ ಮಾನದಂಡವನ್ನು 8 ವರ್ಷವಾದರೂ ಏರಿಕೆ ಮಾಡಲ್ಲ. ಎಲ್ಲ ಜನಪ್ರತಿನಿಧಿಗಳು ರೈತರ ಬಗ್ಗೆ ಬರೀ ಮೊಸಳೆ ಕಣ್ಣೀರು ಸುರಿಸುತ್ತಾರೆ. ಮಳೆ, ಪ್ರವಾಹ, ಪ್ರಕೃತಿ ವಿಕೋಪದಿಂದ ಉಂಟಾಗುವ ಬೆಳೆ ನಷ್ಟ ಪರಿಹಾರ ಎನ್‌ಡಿಆರ್‌ಎಫ್ ಮಾನದಂಡ ತಿದ್ದುಪಡಿ ಮಾಡಿ ಪರಿಹಾರ ಹೆಚ್ಚಳ ಮಾಡಬೇಕು. ಮಳೆ ಆಶ್ರಯದ ಬೆಳೆ ನಷ್ಟಕ್ಕೆ ಎಕರೆಗೆ ಕನಿಷ್ಠ 25 ಸಾವಿರ, ನೀರಾವರಿ ತೋಟಗಾರಿಕೆ ಬೆಳೆಗಳಿಗೆ ಎಕರೆಗೆ ಕನಿಷ್ಠ 40 ಸಾವಿರ, ವಾಣಿಜ್ಯ ಬೆಳೆಗಳಿಗೆ ಎಕರೆಗೆ 60 ಸಾವಿರ ರೂ.ಗಳಿಗೆ ಏರಿಕೆ ಮಾಡಬೇಕು ಎಂದು ಒತ್ತಾಯಿಸಿದರು.

ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕದ ಮಳೆ ಹಾನಿ ಪ್ರವಾಹ ಹಾನಿ ರೈತರ ಬೆಳೆ ನಷ್ಟಕ್ಕೆ, ಕೇಂದ್ರ ಸರ್ಕಾರ 5 ಸಾವಿರ ಕೋಟಿ ವಿಶೇಷ ಪ್ಯಾಕೇಜ್ ನೀಡುವಂತೆ ರಾಜ್ಯದ ಕೇಂದ್ರ ಸಚಿವರು ಸಂಸದರು ಒತ್ತಾಯಿಸಬೇಕು. ಬೆಳೆ ನಷ್ಟ ಅನುಭವಿಸುತ್ತಿರುವ ರೈತರ ಸಾಲ ಮನ್ನಾ ಮಾಡಬೇಕು. ಹಿಂದಿನ ವರ್ಷದ ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳ ಲಾಭವನ್ನು ರೈತರಿಗೆ ಕೂಡಲೇ ಕೊಡಿಸಬೇಕು. ಭತ್ತದ ಕನಿಷ್ಠ ಬೆಂಬಲ ಬೆಲೆ 2369 ರೂ.ಗೆ ಪ್ರೋತ್ಸಾಹ ಧನ 500 ರೂ ನೀಡಿ(ಪ್ರತಿ ಕ್ವಿಂಟಾಲ್‌ಗೆ) ರೈತರಿಂದ ಭತ್ತ ಖರೀದಿಸಲು ರಾಜ್ಯ ಸರ್ಕಾರ ಖರೀದಿ ಕೇಂದ್ರ ತೆರೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನಾಕಾರರಿಂದ ತಹಸೀಲ್ದಾರ್ ಶಿವಪ್ರಸಾದ್ ಹಾಗೂ ಜಿಲ್ಲಾ ಕೃಷಿ ಉಪ ನಿರ್ದೇಶಕ ರಾಜು ಮನವಿ ಸ್ವೀಕರಿಸಿದರು. ಈ ವೇಳೆ ಕಬ್ಬು ಬೆಳೆಗಾರರ ಸಂಘದ ಮುಖಂಡರಾದ ಅತ್ತಹಳ್ಳಿ ದೇವರಾಜ್, ಬರಡನಪುರ ನಾಗರಾಜ್, ಮುಖಂಡರಾದ ಸೋಮಶೇಖರ್, ವರಕೋಡು ನಾಗೇಶ್, ಮಾರ್ಬಳ್ಳಿ ನೀಲಕಂಠಪ್ಪ, ಲಕ್ಷ್ಮೀಪುರ ವೆಂಕಟೇಶ್, ದೇವನೂರು ವಿಜಯೇಂದ್ರ, ಹಂಪಾಪುರ ರಾಜೇಶ್, ದೇವನೂರು ಮಹದೇವಪ್ಪ, ಕುರುಬೂರು ಪ್ರದೀಪ್, ರಂಗರಾಜ, ಕಾಟೂರು ಮಹದೇವಸ್ವಾಮಿ, ಕಾಟೂರು ನಾಗೇಶ್, ಅಂಬಳೆ ಮಂಜುನಾಥ್, ಗಿರೀಶ್, ಕೂರ್ಗಳ್ಳಿ ರವಿಕುಮಾರ್, ನಂಜುಂಡಸ್ವಾಮಿ, ವಾಜಮಂಗಲ ಮಹದೇವು, ನಾಗೇಂದ್ರ.ಪಿ, ಪುಟ್ಟೇಗೌಡನಹುಂಡಿ ರಾಜು, ಮಾಸ್ಟರ್ ಶಿವಶಂಕರ್, ವರಕೋಡು ಜಯರಾಮ್, ಬಾಲು ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಜಾಹೀರಾತು ಕ್ಷೇತ್ರದ ದಂತಕತೆ, ಪದ್ಮಶ್ರೀ ಪುರಸ್ಕೃತ ಪಿಯೂಷ್ ಪಾಂಡೆ ನಿಧನ



ಮುಂಬಯಿ: ಭಾರತೀಯ ಜಾಹೀರಾತು ಕ್ಷೇತ್ರದ ವಾಸ್ತು ಶಿಲ್ಪಿ ಎಂದೇ ಕರೆಯಲ್ಪಡುವ ಪದ್ಮಶ್ರೀ ಪುರಸ್ಕೃತ ಪಿಯೂಷ್ ಪಾಂಡೆ ಗುರುವಾರ ನಿಧನರಾದರು.

70 ವರ್ಷ ವಯಸ್ಸಿನ ಪಾಂಡೆ ಸೋಂಕಿನಿಂದ ಬಳಲುತ್ತಿದ್ದರು. ಅವರ ಅಂತ್ಯಕ್ರಿಯೆ ಶನಿವಾರ (ಅ.25) ನಡೆಯಲಿದೆ. ಫೆವಿಕಾಲ್ ಹಾಗೂ ವೊಡಾಫೋನ್ ಜಾಹೀರಾತುಗಳಿಗೆ ಹೆಸರುವಾಸಿಯಾದ ಪಾಂಡೆ ಅವರು ಭಾರತದ ಜಾಹೀರಾತು ಕ್ಷೇತ್ರದ ಮುಂಚೂಣಿ ವ್ಯಕ್ತಿಗಳಲ್ಲಿ ಒಬ್ಬರು. ಅವರು ಒಗಿಲ್ವಿ ಇಂಡಿಯಾ ಕಂಪೆನಿಯ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿ ಮತ್ತು ವರ್ಲ್ಡ್ ವೈಡ್ ಚೀಫ್ ಕ್ರಿಯೇಟಿವ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

ಕ್ಯಾಡ್ಬರಿಯ ಕುಚ್ ಖಾಸ್ ಹೈ, ಏಷಿಯನ್ ಪೇಂಟ್ಸ್‌ನ "ಹರ್ ಖುಷಿ ಮೇ ರಂಗ್ ಲಾಯೆ ಜಾಹೀರಾತಿನಿಂದ ವೊಡಾಫೋನ್ ಜಾಹೀರಾತಿನವರೆಗೆ ಅವರ ಜಾಹೀರಾತುಗಳು ಜನಮನದಲ್ಲಿ ಅಚ್ಚಳಿಯದಂತೆ ಉಳಿದಿವೆ.

2014ರ ಲೋಕಸಭೆ ಚುನಾವಣೆಗೆ ಪ್ರಧಾನಿ ನರೇಂದ್ರ ಮೋದಿಯವರಿಗಾಗಿ ರಚಿಸಿದ ‘ಅಬ್ ಕಿ ಬಾರ್, ಮೋದಿ ಸರಕಾರ್’ ಘೋಷಣೆಯು ರಾಜಕೀಯ ಕ್ಷೇತ್ರದಲ್ಲೂ ಬಹಳ ಪ್ರಸಿದ್ಧಿ ಪಡೆದಿದೆ.

ಪಾಂಡೆ ಅವರ ನಿಧನಕ್ಕೆ ಕೇಂದ್ರ ಸಚಿವ ಪಿಯೂಷ್ ಗೋಯಲ್ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದ್ದಾರೆ. ಆರು ವರ್ಷಗಳ ನಂತರ, ಅವರು ಕಂಪನಿಯ ಸೃಜನಶೀಲ ವಿಭಾಗಕ್ಕೆ ಸೇರಿಕೊಂಡರು. ಫೆವಿಕಾಲ್, ಕ್ಯಾಡ್‌ಬರಿ, ಏಷ್ಯನ್ ಪೇಂಟ್ಸ್, ಲೂನಾ ಮೊಪೆಡ್, ಫಾರ್ಚೂನ್ ಆಯಿಲ್ ಮತ್ತು ಹಲವಾರು ಇತರ ಬ್ರಾಂಡ್‌ಗಳಿಗೆ ಗಮನಾರ್ಹ ಜಾಹೀರಾತು ರಚಿಸಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಡ್ಯೂಡ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ತಮ್ಮ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಬೈಸನ್ (ತ)	4 ಪ್ರದರ್ಶನಗಳು
ಸಂಗಂ	
ಗ್ರೀನ್ (ಕ) + ಗಿಲ್‌ಮಾಲ್ (ಕ)	2+2 ಪ್ರದರ್ಶನಗಳು
ಲಿಡೋ	
ತಮ್ಮ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಬಿಳಿಚುಕ್ಕಿ ಹಳ್ಳಿಹಕ್ಕಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಬೆ.10.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

- **ಕಾಂತಾರ ಚಾಪ್ಟರ್ 1(ಕ) :** ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
- **ಕಾಂತಾರ ಚಾಪ್ಟರ್ 1(ಹಿ):** ಬೆ: 9.10ಕ್ಕೆ, ಮ.3.10ಕ್ಕೆ.
- **ಡ್ಯೂಡ್ (ತ):** ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
- **ಟೈಮ್ ಪಾಸ್ (ಕ):** ಬೆ: 11.15ಕ್ಕೆ
- **ತೆಲುಸು ಕಾದಾ (ತೆ):** ಮ: 12.20ಕ್ಕೆ, ರಾತ್ರಿ 7.20ಕ್ಕೆ
- **ಬೈಸನ್ ಕಾಳಮಂದಾನ್ (ತ):** ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
- **ಡೀಸೆಲ್ (ತ):** ಮ: 1.40ಕ್ಕೆ
- **ಮಹಾಯೋಧ ರಾಮ (ಹಿ):** ಮ: 1.50ಕ್ಕೆ
- **ಕೆ–ರ್‍ಯಾಂಪ್ (ತೆ):** ಸಂ: 4.15ಕ್ಕೆ, ರಾ: 10.10ಕ್ಕೆ
- **ಮಿತ್ರ ಮಂಡಳಿ (ತೆ):** ಸಂ: 4.40ಕ್ಕೆ
- **ಗುಡ್ ಫಾರ್ಚ್ಯೂನ್ (ಇ):** ಸಂ: 7.30ಕ್ಕೆ

ಗರುಡ ಮಾಲ್

- **ಕಾಂತಾರ ಚಾಪ್ಟರ್ 1(ಕ) :** ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
- **ಪ್ರೇಮಿಗಳ ಗಮನಕ್ಕೆ (ಕ):** ಬೆ: 11.05ಕ್ಕೆ
- **ಡ್ಯೂಡ್ (ತ):** ಮ: 12.50ಕ್ಕೆ, ರಾ: 7.10ಕ್ಕೆ
- **ಟೈಮ್ ಪಾಸ್ (ಕ):** ಮ: 1.50ಕ್ಕೆ
- **ಬೈಸನ್ ಕಾಳಮಂದಾನ್ (ತ):** ಮ: 3.40ಕ್ಕೆ, ರಾ.10.05ಕ್ಕೆ
- **ತೆಲುಸು ಕಾದಾ (ತೆ):** ಮ: 4.30ಕ್ಕೆ
- **ಕೆ–ರ್‍ಯಾಂಪ್ (ತೆ):** ರಾ: 7.20ಕ್ಕೆ
- **ಮಿತ್ರ ಮಂಡಳಿ (ತೆ):** ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಮಾನ್ಸೂನ್ ರೇಸ್

14ನೇ ದಿನ, ಶನಿವಾರ, 25–10–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. **ಹಸ್ತಿನಾಪುರ್ ಪ್ಲೇಟ್** –1400 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). **ಮ.1.30ಕ್ಕೆ**
1 ಅಲ್ಲೂರಿಂಗ್ ಬ್ಯೂಟಿ 2. ಜಂಟಲ್ ಮೆನ್ಸ್ ವರ್ಡ್

II. **ಶ್ರೀ ಸಿ. ಶಶಾಚಲಂ ಮೆಮೋರಿಯಲ್ ಟ್ರೋಫಿ** –1400 ಮೀ. ರೇಟೆಡ್ 20 ರಿಂದ 45. **ಮ.2.00ಕ್ಕೆ**
1. ಡಬ್ಬಲ್ ವಿಷನ್ 2. ಜಸ್ಟ್‌ಬೂಸ್

III. **ಆರ್.ಎಂ. ಪುಟ್ಟಣ್ಣ ಮೆಮೋರಿಯಲ್ ಟ್ರೋಫಿ** –1200 ಮೀ. 3 ವರ್ಷ (ಟರ್ಮ್ಸ್) **ಮ.2.30ಕ್ಕೆ**
1. ದಿ ಒನ್ ಅಂಡ್ ಓನ್ಲಿ 2. ಸೂಪರ್‌ನಲ್

IV. **ಕೆ.ಟಿ. ಶ್ಯಾಮಯ್ಯಗೌಡ ಮೆಮೋರಿಯಲ್ ಟ್ರೋಫಿ** –1400 ಮೀ. ರೇಟೆಡ್ 40 ರಿಂದ 65. **ಮ.3.00ಕ್ಕೆ**
1 ಲಿಟಲ್ ಮಿನಿಸ್ಟರ್ 2 ಕ್ಲಿಂಟ್

V. **H.P. ವಿಶ್ವನಾಥನ್ ಮೆಮೋರಿಯಲ್ ಟ್ರೋಫಿ** –1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. **ಮ.3.30ಕ್ಕೆ**
1. ಡಿವೈನ್ ಆರ್ಟ್ 2. ಫಾರ್‌ಸೆಟಿ

VI. **ಮೈಸೂರ್ ರೇಸ್ ಕ್ಲಬ್ ಆ್ಯನಿವರ್‌ಸರಿ ಕಪ್** –1400 ಮೀ. 3 ವರ್ಷ (ಟರ್ಮ್ಸ್). **ಸಂ.4.00ಕ್ಕೆ**
1 ಸ್ಯೆಜಿ ಕರೇಜಸ್ 2. ಶಾಮ್‌ರಾಕ್

VII. **ಬೊಟ್ಟೋಲಾಂದಮಿಟ್ಟ್ ಚೆಂಗಪ್ಪ ಮೆಮೋರಿಯಲ್ ಟ್ರೋಫಿ**–1600ಮೀ. ರೇಟೆಡ್ 40 ಮತ್ತು 65. **ಸಂ.4.30ಕ್ಕೆ**
1 ಅನಿಗ್ರಹ 2 ಬ್ಲೂ ಆರಿಜನ್

VIII. **ಶರಣ್ ಲಕ್ಷ್ಮಣನ್ ಮೆಮೋರಿಯಲ್ ಟ್ರೋಫಿ** –1200 ಮೀ. ರೇಟೆಡ್ 20 ರಿಂದ 45 (ಮೈಸೂರು ಬೇಸ್ಡ್ ಹಾರ್ಸ್). **ಸಂ.5.00ಕ್ಕೆ**
1 ಫ್ಯಾಷನಿಸ್ಟ್ 2 ಧಿಯಾ

ದಿನದ ಅತ್ಯುತ್ತಮ	ಸ್ಯೆಜಿಕರೇಜಸ್
ಡಬ್ಬಲ್	ಲಿಟಲ್ ಮಿನಿಸ್ಟರ್, ಡಿವೈನ್ ಆರ್ಟ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್‌ಸ್ಟರ್ ಪಿಜಿಸಿ


ಯುವ ಮುಖಂಡರು ಹಾಗೂ ಸಮಾಜ ಸೇವಕರಾದ
ಸಂತೋಷ್ (ಶಂಭು) ಹಾಗೂ ಮನು ಶೈವ್
ರವರಿಗೆ
ಜನ್ಮ ದಿನದ
ಶುಭಾಶಯಗಳು